


ಸಂಪುಟ ೭

ಸಂಚಿಕೆ ೧

ಮೇ ೧೯೪೧



ವಿಶ್ವಧರ್ಮ ಪ್ರವಚನ ಆರಂಭೋತ್ಸವ

ಎಡದಿಂದ ಬಲಕ್ಕೆ: ಎಸ್. ಎಂ. ಕೆ. ಸೋಗಿ, ಡಿ. ಪಿ. ಬಿ. ಎ. ರಾಮಕೃಷ್ಣರಾವ್, ಪೂಜ್ಯ ಮಾತಾಜಿ, ಶ್ರೀ ಮ.ನಿ.ಪ್ರ. ಶಿವಮೂರ್ತಿ ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು

ಕಲ್ಯಾಣ ಕಿರಣ

ಸಂಪುಟ ೭ | ಮೇ 1981, ಬಸವ ಶಕೆ 842 | ಸಂಚಿಕೆ ೧

ನುಡಿ ನೈವೇದ್ಯ : **ಬಸವ ಚರಣಕೆ**

ಕನ್ನಡದ ಕುಲಪುರುಷ ಚಿನ್ಮಯದ ನಡೆ ಪರುಷ
ಉನ್ನತೋನ್ನತ ಮಹಿಮ ಬಸವೇಶನೆ....ಬಸವೇಶನೆ ॥ ಪ ॥

ಬೆಂಡಾಗಿ ಬಸವಳಿದು ಬಾಯಾರಿ ನಿಂದಿಹ
ಭುವಿಯ ತಣಿಸುವ ವರ್ಷಧಾರೆಯಂತೆ
ಜಾತೀಯತೆ ದಗೆಯಲ್ಲಿ ನೊಂದು ನಿಟ್ಟುಸಿರಿಟ್ಟ
ದೀನದಲಿತರ ಭಾಗ್ಯ ನೀನಾದೆಯಾ । ॥ ೧ ॥

ನೂರಾರು ವರ್ಷಗಳಿಂ ದಮನವದು ನಡೆದಿರಲು
ಧರ್ಮ ದೇವರು ಇರದೆ ಹೀನಕುಲ ನೊಂದಿರಲು
ಅಚ್ಚ ಕನ್ನಡದಲ್ಲಿ ಜ್ಞಾನಗಂಗೆಯ ಹರಿಸಿ
ಎಚ್ಚರಿಸಿ ಸಲಹಿದ ವಚನ ಭಗೀರಥಾ ॥ ೨ ॥

ಜಾತಿ ಭೇದವ ಹಳಿದು ನೀತಿ ಸೂತ್ರವ ಹಿಡಿದು
ಜ್ಯೋತಿಯಾಗಿಯೆ ಬಾಳ್ದ ಮಹಮಹಿಮನೆ
ಮಾತಿನ ಮೌಕ್ತಿಕವ ಭರತ ಮಾತೆಗೆ ತೊಡಿಸಿ
ಕ್ರಾಂತಿದೂತನೆ ಆದ ಶಿವನ ಭಾಂಡಾರವೇ ॥ ೩ ॥

ದಯವೆ ಧರ್ಮದ ಮೂಲ ಮರ್ತ್ಯವೇ ಶಿವಲೋಕ
ಕಾಯಕದ ಮಂತ್ರವೇ ಲೋಕದೇಳ್ಗೆಯ ತಂತ್ರ
ಎಂದೆನುತ ನೀ ಸಾರಿ ವಿಶ್ವಧರ್ಮವ ನೀಡಿ
ಭುವನದಾ ಭಾಗ್ಯವೇ ನೀನಾದೆಯೈ ನೀನಾದೆಯೈ ॥ ೪ ॥

—ಜಗದ್ಗುರು ಮಾತೆ ಮಹಾದೇವಿ

ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬   ಆಜೀವ ಸದಸ್ಯತ್ವ ೧೫೧ ರೂ

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಮುಖಪುಟ : ವಿಶ್ವವಿಭೂತಿ ಬಸವಣ್ಣನವರು

ಹಿಂಬದಿ ಚಿತ್ರ : ಬಸವ ಗಂಗೋತ್ರಿಯ ಮಹಾದ್ವಾರ



ಬಸವ ಜಯಂತಿ ಸಾರ್ವತ್ರಿಕ ರಜೆ

ಮುಖ್ಯಮಂತ್ರಿಗಳಾದ ಸನ್ಮಾನ್ಯ ಗುಂಡೂರಾಯರಿಗೆ ಕನ್ನಡಿಗರ ಪರವಾಗಿ ಕೃತಜ್ಞತೆ

ಮೇ ಆರರಂದು ಬಸವ ಜಯಂತಿ. ಮೊಟ್ಟ ಮೊದಲ ಬಾರಿಗೆ ಸಾರ್ವಜನಿಕ ರಜಾದಿನ. ಇಂಥದೊಂದು ಘೋಷಣೆ ಮಾಡಿದ ಶ್ರೇಯಸ್ಸು ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಗುಂಡೂರಾಯರಿಗೆ ಸಲ್ಲುತ್ತದೆ. ಹಲವಾರು ಮುಖ್ಯಮಂತ್ರಿಗಳು ಆಳಿ ಹೋದರೂ ಕನ್ನಡ ಕುಲಪುರುಷ, ಜಗತ್ತಿನ ಮೊಟ್ಟಮೊದಲ ಸಮತಾವಾದಿಗೆ ಸಾರ್ವ ಜನಿಕ ರಜೆ ನೀಡಿ, ಗೌರವ ಸಲ್ಲಿಸಿ ಕೀರ್ತಿಶಾಲಿಗಳಾದವರು ಕರ್ನಾಟಕದ ಮುಖ್ಯ ಮಂತ್ರಿಗಳಾದ ಶ್ರೀ ಗುಂಡೂರಾಯರು. ಅವರಿಗೆ ಕನ್ನಡಿಗರ ಅನೇಕ ಅಭಿನಂದನೆ.

ಇತಿಹಾಸವನ್ನು ಬರೆಯುವುದು ದೊಡ್ಡದಲ್ಲ, ನಿರ್ಮಾಣ ಮಾಡುವುದು ದೊಡ್ಡದು. ನಾಡಿನ ಇತಿಹಾಸವನ್ನು ನಿರ್ಮಿಸುವ ಯೋಗಿಗಳು, ತ್ಯಾಗಿಗಳನ್ನು, ಜಾಗತಿಕ ವಲಯದಲ್ಲಿ ಅತ್ಯುನ್ನತ ಸೇವೆಗೈದ ವಿಶ್ವಮಾನವರನ್ನು, ಮಹೋನ್ನತ ಸಂದೇಶಗಳನ್ನು ಕೊಟ್ಟು ಸೂಕ್ತಮಾರ್ಗದರ್ಶಕ ದಾರಿದೀಪಗಳನ್ನು ತಮ್ಮ ಹಿಂದೆ ಉಳಿಸಿ ಹೋಗುವ ಮಹಾಂತರನ್ನು ಗೌರವಿಸಲು ಹಲವು ವಿಧಾನಗಳುಂಟು. ಅವರ ಹೆಸರಿನಲ್ಲಿ ರಾಷ್ಟ್ರೀಯ ಸ್ಮಾರಕಗಳ ನಿರ್ಮಾಣ, ವಸ್ತುಸಂಗ್ರಹಾಲಯಗಳ ರಚನೆ, ಸಾರ್ವತ್ರಿಕ ರಜೆ ಘೋಷಣೆ, ಅಂಚೆ ಚೀಟಿ ಪ್ರಕಟಣೆ ಇವೇ ಮುಂತಾದುವುಗಳು.

ಸಾರ್ವತ್ರಿಕ ರಜೆಯನ್ನು ಮಹಾತ್ಮರ ಜಯಂತಿಗೆ ಘೋಷಿಸುವುದರಿಂದ ಅನೇಕ ಸತ್ಪರಿಣಾಮಗಳಿವೆ. ೧. ನಮ್ಮ ನಾಡು–ನುಡಿಗಳ ಇತಿಹಾಸದಲ್ಲಿ ಇಂತಹ ಘನ ವಂತರು ಆಗಿ ಹೋಗಿದ್ದಾರೆ ಎಂಬುದನ್ನು ಪ್ರಜಾಕೋಟಿಗೆ ಪರಿಚಯ ಮಾಡಿಕೊಟ್ಟಂತೆ

ಆಗುತ್ತದೆ. ೨. ಆ ಮಹಿಮಾನ್ವಿತರು ನಮಗಾಗಿ ಬಾಳಿ, ತ್ಯಾಗಪೂರ್ಣ ಚಂದನದಂತೆ ಸವೆದು ಹೋದುದಕ್ಕೆ ಕೃತಜ್ಞತೆಯ ಸಮರ್ಪಣೆ ಮಾಡಿದಂತೆ ಆಗುತ್ತದೆ. ೩. ಮಹಾತ್ಮರ ಹೆಸರನ್ನು ಸ್ಮರಿಸಿಕೊಂಡು ಅಂದು ಅವರ ತತ್ತ್ವಗಳನ್ನು ಅರಿತುಕೊಳ್ಳುತ್ತಾ, ಅವರ ಬದುಕನ್ನು ಪಾರಾಯಣ ಮಾಡುತ್ತ ಜಯಂತಿಯನ್ನು ಆಚರಿಸಲು ಅನುಯಾಯಿಗಳಿಗೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ಜಯಂತಿಗೆ ಸಾರ್ವತ್ರಿಕ ರಜೆ ಕೊಡುವುದು ಸತ್ಸಂಪ್ರದಾಯ.

ಪ್ರಗತಿಪರ ಸಮಾಜ ಸುಧಾರಕ ಬಸವಣ್ಣ

ನಮ್ಮ ಕರ್ನಾಟಕ ಸರ್ಕಾರವು ಸ್ವಾತಂತ್ರ್ಯಾನಂತರ ಮೂರು ದಶಕಗಳ ಕಾಲ ಆಳಿದ್ದರೂ ಕನ್ನಡನಾಡಿನ ಕುಲಪುರುಷ ಬಸವಣ್ಣನವರ ಹೆಸರಿನಲ್ಲಿ ಒಂದು ಸಾರ್ವತ್ರಿಕ ರಜೆ ಮಂಜೂರು ಮಾಡುವ ಮನಸ್ಸು ಮಾಡಿರಲಿಲ್ಲ, ಧೈರ್ಯ ತಾಳಿರಲಿಲ್ಲ, ಸೌಜನ್ಯ ತೋರಿರಲಿಲ್ಲ. ಕರ್ನಾಟಕದೊಡನೆ ಅವಿಭಾಜ್ಯ, ಅವಿನಾಭಾವ ಸಂಬಂಧ ಹೊಂದಿ ಸಾಹಿತ್ಯ-ಕ್ರಾಂತಿಗಳ ಮೂಲಕ ತಾಯಿ ಭಾರತಿಯ ಕಿರೀಟದಂತೆ ಪರಮೋಚ್ಚ ಸ್ಥಾನಕ್ಕೆ ಕನ್ನಡನಾಡನ್ನು ಏರಿಸಿದ ವಿಶ್ವಗುರು ಬಸವಣ್ಣನವರು ಕರ್ನಾಟಕದ ಜನತೆಯ ಕಣ್ಣಿಗೆ ಕಾಣದಷ್ಟು ಸಣ್ಣವರೆ? ಎಂಬ ನೋವು ಅನೇಕರಿಗೆ ಇದ್ದಿತು.

"ಕರ್ನಾಟಕದಲ್ಲಿ, ಭಾರತದಲ್ಲಿ ಅನೇಕ ಸಾಧು-ಸಂತರು ಆಗಿ ಹೋಗಿದ್ದಾರೆ. ಅವರೆಲ್ಲರ ಜಯಂತಿಗಳಿಗೆ ರಜೆಕೊಡುತ್ತಾ ಹೋದರೆ ವರ್ಷವಿಡೀ ಕೊಡಬೇಕಾದೀತು" ಎಂದು ಕೆಲವರು ಆಕ್ಷೇಪಿಸುತ್ತಲಿದ್ದರು. ಎಲ್ಲರ ಸಾಲಿನಲ್ಲಿ ಎಲ್ಲರನ್ನೂ ಸೇರಿಸಬಾರದು. ಬಸವಣ್ಣನವರಂಥ ಮಹಾ ಪ್ರವಾದಿಯೋರ್ವನನ್ನು ಕನ್ನಡ ನಾಡು ಅಥವಾ ಭರತ ಭೂಮಿಯಲ್ಲಿ ಹುಡುಕಲು ಸಾಧ್ಯವೇ? "Whatever legend may say about Basava, the fact is fully clear that he is the first Indian free thinker. He can be called the Martin Luther of India" ಎಂದು ಆರ್ಥರ್ ಮೈಲ್ಸ್ ಅಷ್ಟಲ್ಲದೆ ಹೇಳುವರೆ? 1918 ಬಸವ ಜಯಂತಿಯಂದು ಮುಂಬೈಯ Times of India ಪತ್ರಿಕೆ ಬರೆದ ಸಂಪಾದಕೀಯ ಬಸವಣ್ಣನ ಬಗ್ಗೆ ನಿದ್ರಿಸುವ ಭಾರತೀಯರನ್ನು ಬಡಿದೆಬ್ಬಿಸುವಂತಿದೆ. ಸರ್ ಜೇಮ್ಸ್ ಕ್ಯಾಂಪ್‌ಬೆಲ್ಲರು ಹೀಗೆ ಬರೆಯುತ್ತಾರೆ:

"ಬಸವಣ್ಣನವರಿಗಿಂತಲೂ ಪೂರ್ವದ ಧಾರ್ಮಿಕ ಹಾಗೂ ಸಮಾಜ ಸುಧಾರಕರು ಧಾರ್ಮಿಕ, ಸಾಮಾಜಿಕ ಮುಂತಾದ ಒಂದೊಂದು ಬಗೆಯ ಸುಧಾರಣೆಗಳತ್ತ ಗಮನ ಹರಿಸಿದರು; ಇಲ್ಲವೇ ಒಂದಕ್ಕೆ ಪ್ರಾಮುಖ್ಯ ಸ್ಥಾನ ನೀಡಿ ಮತ್ತೊಂದನ್ನು ಗೌಣವಾಗಿ ಮಾಡಿದರು; ಕೆಲವೊಮ್ಮೆ ಕೆಲವು ಅಂಶಗಳನ್ನು ಪೂರ್ಣವಾಗಿ ಕಡೆಗಣಿಸಿದರು. ಬಸವಣ್ಣನವರ ವೈಶಿಷ್ಟ್ಯವೆಂದರೆ ಅವರು ಅತ್ಯಂತ ಬೃಹತ್ತಾದ ಮತ್ತು ಸರ್ವಾಂಗ

ಪರಿಪೂರ್ಣ ಕಾರ್ಯಕ್ರಮವನ್ನು, ಸುಧಾರಣೆಯನ್ನು ಹಮ್ಮಿಕೊಂಡರು. ಮಹಿಳೆಯರ ಸ್ವಾತಂತ್ರ್ಯ, ಸಮಾನತೆ ಮತ್ತು ಉತ್ಥಾನವನ್ನು ಪ್ರಮುಖ ಧ್ಯೇಯವಾಗಿರಿಸಿಕೊಂಡರು. ಭಾರತದ ಅನೇಕ ಭಾಗಗಳಲ್ಲಿ ಸಮಾಜಾಭಿವೃದ್ಧಿಗಾಗಿ ಈಗ ಕೈಗೊಳ್ಳುವ ವಾರ್ಷಿಕ ಸಮ್ಮೇಳನಗಳಾಗಲೀ, ಅಥವಾ ಸುಧಾರಕರ ಪ್ರಯತ್ನಗಳಾಗಲೀ ಬಸವಣ್ಣನವರಿಗಿಂತ ಒಂದು ಹೆಜ್ಜೆ ಮುಂದೆ ಹೋಗಲಾರವು. ಇಂದಿನ ಯಾವುದೇ ಭಾರತೀಯ ಸಮಾಜ ಸುಧಾರಕರು ಅಂದು ಬಸವಣ್ಣನವರು ನುಡಿದ ತತ್ತ್ವಗಳನ್ನು, ಆಚರಣೆಗೆ ತಂದ ಆದರ್ಶಗಳನ್ನು ಅನುಷ್ಠಾನಕ್ಕೆ ತರಲೆಳಸಿದರೆ ಸಾಕು."

ಅಖಂಡ ಭಾರತದಲ್ಲೇ ಬಸವಣ್ಣನವರಂಥ ವ್ಯಾಪಕ ಸುಧಾರಣಾ ಯೋಜನೆ ಕೈಗೊಂಡ ಸಂತ-ಸುಧಾರಕ ಮತ್ತೊಬ್ಬನಿಲ್ಲ. ಪಾಶ್ಚಾತ್ಯ ವಿಚಾರ ಧಾರೆಗಳ ಪ್ರಭಾವ ಕ್ಕೊಳಗಾಗಿ ಅಷ್ಟಿಷ್ಟು ಸುಧಾರಣೆ ಕೈಗೊಂಡವರು ಇತ್ತೀಚಿನ ಶತಮಾನಗಳಲ್ಲಿ ದೊರೆಯಬಹುದು. ಆದರೆ ಯಾವುದೇ ಅನ್ಯಧರ್ಮ-ಸಂಸ್ಕೃತಿಗಳ ಪ್ರಭಾವವು ಸೋಂಕದ ಕಾಲದಲ್ಲೇ, ೮೦೦ ವರ್ಷಗಳ ಹಿಂದೆಯೇ, ಬಸವಣ್ಣನವರು ಪ್ರಗತಿಪರ ವಿಚಾರಧಾರೆಯಲ್ಲಿ ಮುನ್ನಡೆದಿರುವುದು ಅವರ ತೀಕ್ಷ್ಣ ಬುದ್ಧಿಮತ್ತೆಯನ್ನು, ಸಮಾಜದ ಬಗ್ಗೆ ಅವರಲ್ಲಿ ಇರುವ ಅಪಾರ ಕಳಕಳಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಆದ್ದರಿಂದ ಸಮಾಜವಾದ, ಸಮತಾವಾದಗಳ ಬಗ್ಗೆ ಅಚಲ ವಿಶ್ವಾಸ ತಾಳಿರುವ ಸರ್ಕಾರವು ಭಾರತೀಯ ಸಮತಾವಾದದ ಆದ್ಯನಾದ ಬಸವಣ್ಣನ ಬಗ್ಗೆ ಗೌರವ ಸಲ್ಲಿಸಿರುವುದು ಸ್ತುತ್ಯಾರ್ಹವಾಗಿದೆ. ಅದಕ್ಕಾಗಿ ಮುಖ್ಯಮಂತ್ರಿಗಳಾದ ಶ್ರೀ ಗುಂಡೂರಾವ್‌ರವರು ಅಭಿನಂದನಾರ್ಹರಾಗಿದ್ದಾರೆ. ವಿಶ್ವಗುರು ಬಸವಣ್ಣನವರು ಅವರಿಗೆ ಆಯುರಾರೋಗ್ಯ ಕೀರ್ತಿ ಸಂಪದವನ್ನು ಕೊಡಲೆಂದು ಹಾರೈಸುತ್ತೇವೆ.

ಗಳಿಸಿದ್ದಾಯಿತು; ಬಳಕೆ ಹೇಗೆ?

ಕಷ್ಟಪಟ್ಟು ಸ್ವಾತಂತ್ರ್ಯಗಳಿಸಿಕೊಂಡೆವು. ಆದರೆ ಅದರ ಬಳಕೆ ಸರಿಯಾಗಿ ಆಗದಿರುವುದು ಎಂಥ ದುರ್ದೈವದ ಸಂಗತಿಯೋ ಅಂಥದನ್ನೇ ನಾವು ಮತ್ತೆ ಎದುರಿಸಬಾರದು ಈ ವಿಷಯದಲ್ಲಿಯೂ! ಸಾರ್ವಜನಿಕ ರಜೆ ಸಿಕ್ಕಿತೆಂದು ಮಾರ್ನಿಂಗ್ ಷೋದಿಂದ ರಾತ್ರಿ ಷೋ ಸೇರಿಸಿ ಸಿನಿಮಾ ನೋಡುವುದರಿಂದಲೋ, ರಸ್ತೆಗಳಲ್ಲಿ ಪಿರಿಪಿರಿ ತಿರುಗುವುದರಿಂದಲೋ ರಜೆಯ ಸಾರ್ಥಕತೆ ಸಾಧಿಸದು. ಹಾಗೆ ಮಾಡಿದರೆ 'ಕಾಯಕವೇ ಕೈಲಾಸ' ಎಂದು ಸಾರಿದ ಆ ಕ್ರಿಯಾಶೀಲನ ಜನ್ಮದಿನದಂದು ರಾಷ್ಟ್ರೀಯ ಉತ್ಪಾದನೆ ಕುಂಠಿತಗೊಳಿಸಿದ್ದೊಂದೇ ಸಾಧನೆಯಾದಂತಾಗುವುದು. ಹೇಗೆ ಆಚರಿಸಬಹುದು?

ಧಾರ್ಮಿಕವಾಗಿ, ಸಾಮಾಜಿಕವಾಗಿ, ಸೇವಾ ಪ್ರಧಾನವಾಗಿ ಆಚರಿಸಬೇಕು.

ಸುಪ್ರಭಾತದಲ್ಲಿ ಎದ್ದು ಮನೆಯವರೆಲ್ಲ ಮಿಂದು ಮಡಿಯುಟ್ಟು, ಒಂದು ವಿಶಾಲವಾದ ಕೋಣೆಯಲ್ಲಿ ಎತ್ತರವಾದ ಪೀಠದ ಮೇಲೆ ಬಸವಣ್ಣನವರ ಭಾವಚಿತ್ರವನ್ನಿಟ್ಟು ಪೂಜಿಸಿ, ಅಲಂಕರಿಸಬೇಕು. ಎಲ್ಲರೂ ಸಾಮೂಹಿಕವಾಗಿ ಪ್ರಾರ್ಥನೆ ಸಲ್ಲಿಸಿ, ಬಸವಣ್ಣನವರ 108 ನಾಮಾವಳಿ ಅಥವಾ ಗುರುಸ್ತುತಿಯನ್ನು ಹಾಡಬೇಕು. ಅಂದು ಬಸವಣ್ಣನವರ ವಚನಗಳನ್ನು ಪಾರಾಯಣ ಮಾಡಬೇಕು. ನಂತರ ಮಂಗಲಾರತಿ ಮಾಡಿ, ಪ್ರಸಾದ ವಿತರಣೆ ಮಾಡಬೇಕು.

ಅಂಗಡಿ, ವ್ಯಾಪಾರ, ಉದ್ಯಮ, ನರ್ಸಿಂಗ್ ಹೋಮ್ – ಮುಂತಾದವು ಇದ್ದವರು ಅಲ್ಲಿ ದೊಡ್ಡ ಭಾವಚಿತ್ರವನ್ನಿಟ್ಟು, ಅಲಂಕರಿಸಿ ಪೂಜಿಸಬೇಕು. ತಮ್ಮ ಸುತ್ತಲಿನವರನ್ನು, ಸ್ನೇಹಿತರನ್ನು ಆಹ್ವಾನಿಸಿ, ತಾಂಬೂಲದ ಬದಲಿಗೆ ಸಣ್ಣ ವಚನ ಗ್ರಂಥಗಳನ್ನು ವಿತರಣೆ ಮಾಡಬೇಕು. ಅಥವಾ ಶರಣರನ್ನು ಕುರಿತು ಬರೆದ ಸಣ್ಣ ಸಣ್ಣ ಹೊತ್ತಿಗೆಗಳ ವಿತರಣೆಯನ್ನೂ ಮಾಡಬಹುದು. ದಾಸೋಹಂ ಭಾವದಿಂದ ಬಡವಿದ್ಯಾರ್ಥಿಗಳಿಗೆ ಶಾಲೆಯ ಫೀಸನ್ನು ಪಠ್ಯ ಪುಸ್ತಕಗಳನ್ನು ಕೊಡಿಸಬಹುದು. ಉಡುವ ವಸ್ತ್ರಗಳನ್ನು ಬಡಬಗ್ಗರಿಗೆ ಹಂಚಬೇಕು. ವೈದ್ಯರು ಉಚಿತವಾಗಿ ಬಡವರಿಗೆ ಚಿಕಿತ್ಸೆ ಮಾಡುವುದನ್ನು ಅಥವಾ ಔಷಧಿಗಳ ಮೂಲಬೆಲೆ ಮಾತ್ರ ಪಡೆದು ಸುಲಭ ದರದಲ್ಲಿ ಹಂಚುವುದನ್ನು ಅಳವಡಿಸಿಕೊಳ್ಳಬೇಕು.

ಸಾರ್ವಜನಿಕವಾಗಿ ಆಚರಣೆ ಮಾಡುವಾಗ ಪ್ರಬಂಧ ಸ್ಪರ್ಧೆ, ವಚನಸ್ಪರ್ಧೆಗಳನ್ನು ಇಡುವುದರ ಮೂಲಕ, ಪ್ರಬೋಧಕ ವಿಷಯಗಳನ್ನು ಭಾಷಣ ಮುಖಾಂತರ ಕೇಳುವ ಮೂಲಕ ಬಸವಣ್ಣನವರ ತತ್ತ್ವಜ್ಞಾನವನ್ನು ಕುರಿತು ಚಿಂತಿಸಬೇಕು. ಅಲ್ಲಲ್ಲೇ ನಡೆಯುವ ಜಯಂತಿ ಉತ್ಸವಗಳ ಸೇವಾ ಕಾರ್ಯದಲ್ಲಿ ತರುಣರು ಭಾಗಿಗಳಾಗಿ ಸ್ವಯಂ ಸೇವಕರಾಗಿ ಕೆಲಸ ಮಾಡಬೇಕು. ಸಾರ್ವಜನಿಕರು ಮೆರವಣಿಗೆಗಳನ್ನು ಏರ್ಪಡಿಸಬೇಕು. ಆದರೆ ಅವು ಸರಳವಾಗಿ, ಭಕ್ತಿಪೂರ್ಣವಾಗಿ, ಆದರ್ಶವಾಗಿ ಇರಬೇಕು. ಮದ್ದುಗುಂಡು ಬಿರುಸುಬಾಣ ಹಾರಿಸಿ ಹಣವನ್ನು ವ್ಯರ್ಥ ಮಾಡದೆ ಶಾಂತಿಯಿಂದ ಸಾಗಬೇಕು. ಎಲ್ಲರೂ ತಪ್ಪದೆ ಮೆರವಣಿಗೆಗಳಲ್ಲಿ ಭಾಗಿಗಳಾಗಬೇಕು. ಇದೊಂದು ಪರಮ ಪವಿತ್ರ ಕರ್ತವ್ಯ ಎಂದರಿಯಬೇಕು.

ಅಂತೂ ಬಸವ ಜಯಂತಿಯನ್ನು ತಾತ್ತ್ವಿಕವಾಗಿ,ಸರಳವಾಗಿ, ಅರ್ಥಪೂರ್ಣವಾಗಿ, ಆದರ್ಶಮಯವಾಗಿ ಆಚರಿಸಲ್ಪಡುವ ಪರಿಪಾಠವನ್ನು ಬೆಳೆಸಿಕೊಳ್ಳಬೇಕೆಂದು ಆಶಿಸುವೆವು, ಬಸವ ಜಯಂತಿಯ ಶುಭಹಾರೈಕೆ ಸಲ್ಲಿಸುವೆವು.

ಮಾತೆ ಮಹಾದೇವಿ

ವಿಶ್ವಜ್ಯೋತಿ ಬಸವಣ್ಣ

—ತ್ರಿನೇತ್ರಿ

ಬಸವನ ಮೂರ್ತಿಯೆ ಧ್ಯಾನಕ್ಕೆ ಮೂಲ
ಬಸವನ ಕೀರ್ತಿಯೆ ಜ್ಞಾನಕ್ಕೆ ಮೂಲ
ಬಸವ ಬಸವಾ ಎಂಬುದೇ ಭಕ್ತಿ ಕಾಣಾ
ಕಪಿಲಸಿದ್ಧ ಮಲ್ಲಿಕಾರ್ಜುನಾ

—ಸದ್ಗುರು ಶ್ರೀ ಸಿದ್ಧರಾಮೇಶ್ವರರು

[ಕರ್ತನೆಂಬ ಕಲಾವಿದ ಮನುಕುಲದ ಇತಿಹಾಸವೆಂಬ ಭಿತ್ತಿಯ ಮೇಲೆ ತನ್ನ ಕಾರುಣ್ಯ ಕುಂಚದಿಂದ ಬಿಡಿಸಿದ ಅಪ್ರತಿಮ ಚಿತ್ರ ಬಸವಣ್ಣನವರು. ಸರ್ವಗುಣ ಸಂಪನ್ನರಾದ ಸಕಲ ಜನ ವಂದ್ಯರಾದ, ದಯೆ–ಮಾನವೀಯತೆ–ಧೀಮಂತಿಕೆಯ ತ್ರಿಕೂಟವಾದ ಬಸವಣ್ಣನವರು ಪರವಸ್ತುವಿನ ಚಿತ್ಕಳೆಯಾಗಿ, ಶರಣರ ಮನೋಮಧ್ಯದ ಸ್ವಯಂ ಜ್ಯೋತಿಯಾಗಿ ಬಾಳಿ ಬೆಳಗಿದರು.

ಅವರು ತಮ್ಮ ಕಥೆಯನ್ನು ತಾವೇ ಹೇಳಿಕೊಳ್ಳುತ್ತಿದ್ದಾರೀಗ ಕೇಳಿ :]

ಇದು ನನ್ನ ಕತೆ

ಮಮತೆಯ ಮಕ್ಕಳೇ,

ಬಹುದಿನಗಳಿಂದ ನನ್ನ ಕಥೆಯನ್ನು ಹೇಳಬೇಕೆಂಬ ಅದಮ್ಯ ಆಕಾಂಕ್ಷೆ ನನ್ನದು. ಬೆಳಗುವ ಬಲ್ಬ್ ಇಲ್ಲದಿದ್ದರೆ ವಿದ್ಯುತ್ ಹರಿದು ಪ್ರಕಾಶಿಸುವುದು ಹೇಗೆ ಸಾಧ್ಯ? ಹಾಗೆಯೇ ಬರೆಯುವವರಿಲ್ಲದಿದ್ದರೆ ನಾನು ಬರೆಯಿಸಿಕೊಳ್ಳುವುದೆಂತು ಸಾಧ್ಯ? ಬರೆಯುವ ಲೇಖನಿ ದೊರೆತಿರುವ ಕಾರಣ ನನ್ನ ಕಥೆ ನಾ ಹೇಳಿಕೊಂಬೆ.

ಕನ್ನಡ ನಾಡು ವಿಸ್ತಾರವಾಗಿ ಹಬ್ಬಿದ್ದ ಕಾಲವದು. ಈ ನಾಡಿನ ಪ್ರಸಿದ್ಧ ಶೈಕ್ಷಣಿಕ ಕೇಂದ್ರ ಇಂಗುಳೇಶ್ವರ. ಇದು ನನ್ನ ತಾಯಿ ಮಾದಲಾಂಬೆಯ ತೌರೂರು. ಅಲ್ಲಿಗೆ ಸನಿಹದ ಬಾಗೆವಾಡಿ ತಂದೆ ಮಾದರಸರ ಊರು. ಸುಸಂಸ್ಕೃತ ವಾತಾವರಣ, ಸಂಪ್ರದಾಯಸ್ಥ ಮನೆತನದ ಆಚಾರ–ವಿಚಾರ, ಬ್ರಾಹ್ಮಣ ಸಮಾಜದ ಕಟ್ಟುಪಾಡು ಎಲ್ಲವೊಂದಾಗಿ ಮೇಳೈಸಿದ್ದವು. ಅವರಿಗೆ ಬಹುಕಾಲ ಗಂಡುಮಕ್ಕಳಿರದೆ ಹೆಣ್ಣು ಮಗಳು ನಾಗಲಾಂಬೆಯೊಬ್ಬಳೇ ಇದ್ದ ಕಾರಣ ತಮ್ಮ ವಂಶಪಾರಂಪರ್ಯದ ಪೌರೋಹಿತ್ಯ ಮುಂದರಿಸಿಕೊಂಡು ಹೋಗಲು ಗಂಡು ಸಂತಾನವಿಲ್ಲವೆಂದು ಕೊರಗುತ್ತಿ

ದ್ದರು. ಅವರ ಸಂಕಲ್ಪದ ಈಡೇರಿಕೆಯೋ ಪರಮಾತ್ಮನ ಆಕಾಂಕ್ಷೆಯ ಪೂರೈಕೆಯೋ ವೈಶಾಖ ಮಾಸ ಅಕ್ಷಯ ತೃತೀಯಾದಂದು ನಾನು ಹುಟ್ಟಿದೆ

ತಾಯಿಯ ಗರ್ಭಾಂಬುಧಿಯಿಂದ ಹೊರಲೋಕಕ್ಕೆ ನಾನು ಬಂದೆ. ಹಿಂದಿನ ಜನ್ಮಗಳ ಅನಂತ ಸಂಸ್ಕಾರಗಳ ಫಲವಾಗಿ ಇದು ಅರಿವಿನ ಜನ್ಮವಾಗಿತ್ತು. ತಾಯಿ ತಂದೆ ನಿಮಿತ್ತ ಮಾತ್ರರು; ದೇವನೇ ನನ್ನ ತಾಯಿ ತಂದೆ ಎಂದರಿತಿದ್ದೆ: ಗೂಡು ಕಟ್ಟಲಾರದ ಕೋಗಿಲೆ ಕಾಗೆಯ ಗೂಡಿನಲ್ಲಿ ತನ್ನ ಮೊಟ್ಟೆಯನ್ನಿಡುವಂತೆ ಪರಮಾತ್ಮನು ಮಾದರಸ—ಮಾದಲಾಂಬೆಯರ ಸಂಸಾರದ ಗೂಡಿನಲ್ಲಿ ನನ್ನನ್ನು-ತನ್ನ ಮೊಟ್ಟೆಯನ್ನು ಇರಿಸಿದ್ದಾನೆಂದು ಅರಿತಿದ್ದೆ. ಆದರೇನು ಹುಟ್ಟುತ್ತಲೇ ದೇಹಕ್ಕೆ ಜನ್ಮವಿತ್ತವರ ಮುಖ ನೋಡುವುದು ಬೇಡವಾಗಿತ್ತು. ಜೀವನವನ್ನು ಕೊಟ್ಟವರು ಇವರಿರಬಹುದು; ಆದರೆ ಜೀವ(soul) ವನ್ನೇ ಕೊಟ್ಟವನು ಅವನು-ಆ ಕರ್ತನಲ್ಲವೆ? ಅವನ ಸಾಕಾರ ರೂಪವಾದ ಗುರುದರ್ಶನಕ್ಕೆ ನಾನು ಹಾತೊರೆಯುತ್ತಿದ್ದೆ. ದರ್ಶನ ಲಭ್ಯವಾಗುವತನಕ ಕಣ್ತೆರೆಯದೆ, ಅಳದೆ, ಮಿಡುಕದೆ, ಗೊಂಬೆಯಂತೆ ನಿಶ್ಚಲನಾಗಿದ್ದು ದೇವನ ಧ್ಯಾನದಲ್ಲಿ ತೊಡಗಿದ್ದೆ. ಹೆತ್ತವರು ಕಳವಳದಿಂದ ಹರಿದಾಡುತ್ತಿದ್ದರೂ ಸ್ಥಿತ ಪ್ರಜ್ಞನಾಗಿದ್ದೆ. ಬಯಸುವ ಬಯಕೆ ಕೈಸಾರುವಂತೆ ಜಡೆ ಮುಡಿಯನ್ನು ಧರಿಸಿದ ಓರ್ವ ಯೋಗಿಗಳು ಬಂದು ನಮ್ಮ ಮನೆಯನ್ನು ಹೊಕ್ಕು, ನನ್ನ ಹಣೆಗೆ ವಿಭೂತಿಯ ಧರಿಸಿ, ತಲೆಯ ಮೇಲೆ ಹಸ್ತವನ್ನಿಟ್ಟು "ಓಂ ನಮಃ ಶಿವಾಯ" ಎಂಬ ಮಂತ್ರವನ್ನು ನನ್ನ ಕಿವಿಯಲ್ಲಿ ಉಚ್ಚಾರ ಮಾಡಿದರು. ಮಂತ್ರದ ನಾದ ನನ್ನ ಮನವನ್ನು ತುಂಬುತ್ತಿದ್ದಂತೆಯೇ ಪುಳಕಿತನಾದ ನಾನು ಕಣ್ತೆರೆದು ಗುರುದರ್ಶನವನ್ನು ಪಡೆದೆನು. ಗುರುಗಳು ಆಶೀರ್ವದಿಸಿ ಬಸವನೆಂದು ಹೆಸರಿಡಲು ಹೇಳಿ ನಿರ್ಗಮಿಸಿದರು.

ನನಗೆ ಬಾಲ್ಯದಿಂದಲೂ ಕುತೂಹಲ ಪ್ರಜ್ಞೆ ಅಧಿಕ. ಮನಸ್ಸು ಗಂಭೀರ ವಿಷಯಗಳನ್ನು ಆಲೋಚಿಸುತ್ತ ಅಂತರ್ಮುಖವಾಗಿ ಬಿಡುತ್ತಿತ್ತು. ಮಂಕಾಗಿ ಕುಳಿತುಕೊಳ್ಳುವ ಬಾಲಕನೂ ಅಲ್ಲ ನಾನು. ಒಮ್ಮೆ ಶಾಲೆಗೆ ಹೋದಾಗ ಎಲ್ಲ ಮಕ್ಕಳೂ ಕೈಕಾಲು ತೊಳೆಯಲು ಕೊಳದಲ್ಲಿಳಿದರು. ಆಗ ಬೆನಕನೆಂಬುವನು ಪಾಚಿಗಟ್ಟಿದ ಕಲ್ಲಿನ ಮೇಲೆ ಕಾಲಿಟ್ಟು ಜಾರಿಬಿಡಬೇಕೆ? ಒಬ್ಬರಾದರೂ ಕೊಳಕ್ಕಿಳಿಯಬೇಕಲ್ಲ. ಮೂಕರಂತೆ ನಿಂತಿದ್ದರು. ಆಕಸ್ಮಿಕವಾಗಿ ಬಂದ ನಾನು ವಿಷಯ ತಿಳಿದು ಧುಮುಕಿದೆ. ಈಜಿಬಿಟ್ಟು ಅವನನ್ನು ಎತ್ತಿ ತಂದೆ. ಅವನಾಗಲೇ ನೀರು ಕುಡಿದು ಬಿಟ್ಟಿದ್ದ. ಹಿಂದೊಮ್ಮೆ ಕಾಲು ಜಾರಿ ಭಾವಿಯಲ್ಲಿ ಬಿದ್ದಿದ್ದವರೊಬ್ಬರನ್ನು ಮೇಲೆತ್ತಿ ಬೆನ್ನುಮೇಲೆ ಮಾಡಿ ಹಾಕಿ, ನೀರನ್ನು ಹೊರಗೆ ಹೊರಡಿಸುವುದನ್ನು ನೋಡಿದ್ದ ಕಾರಣ ಹಾಗೆಯೇ ಮಾಡಿದೆ.

ಆದರೆ ಅಷ್ಟರಲ್ಲಿ ನನ್ನ ತೀಕ್ಷ್ಣಮತಿ, ಪ್ರತಿಭೆ ಸಹಿಸದೆ ಮತ್ಸರಿಸುವ ಕೆಲವರು ನಾನೇ ಬೆನಕನನ್ನು ನೀರಿಗೆ ನೂಕಿದೆ ಎಂದು ಚಾಡಿ ಹೇಳಿಬಿಟ್ಟಿದ್ದರು. ಹಿರಿಯರು ನನ್ನನ್ನೇ ಹೊಡೆಯ ಬಂದರು. ಅತ್ತ ಲಕ್ಷ್ಯ ಕೊಡದೆ ನೀರನ್ನು ಕಕ್ಕಿಸಿದೆ. ಬೆನಕ ನಿಧಾನವಾಗಿ ಉಸಿರಾಡತೊಡಗಿ ಎಚ್ಚರಗೊಂಡು, ತಾನು ಜಾರಿ ಬಿದ್ದುದನ್ನೂ ನಾನು ಬದುಕಿಸಿದ ವಿಷಯವನ್ನು ಹೇಳಿದ. ಆಗ ಹಿರಿಯರೆಲ್ಲ ಆಶ್ಚರ್ಯ-ಅಭಿಮಾನಗಳಿಂದ "ಪವಾಡ ಪುರುಷನಪ್ಪಾ ನೀನು. ಸತ್ತವನನ್ನು ಬದುಕಿಸಿದೆ" ಎಂದರು. "ಎಲ್ಲಾ ಶಿವನಿಚ್ಛೆ ನಾನು ನಿಮಿತ್ತ ಮಾತ್ರ," ಎಂದೆ ನಿರ್ಲಿಪ್ತನಾಗಿ.

ಇನ್ನೊಮ್ಮೆ ಕುಚೇಷ್ಟೆ ಮಾಡಲೋಸುಗ ನನ್ನ ಸಹಪಾಠಿಗಳೆಲ್ಲ ಬಂದು, ಓರ್ವ ನನ್ನು ಮಲಗಿಸಿ, 'ಬಸವರಸಾ, ಚಾಮ ಸತ್ತು ಹೋಗಿರುವ ಬದುಕಿಸಬಲ್ಲೆಯಾ?' ಎಂದರು. 'ಶಿವನಿಚ್ಛೆ ಅದೇ ಆಗಿದ್ದರೆ ನಾನೇಕೆ ಅದರ ವಿರುದ್ಧ ಹೋಗಲಿ?' ಎಂದೆ. ಅವರು ಮುಸಿ ಮುಸಿ ನಗುತ್ತಾ ಹೋದವರು ಮರಳಿ ಬಂದು ಭಯಭೀತರಾಗಿ 'ಬಸವರಸಾ, ನಿಜಕ್ಕೂ ಚಾಮ ಸತ್ತು ಬಿಟ್ಟಿದ್ದಾನೆ. ನಾವು ಹುಡುಗಾಟ ಮಾಡಹೋಗಿ ಪೇಚಾಟವಾಗಿದೆ. ಬಾ' ಎಂದು ಅಳತೊಡಗಿದರು. ನಾನು ಸಮೀಪ ಹೋಗಿ, 'ಶಿವನೇ, ತಂದೆ, ಇದೇಕಿಂತಹ ಶಿಕ್ಷೆ. ನನ್ನನ್ನು ಕ್ಷಮಿಸು ಅವನನ್ನು ಉಳಿಸು' ಎಂದು ಪ್ರಾರ್ಥಿಸಿದೆ. ಆಶ್ಚರ್ಯ! ಚಾಮ ಬದುಕಿದ. ನನ್ನ ಮಾತನ್ನು ದೇವನು ಕೇಳಿಸಿಕೊಂಡು ಅದರಂತೆ ನಡೆಸುತ್ತಿರುವನೇನೋ ಎನಿಸುತ್ತಿತ್ತು ನನಗೆ. ಕೃತಜ್ಞತೆಯಿಂದ ತಲೆ ಬಾಗಿದೆ.

ನನ್ನದು ಚಿಕಿತ್ಸಕ ಬುದ್ಧಿ, ವೈಚಾರಿಕ ಪ್ರಜ್ಞೆ. ರೂಢಿಗೊಂಡು ಬಂದ ಎಲ್ಲ ಆಚರಣೆಗಳನ್ನು ನಂಬಿ ಆಚರಿಸಲು ಮನಸ್ಸು ಒಪ್ಪುತ್ತಿರಲಿಲ್ಲ. ಕಂಡ ಕಂಡುದನ್ನು ದೇವರೆನ್ನುವುದು, ನೀರು, ನೆಲ, ಬೆಂಕಿ, ಗಿಡ ಮರಬಳ್ಳಿಗಳನ್ನು ದೇವರೆಂದು ಪೂಜಿಸುವುದು, ಸೂರ್ಯಚಂದ್ರ, ಶನಿ-ಕುಜರನ್ನು ದೇವರೆನ್ನುವುದು ಸರಿಕಾಣದಾಗಿತ್ತು. ಹೋಮ ಹವನಾದಿಗಳ ಹೆಸರಿನಲ್ಲಿ ಅಗ್ನಿಗೆ ವಸ್ತುಗಳನ್ನು ಅರ್ಪಿಸುವುದು, ಆಡು-ಅಶ್ವಗಳನ್ನು ಯಜ್ಞ-ಯಾಗಮಾಡಿ ಬಲಿಕೊಡುವುದು ಸರಿಬಾರದಾಗಿತ್ತು. ಮಾರಿದುರ್ಗಿಯಂತಹ ಉಗ್ರದೇವತೆಗಳಿಗೆ ಕುರಿಕೋಳಿಕೋಣಗಳನ್ನು ಬಲಿಕೊಡುವುದು ಎಷ್ಟು ಅಮಾನುಷವೋ, ಅಗ್ನಿಯ ಮೂಲಕ ಆಡಿನ ವಧೆಯೂ ಅಷ್ಟೇ ಅಷ್ಟೇ ಅಸಹನೀಯವಾಗಿತ್ತು. ಒಮ್ಮೆ ಇಂಥ ಪ್ರಸಂಗ ನೋಡಿ ಬಿಕ್ಕಿ ಬಿಕ್ಕಿ ಅತ್ತು ಬಿಟ್ಟಿದ್ದೆ. ದೇವನ ಸೃಷ್ಟಿಯನ್ನು ವಿವಿಧ ರೀತಿಯಲ್ಲಿ ಮಾನವನು ಶೋಷಿಸುವುದನ್ನು ಕಂಡು ಮಮ್ಮಲ ಮರುಗಿದೆ.

ಇಂಥ ಸ್ಥಿತಿಯಲ್ಲೇ ಉಪನಯನ ಸಂಸ್ಕಾರ ಮಾಡಲು ತಂದೆ ಸಿದ್ಧರಾದರು. ಹಾಗಾದರೆ ಇನ್ನು ನಾನು ಹಲವಾರು ದೇವತೆಗಳ ಉಪಾಸನೆಗೆ ಬದ್ಧನಾಗಬೇಕೆ?

ಮನಸ್ಸು ವ್ಯಾಕುಲಗೊಂಡಿತು. ಅಲ್ಲದೆ ಸ್ತ್ರೀಯರಿಗೆ ಮುಖ್ಯವಾಗಿ ತಾಯಿಗೆ, ನನ್ನಕ್ಕನಿಗೆ ಕೊಡದ ಧರ್ಮ ಸಂಸ್ಕಾರವನ್ನು ನಾನು ಪಡೆಯಬೇಕೆ ? ಅಂತರಾತ್ಮ ಒಪ್ಪಲಿಲ್ಲ. 'ಅಕ್ಕನಿಗೆ ಮೊದಲಾಗಲಿ' ಎಂದು ಹಠ ಹಿಡಿದಾಗ ತಂದೆ ಸಿಟ್ಟಿಗೆದ್ದರು. ಇಂಥದೊಂದು ಅವಕಾಶಕ್ಕಾಗಿ ಕಾಯುತ್ತಿದ್ದ ನಾನು ಹೊರಟು ಬಿಟ್ಟೆ. ತಾಯಿತಂದೆ ಬಂಧು ಬಳಗ ತೊರೆದು ಮುಂದಡಿ ಇಟ್ಟೆ. ಸತ್ಯಾನ್ವೇಷಕನಾಗಿ ಹೊರಟೆ. ತಾಯಿಗಿಂತ ಮಿಗಿಲಾಗಿ ಆರೈಕೆ ಮಾಡುತ್ತಿದ್ದ ಅಕ್ಕ ನಾಗಲೆಯೂ ಬೆಂಗಾವಲಾಗಿ ಹೊರಟಳು. ಲೋಕಜ್ಞಾನವರಿಯದ ನಾನು ಜ್ಞಾನಾರ್ಜನೆ ಮಾಡುವುದು ಒಳ್ಳಿತೆಂದು ನಾಗಲಾಂಬಿಕೆ ಸೂಚಿಸಲು ಸುಪ್ರಸಿದ್ಧ ಶೈವಗುರುಕುಲವಿದ್ದ ಕೂಡಲ ಸಂಗಮ ಕ್ಷೇತ್ರಕ್ಕೆ ನಡೆದೆವು.

ನನ್ನಲ್ಲಿ ಏನನ್ನು ಗುರುತಿಸಿದರೋ ಏನೋ ಜಾತವೇದ ಮುನಿಗಳು ನನ್ನನ್ನಳಿಯುವಂತೆ ತೀಕ್ಷ್ಣವಾಗಿ ದಿಟ್ಟಿಸಿ ನೋಡಿ "ಈತಂ ಕಾರಣಿಕನಾಗಲೇವೇಳ್ಕುಂ" ಎಂದು ತಮ್ಮಲ್ಲಿ ತಾವೇ ನುಡಿದುಕೊಂಡರು. ಸಂಗಮೇಶ್ವರ ಲಿಂಗದ ಮುಂದೆ ತನ್ಮಯತೆಯಿಂದ ಕುಳಿತಿದ್ದ ನಾನು ಅವರ ಶ್ರೀಪಾದಗಳಿಗೆ ಮಣಿದೆ. ನನ್ನ ತಲೆಯ ಮೇಲೆ ಕೈಯಿಟ್ಟು, ವಾತ್ಸಲ್ಯದಿಂದ ನೇವರಿಸಿ 'ಎಲೆ ಭಕ್ತ, ನೀನೆಲ್ಲಿಗುಂ ಹೋಗಬೇಡ; ಯಾವುದಕೂ ಚಿಂತೆ ಬೇಡ. ತಿಳಿಯುಗ್ಘವಣಿಯಂ, ಹೊಸ ಪುಷ್ಪಮಂ ತಂದು ಸಂಗಮೇಶ್ವರನನ್ನು ಭಕ್ತಿಯಿಂದ ಅರ್ಚಿಸುತ್ತ, ವಿದ್ಯಾರ್ಜನೆ ಮಾಡು" ಎಂದರು. ನಾನು ರೋಮಾಂಚನಗೊಂಡು ಧನ್ಯನಾದೆ ಎಂದುಕೊಂಡೆ.

ಗುರುಗಳ ವಾತ್ಸಲ್ಯದ ಧಾರೆಯನ್ನೀಂಟುತ್ತ, ಜ್ಞಾನಕಿರಣಗಳ ಪ್ರೇರಣೆಯಲ್ಲಿ ಬೆಳೆಯುತ್ತ ಅರ್ಚಕನ ಕಾಯಕವನ್ನು ನಿಷ್ಠೆಯಿಂದ ಮಾಡುತ್ತಾ ಬಾಲ್ಯವನ್ನು ಕಳೆದು, ಯೌವ್ವನಕ್ಕೆ ಕಾಲಿಟ್ಟೆ. ನನ್ನ ಶರೀರ ಸಂಪತ್ತು, ತೇಜಸ್ಸು, ವಿಚಾರಧಾರೆ ಎಲ್ಲದರಲ್ಲಿಯೂ ಬದಲಾವಣೆ ಆರಂಭವಾಯಿತು. ಮನಸ್ಸು ಅಂತರ್ಮುಖವಾಗತೊಡಗಿ ವಿಚಾರಗಳ ತಾಕಲಾಟದೊಡನೆ ನೂತನ ಧರ್ಮದ ಕಲ್ಪನೆ ಮೈದಳೆಯ ತೊಡಗಿತು.

ಒಂದು ದಿನ ಸುಪ್ರಭಾತದ ಪೂಜೆ ಮುಗಿಸಿ, ಆಶ್ರಮದ ವನದಲ್ಲಿ ಕುಳಿತಿದ್ದೆ. ಜೇನ್ನೊಣಗಳ ಗುಂಪು ಹಾರಾಡುತ್ತಲಿತ್ತು. ಸನಿಹದಲ್ಲಿ ಒಂದು ಜೇನುಗೂಡು ಕಂಡೆ. ಆ ಗೂಡಿನಲ್ಲಿ ಚಟುವಟಿಕೆಯಿಂದ ಕಾರ್ಯನಿರತವಾಗಿದ್ದವು ಜೇನ್ನೊಣಗಳು. ಆಗೊಂದು ವಿಚಾರ ಹೊಳೆಯಿತು. ವಿವಿಧ ಜಾತಿಯ ಹೂವುಗಳಿಂದ ಮಕರಂದ ಸಂಗ್ರಹಿಸಿ ಈ ನೊಣಗಳು ಬೇರೊಂದು ವಿಶಿಷ್ಟ ಬಗೆಯ ಜೇನುತುಪ್ಪ ಕೊಡುವುವಷ್ಟೆ ? ಹಾಗೆಯೇ ನಾನೂ ಪ್ರಚಲಿತವಿರುವ ಭಾರತೀಯ ಹಲವು ಧರ್ಮಗಳ ಉತ್ತಮ ವಿಚಾರ-ಆಚಾರ

ಮೌಲ್ಯಗಳನ್ನು ಕ್ರೋಢೀಕರಿಸಿ ಸಮತಾಭಾವದ, ವಿಶ್ವಭ್ರಾತೃತ್ವದ ಹೊಸಧರ್ಮವನ್ನೇಕೆ ಕೊಡಬಾರದು ? ಉಪನಿಷತ್ತಿನ ನಿರ್ಗುಣೋಪಾಸನೆ-ಜ್ಞಾನಕಾಂಡ, ಜೈನಧರ್ಮದ ಅಹಿಂಸೆ, ಬೌದ್ಧ ಧರ್ಮದ ಸಮತಾವಾದ, ಶೈವಧರ್ಮದ ಭಕ್ತಿ-ಈ ಎಲ್ಲವುಗಳೊಡನೆ ನನ್ನ ನೂತನ ವಿಚಾರ ಧಾರೆಯನ್ನೂ ಸೇರಿಸಿ ಅನುಭವಪ್ರಧಾನ, ಸ್ವತಂತ್ರ ಧರ್ಮವನ್ನೇಕೆ ಕೊಡಬಾರದು ? ಈ ಆಲೋಚನೆ ಮೊಳೆತುದೇ ತಡ ನೂತನ ಧರ್ಮದ ಕಲ್ಪನೆ ಮೈದಳೆಯ ತೊಡಗಿತು.

ನನಗಾಗ 21 ವರ್ಷ, ಏರುಂಜವ್ವನ. ವಿದ್ಯಾರ್ಜನೆಯ ಘಟ್ಟ ಪೂರ್ಣಗೊಳ್ಳುವ ಸಮಯ. ಆ ಸಂದರ್ಭದಲ್ಲಿ ಚಾಲುಕ್ಯ ರಾಜ್ಯದ ಪ್ರಧಾನಿಗಳಾಗಿದ್ದ ಬಲದೇವರಸರು ತಮ್ಮ ಏಕೈಕ ಪುತ್ರಿ ಗಂಗಾಂಬಿಕೆಯನ್ನು ನನಗೆ ಧಾರೆ ಎರೆಯುವ ಆಲೋಚನೆಯನ್ನು ಗುರುಗಳ ಮುಂದಿಡಬೇಕೇ ? ನನ್ನ ಎಲ್ಲ ಆದರ್ಶಗಳನ್ನು ನುಚ್ಚು ನೂರು ಮಾಡುವ ಬಿರುಗಾಳಿಯಂತೆ ಬೀಸಿ ಬಂದ, ಈ ಆಹ್ವಾನ ಕೇಳಿ ನಡುಗಿಬಿಟ್ಟೆ. ಆದರ್ಶ-ಆಚಾರ-ವಿಚಾರಗಳಲ್ಲಿ ಸಂಪೂರ್ಣ ವಿರುದ್ಧ ಆಕಾಂಕ್ಷೆಯ ಹೆಂಡತಿ ಸಿಕ್ಕರೆ ಇಷ್ಟು ದಿನ ನಾನು ಇರಿಸಿಕೊಂಡು, ಬೆಳೆಸಿಕೊಂಡು ಬಂದಿರುವ ಆದರ್ಶಗಳ ಗತಿ ಏನು ?

ಸಂಸಾರ ಸಾಗರದ ಭಯಾನಕ ಅಲೆಗಳನ್ನು ಕಲ್ಪಿಸಿಕೊಂಡು ತತ್ತರಿಸಿದ ನಾನು ಸಂಗಮನ ಮೊರೆಹೊಕ್ಕೆ. ನನ್ನಂತರಂಗವನ್ನು ಅವನಲ್ಲಿ ತೆರೆದಿಟ್ಟು, ಮಾರ್ಗ ತೋರಲು ಬೇಡಿದೆ. ವಾತ್ಸಲ್ಯ ತುಂಬಿದ ದನಿಯಲ್ಲಿ ಅವನ ವಾಣಿ ಉಲಿಯಿತು : "ಎಲೆ ಮಗನೆ, ಬಸವಣ್ಣ ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವೇಢೆಗೆ ಹೋಗು." ಸಂಗಮನಾಥನ ಆಜ್ಞೆ ಸ್ವೀಕರಿಸಿ, ಗುರುದೇವರಿಗೆ ಒಪ್ಪಿಗೆ ತಿಳಿಸಿ ಮರುದಿನ ಮಿಂದು ಮಡಿಯುಟ್ಟು ಧ್ಯಾನಾಸಕ್ತನಾಗಿ ಕುಳಿತಿರುವಾಗಲೇ ನನ್ನ ಮನಸ್ಸು ಉತ್ಕಟ ಸ್ಥಿತಿಗೇರಿತು. ಆಗ ಸಗುಣ ಸಾಕ್ಷಾತ್ಕಾರದ ದಿವ್ಯಾನುಭವ ಪಡೆದೆ. ಪರಮಾತ್ಮನೇ ನೇರವಾಗಿ ನನ್ನನ್ನು ಅನುಗ್ರಹಿಸಿದ. ಬೆಳಗಿನ ಮಹಾಪೂರವೇ ಹರಿದು ಬಂದು ನನ್ನ ಅಂತರಂಗವನ್ನು ತುಂಬಿತು. ನನ್ನ ಹಲವು ದಿನಗಳ ಅನ್ವೇಷಣೆಗೆ ಪರಿಹಾರ ದೊರೆಯಿತು.

ಮಾನವರು ಚಿತ್ರವಿಚಿತ್ರವಾದ ಆಕಾರಗಳನ್ನು ದೇವರೆಂದು ಪೂಜಿಸುವುದನ್ನು ಕಂಡು ಜಿಗುಪ್ಸೆ ಪಟ್ಟಿದ್ದ ನನ್ನ ಮನ ತಾತ್ತ್ವಿಕ, ಯೌಗಿಕ, ಆಧ್ಯಾತ್ಮಿಕ, ಸಾಮಾಜಿಕ ಅರ್ಥವ್ಯಾಪ್ತಿಯುಳ್ಳ ಒಂದು ಲಾಂಛನದ ಬಗ್ಗೆ ಆಲೋಚಿಸುತ್ತಿತ್ತು. ಸಾಕ್ಷಾತ್ಕಾರದ ಅನುಭವದ ಬೆಳಕಿನಲ್ಲಿ ಲಾಂಛನದ ಸುಳುಹು ದೋರಿತು. ದೇವರು ನಿರಾಕಾರ ; ಬ್ರಹ್ಮಾಂಡ ಸಾಕಾರ. ನಿರಾಕಾರ ದೇವನನ್ನು ಅವನ ಸಾಕಾರವಾದ ಬ್ರಹ್ಮಾಂಡದ

ಆಕಾರದಲ್ಲೇಕೆ ಪೂಜಿಸಬಾರದು ? ಪಿಂಡಗತ ಚೈತನ್ಯವಾದ ಆತ್ಮನು ವ್ಯಕ್ತವಾಗುವುದ ದೇಹದ ಮೂಲಕ. ಆತ್ಮನನ್ನು ದೇಹದಾಕಾರದಲ್ಲಿ ಪರಮಾತ್ಮನನ್ನು ವಿಶ್ವದ ಆಕಾರ ದಲ್ಲಿ ಸಾಕಾರಗೊಳಿಸಿ. ಪರಮಾತ್ಮನಲ್ಲಿ ಜೀವಾತ್ಮನಿದ್ದಾನೆ, ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ ಎಂಬ ತತ್ತ್ವವನ್ನು ಘನೀಕರಿಸಿ ವಿಶ್ವಾತ್ಮನ ಕುರುಹನ್ನು ರೂಪಿಸು ವುದು ಒಳ್ಳಿತು. ಆ ಕುರುಹನ್ನು ಸದಾ ದೇಹದ ಮೇಲೆ ಧರಿಸಿ, ದೇವಾಲಯಗಳ ಹಂಗನ್ನು ತೊರೆದು, ಯೋಗ ಸಾಧನೆಗೂ ಅದನ್ನು ಉಪಯೋಗಿಸುವ ವಿಚಾರ ಹೊಳೆ ಯಿತು. ಈ ಹೊಸ ಸಂಶೋಧನೆ ನನಗೆ ಅದ್ಭುತ ಆನಂದವನ್ನಿತ್ತಿತು. ಈ ಲಾಂಛ ನವನ್ನೇ ಕೇಂದ್ರ ಬಿಂದುವಾಗಿಟ್ಟುಕೊಂಡು ಹೊಸ ಧರ್ಮವನ್ನು ರೂಪಿಸುವ, ಜಾತಿ, ವರ್ಣ ವರ್ಗರಹಿತ ಸಮಾಜವನ್ನು ಕಟ್ಟುವ ಆಕಾಂಕ್ಷೆ ಬಲಿಯಿತು. ದೇವ ಪಿತೃತ್ವ, ಮಾನವ ಭ್ರಾತೃತ್ವ ಸಾರುವ ಆಸೆ ಅಂತರಂಗದಲ್ಲಿ ಮೊಳಗಿತು.

ಸಂಗಮನ ಕರುಣೆಯನ್ನು ಬೆನ್ನಲ್ಲಿ ಧರಿಸಿ, ಅವನ ಧ್ಯಾನವನ್ನೇ ಜೀವನದ ಸಂಪತ್ತನ್ನಾಗಿ ಹೊತ್ತು ಮಂಗಳವೇಢೆಯತ್ತ ನಡೆದೆ. ಬಲದೇವರಸರ ಪುತ್ರಿಯನ್ನು ಮದುವೆಯಾದೆ. ಪರೋಪಜೀವಿಯಾಗಿ ಜೀವಿಸಬಾರದೆಂದು, ಕಾಯಕವೇ ಕೈಲಾಸ ವೆಂದು ಘೋಷಿಸಿ ಅರಮನೆಯ ಕರಣಸಾಲೆಯಲ್ಲಿ ಕರಣಿಕನಾದೆ. ದೇವನ ಅನುಗ್ರಹ ವಾದರೆ ಏನಾಗದು ? ದಿನ ದಿನಕ್ಕೆ ಉನ್ನತ ಹುದ್ದೆಗೆ ಏರಿದೆ. ಯಾರೂ ಓದಲಿಕ್ಕಾಗ ದಿದ್ದ ಪುರಾತನ ಸ್ವರ್ಣ ಪತ್ರವೊಂದನ್ನು ಓದಿ, ನಿಧಿಯನ್ನು ಹೊರತೆಗೆದು ಕರಣಿಕ ನಾಗಿದ್ದವನು ಅರ್ಥಮಂತ್ರಿಯಾದೆ. ರಾಜಕೀಯದಲ್ಲಿ ನನಗಿಂತ ಹಿರಿಯರಾದ ಕೊಂಡಿಮಂಚಣ್ಣ, ನಾರಣ ಕ್ರಮಿತ ಮುಂತಾದವರು ಮತ್ಸರ ಬುದ್ಧಿಯಿಂದ ಭಂಡಾ ರದ ದುರುಪಯೋಗವಾಗಿದೆ ಎಂದು ಬಿಜ್ಜಳನಲ್ಲಿ ದೂರಿದರು. ಅತ್ಯಂತ ಪರಿಶುದ್ಧ ನಾಗಿ ಬಾಳಿದ್ದ ನಾನು ಆಗಿಂದಾಗಲೇ ಭಂಡಾರ ತೆಗೆಯಿಸಿ ಲೆಕ್ಕಮಾಡಿ, ಹಣವು ಸರಿ ಯಾಗಿ ಇರುವುದನ್ನು ತೋರಿಸಿದೆನಲ್ಲದೆ, ಹಿಂದಿನ ಮಂತ್ರಿಗಳ ಆಳ್ವಿಕೆಯ ಕಾಲದಲ್ಲಿದ್ದು ದಕ್ಕಿಂತ ನಾಲ್ಕಾರು ಪಟ್ಟು ಆದಾಯ ವೃದ್ಧಿಯಾದುದನ್ನು ತೋರಿಸಿಕೊಟ್ಟೆ. ಬಿಜ್ಜಳ ಮಹಾರಾಜ ಬೆಕ್ಕಸಬೆರಗಾದ. ಕಾಯಕನಿಷ್ಠೆ, ದಾಸೋಹ ಪ್ರಜ್ಞೆ, ಪ್ರಾಮಾಣಿಕ ತೆರಿಗೆಯ ಸಲ್ಲಿಕೆಗಳಿಂದ ಅರ್ಥಕೋಶ ತುಂಬಿ ತುಳುಕುತ್ತಿತ್ತು. ಆನಂದ ತುಂದಿಲ ನಾದ ಬಿಜ್ಜಳನು ಅಲ್ಲಿಗಾಗಲೇ ಪ್ರಧಾನಿ ಬಲದೇವರಸರ ನಿಧನದಿಂದ ತೆರವಾಗಿದ್ದ ಪ್ರಧಾನಿಯ ಪದವಿಯನ್ನು ನನಗೇ ನೀಡಿದ. ಅದು ಬಯಸದೆ ಬಂದ ಭಾಗ್ಯವಾದ ಕಾರಣ ಪರಮಾತ್ಮನ ಶ್ರೀಪ್ರಸಾದವೆಂದು ಕೈಂಕರ್ಯಭಾವದಿಂದ ಸ್ವೀಕರಿಸಿದೆ.

ಸಮಾಜವು ಶತಶತಮಾನಗಳಿಂದ ಸಾಗಿ ಬಂದ ಮೂಢನಂಬಿಕೆ ಕಂದಾಚಾರ ಗಳಿಂದ ಮಲೆತು ಹೋದ ಕೆರೆಯಂತಾಗಿತ್ತು. ಸಾಮಾಜಿಕ, ಧಾರ್ಮಿಕ, ನೈತಿಕ,

ಸಾಂಸ್ಕೃತಿಕ ಪರಿವರ್ತನೆ ಮಾಡಲು ನಾನು ಸಂಕಲ್ಪಿಸಿದೆ. ಇದಕ್ಕೆ ಸಾಧನವಾಗಿ ತಾತ್ತ್ವಿಕ, ನೈತಿಕ, ಸೈದ್ಧಾಂತಿಕ, ಸಾಮಾಜಿಕ, ಅಧ್ಯಾತ್ಮಿಕ ಮೌಲ್ಯಗಳಿಂದ ಪರಿ ಪ್ಲುತವಾದ ವಚನಸಾಹಿತ್ಯದ ಸಂವಿಧಾನ ನೀಡಿದೆ. ತಮಗರ್ಥವಾಗದ ಭಾಷೆಯಲ್ಲಿ ಅರ್ಥವಾಗದ ವಿಧಿವಿಧಾನಗಳ ಮೂಲಕ ಧರ್ಮಾಚರಣೆ ಮಾಡುತ್ತಿದ್ದುದೇ ಧರ್ಮದ ಶಿಥಿಲತೆಗೆ ಕಾರಣವಾಗಿತ್ತು. ಸಮಾಜದಲ್ಲಿ ತೀವ್ರ ಪರಿವರ್ತನೆ ತರಲು ಆಡುಭಾಷೆ ಯನ್ನು ಬಳಸಿ ಧರ್ಮಬೋಧೆ ಮಾಡತೊಡಗಿದೆ. ಧರ್ಮದ ಆಶ್ರಯದಲ್ಲಿ ಸಹೋದರತೆ ತರಲೋಸುಗ ಅನುಭವ ಮಂಟಪ ರೂಪಿಸಿ, ಎಲ್ಲರನ್ನೂ ಸ್ವಾಗತಿಸಿದೆ.

ಮಾನವನಿಗಿರುವ ಘಟಕಗಳು ಮೂರು; ದೇಹ, ಮನಸ್ಸು, ಆತ್ಮ ಎಲ್ಲರಿಗೂ ಈ ಮೂರಕ್ಕೂ ಸಂಸ್ಕಾರವಾಗುವ ಸೌಲಭ್ಯಬೇಕೆಂದು ಕಾಯಕ, ಅಧ್ಯಯನ, ಉಪಾಸ ನೆಗಳನ್ನು ಎಲ್ಲರಿಗೆ ದೊರೆಯುವಂತೆ ಮಾಡಿದೆ. ಸಮಾಜ ಪರಿವರ್ತನೆಯ ಈ ಮಹಾನ್ ಕಾರ್ಯದಲ್ಲಿ ಭಾಗಿಗಳಾಗಲು ಎಲ್ಲ ಜಾತಿ ಮತ ವರ್ಣ ವರ್ಗಗಳಿಂದ ಸತ್ಯ ಶೋಧ ಕರು ಅನುಭವ ಮಂಟಪದತ್ತ ಧಾವಿಸಿದರು.

'ಜಾತಿಯಿಂದ ಗುರುತ್ವ ಬರದು, ಆತ್ಮ ಜ್ಯೋತಿಯಿಂದ ಮಾತ್ರ' ಎಂಬುದನ್ನು ಘಂಟಾಘೋಷವಾಗಿ ಸಾರಿ, ಅರ್ಹತೆಯಿದ್ದವರು ಯಾವ ಸ್ಥಾನಕ್ಕೂ ಏರಲು ಸಾಧ್ಯ ಎಂಬುದನ್ನು ಪ್ರಚಲಿತಪಡಿಸಲೋಸುಗ ಶೂನ್ಯಪೀಠವನ್ನು ಸ್ಥಾಪಿಸಿ, ವೀರವೈರಾಗ್ಯನಿಧಿ ಅಲ್ಲಮಪ್ರಭುದೇವರನ್ನೇ ಪ್ರಥಮ ಗುರುವನ್ನಾಗಿ ದೈವೀ ಪ್ರೇರಣೆಯಂತೆ ಮಾಡಿದೆ. ಅಲ್ಲಮಪ್ರಭುಗಳು ಸಚೇತಕ ಶಕ್ತಿಯಾಗಿ ಅನುಭವ ಮಂಟಪದ ನೇತಾರರಾದರು. ಲೋಹ ಚುಂಬಕದತ್ತ ಕಬ್ಬಿಣವು ಆಕರ್ಷಿಸಲ್ಪಡುವಂತೆ ಮಹಾಶಿವಯೋಗಿಣಿ ಅಕ್ಕಮಹಾದೇವಿ, ಶಿವಯೋಗಿ ಸಿದ್ಧರಾಮೇಶ್ವರರು, ಕಾಶ್ಮೀರದ ಮಹಾರಾಜ ಮಹಾ ದೇವಭೂಪಾಲ, ತತ್ತ್ವನಿಷ್ಠುರಿ ಮಡಿವಾಳ ಮಾಚಿದೇವ, ಎಲ್ಲರೂ ಧಾವಿಸಿ ಸಮಾಜ ಪರಿವರ್ತನೆಯ ಈ ಆಂದೋಲನದಲ್ಲಿ ಭಾಗಿಗಳಾದರು. ಅನುಭವ ಮಂಟಪವು ಜ್ಞಾನ ನಿಧಿ ಚನ್ನಬಸವಣ್ಣ, ಕ್ರಿಯಾಶಕ್ತಿ ಅಕ್ಕ ನಾಗಲಾಂಬೆ, ಹಡಪದ ಅಪ್ಪಣ್ಣ, ಮಾದಾರ ಚೆನ್ನಯ್ಯ, ಡೋಹಾರಕಕ್ಕಯ್ಯ, ಬ್ರಾಹ್ಮಣ ಮಧುವರಸ, ಸಮಗಾರ ಹರಳಯ್ಯ, ಅಂಬಿಗರ ಚೌಡಯ್ಯ, ಒಕ್ಕಲಿಗ ಮುದ್ದಣ್ಣ, ತುರುಗಾಹಿ ರಾಮಣ್ಣ, ಮುಂತಾದ ಅಸಂಖ್ಯಾತ ಜಂಗಮ ಪುಂಗವರಿಂದ ವಿಜೃಂಭಿಸಿತು.

"ಜಾತಿಗಳು ಮಾನವ ಕಲ್ಪಿತವೇ ವಿನಾ ದೇವ ನಿರ್ಮಿತವಲ್ಲ" ಎಂಬುದಾಗಿ ಘೋಷಿಸಿ ಶರಣಧರ್ಮವನ್ನು ಸ್ವೀಕಾರ ಮಾಡಿದ ಬ್ರಾಹ್ಮಣ ಮಂತ್ರಿ ಮಧುವರಸರ ಮಗಳ ಮತ್ತು ಸಮಗಾರ ಹರಳಯ್ಯನ ಮಗನ ಮದುವೆಗೆ ನಾನು ಪ್ರೋತ್ಸಾಹ

ನೀಡಿದೆ. ನಾನು ಕೈಗೊಂಡ ಅಪೂರ್ವ ಯೋಜನೆ, ಸಮಾಜದಲ್ಲಿ ತರುತ್ತಿದ್ದ ಆಮೂಲಾಗ್ರ ಪರಿವರ್ತನೆಗಳನ್ನು ಕಂಡು ಒಳಗೇ ತಳಮಳಿಸುತ್ತಿದ್ದ ಸಂಪ್ರದಾಯವಾದಿಗಳು ಅಂತರ್ಜಾತೀಯ ವಿವಾಹದ ನೆಪದಲ್ಲಿ ಸಿಡಿದೆದ್ದರು. ಶಾಸ್ತ್ರವಿರುದ್ಧವಾದ, ವರ್ಣ ಸಂಕರವಿದೆಂದು ಆರೋಪಿಸಿದರು. ಸ್ವತಂತ್ರ ವಿಚಾರವಾದಿಯಲ್ಲದ ಬಿಜ್ಜಳನನ್ನು ಪ್ರಚೋದಿಸಿ ನನಗೆ ಗಡಿಪಾರು ಶಿಕ್ಷೆ ವಿಧಿಸುವಂತೆ ಮಾಡಿದರು. ರಾಜಾಜ್ಞೆಯನ್ನು ಹೊತ್ತು ನಾನು ಕಲ್ಯಾಣದ ಗಡಿ ತೊರೆದು ಕೂಡಲ ಸಂಗಮಕ್ಕೆ ಬಂದು, ಅಂತರ್ಮುಖಿಯಾಗಿ ತಪೋಮಗ್ನನಾದೆ.

ಅತ್ತ ಕಲ್ಯಾಣದಲ್ಲಿ ಅಂತರ್ಜಾತೀಯ ವಿವಾಹದಲ್ಲಿ ಭಾಗವಹಿಸಿದ್ದಕ್ಕಾಗಿ ಮಧುವರಸ, ಶೀಲವಂತ ಮತ್ತು ಹರಳಯ್ಯನವರಿಗೆ ಕಣ್ಣು ಕೀಳಿಸುವ ಶಿಕ್ಷೆ ಮತ್ತು ಎಳೆಹೂಟೆ ಶಿಕ್ಷೆಯಾಯಿತು. ಈ ಕ್ರಾಂತಿಗೆ ಪ್ರೇರಣೆ ನೀಡಿದ ಸಾವಿರಾರು ಶರಣರ ವಧೆಯಾಯಿತು. ಬಿಜ್ಜಳನ ಅನ್ಯಾಯದ ವಿರುದ್ಧ ಸಿಡಿದೆದ್ದ ಚಾಲುಕ್ಯ ಸಾಮಂತರಾದ ಜಗದೇವ, ಮಲ್ಲಣ್ಣ, ಬೊಮ್ಮಣ್ಣರಿಂದ ಬಿಜ್ಜಳನ ವಧೆಯಾಯಿತು.

ಅಂದು ಶ್ರಾವಣ ಶುದ್ಧ ಪಂಚಮಿ. ನಾನು ಸುಪ್ರಭಾತ ಸಮಯದಲ್ಲಿ ಪೂಜಾ ಮಗ್ನನಾಗಿದ್ದೆ. ಇಷ್ಟಲಿಂಗದ ಪೂಜೆಯಲ್ಲಿ ತನ್ಮಯನಾಗಿರುವಾಗಲೇ ಮರ್ತ್ಯದ ಬಾಳ್ವೆಗೆ ಮಂಗಲ ಹಾಡುವ ದೈವೀ ಆಜ್ಞೆ ಕೇಳಿ ಬಂದಿತು. ಕಾಯಜೀವಗಳ ಹೊಲಿಗೆಯನ್ನು ಬಿಚ್ಚಿ ಬೇರ್ಪಡಿಸಿ ಇಚ್ಛಾಮರಣಿಯಾಗಿದ್ದ ನಾನು, ಇಹದ ಕಾಯವನ್ನು ವಿಸರ್ಜಿಸಿ ಪರಮಾತ್ಮನ ಪಾದಾರವಿಂದ ಸೇರಲು ಸಂಕಲ್ಪಿಸಿದೆ. ನಾನು ಬಂದ ಉದ್ದೇಶ ನೆರವೇರಿತ್ತು. ಸಮತಾವಾದದ ತತ್ತ್ವಗಳನ್ನು ವಚನಗಳ ಕಾಲಕೋಶಗಳಲ್ಲಿ ತುಂಬಿ ಲೋಕಕ್ಕಿತ್ತಿದ್ದೆ. ಇನ್ನು ಆ ಬೆಳೆ ಬೆಳೆಯುವ ಹೊಣೆ ಜನತೆಯದಾಗಿತ್ತು. ಕುಂಡಲಿನಿ ಶಕ್ತಿಯನ್ನು ಊರ್ಧ್ವಕ್ಕೇರಿಸಿ, ಪಶ್ಚಿಮ ಚಕ್ರದ ಕವಾಟ ತೆರೆದು ಪ್ರಾಣವಾಯುವನ್ನು ವಿಲೀನಗೊಳಿಸಿದೆ ; ಶುದ್ಧಾತ್ಮ ನನ್ನು ಸರ್ವಾಂತರ್ಯಾಮಿ ಪರಮಾತ್ಮನಲ್ಲಿ ಬೆರೆಸಿದೆ. ಉರಿಯುಂಡ ಕರ್ಪುರದಂತೆ ಬಯಲಲ್ಲಿ ಬಯಲಾದೆ.

ಇಂದು ಶಾರೀರಿಕವಾಗಿ ನಾನಿಲ್ಲ. ಆದರೆ ನಾನೆಂದೆಂದೂ ಇದ್ದೇನೆ! ವಚನ ವಾಙ್ಮಯದಲ್ಲಿ ಜೀವಂತವಾಗಿದ್ದೇನೆ. ವಿಚಾರವಾದಿಗಳ ಮತಿಯಲ್ಲಿ ನಾನಿದ್ದೇನೆ. ಕ್ರಾಂತಿ ಮಾಡಬಯಸುವವರ ಎದೆಯಲ್ಲಿ ಹುದುಗಿದ್ದೇನೆ. ಭಕ್ತಿಯಿಂದ ಶರಣಾದವರ ರಕ್ತನಾಳಗಳಲ್ಲಿದ್ದೇನೆ. ವಿರಾಟ್ ರೂಪಿಯಾಗಿ ನಾನಿದ್ದೇನೆ. ನನ್ನ ಕಥೆ ಸಾಕಿನ್ನು; ನನ್ನ ತತ್ತ್ವಾಚರಣೆಗೆ ಸಿದ್ಧರಾಗಿರಿನ್ನು. ನಿಮಗೆಲ್ಲ ಶುಭ ಹಾರೈಸುವೆ.

ನಿಮ್ಮೆಲ್ಲರ, ವಿಶ್ವಗುರು ಬಸವಣ್ಣ

ಶ್ರೀ ಬಸವ ಭಾರತಿ ವಿದ್ಯಾಲಯ

★ That energy which makes a child hard to manage is the energy which afterward makes him a manager of life.

—*Henry Ward Beecher*

★ ಬಾಳಿನ ಆಶೋತ್ತರಗಳು ಮಕ್ಕಳ ರೂಪದಲ್ಲಿ ಬರುತ್ತವೆ.

—ರವೀಂದ್ರನಾಥ ಠಾಗೋರ್

ವಿಶ್ವವಿಭೂತಿಗಳ ಸಾಲಿನಲ್ಲಿ ಬಸವೇಶ್ವರರು

ಹಂಪ ನಾಗರಾಜಯ್ಯ

ಭೂಮಿಯಿಂದ ಭೂಮದವರೆಗೆ ಸಹಸ್ರೋಪಸಹಸ್ರ ಸಂಖ್ಯೆಯ ವಿಪುಲ ಬಾಹುಗಳಿಂದ ಬಹುರೂಪಿಯಾಗಿ ಬಹುಮುಖಿಯಾಗಿ ಬೆಳೆದು, ತ್ರಿಕಾಲ ತ್ರಿಲೋಕಗಳನ್ನೂ ತನ್ನ ನಿಡುದೋಳ ತೆಕ್ಕೆಯಲ್ಲಿ ತಬ್ಬಿಕೊಂಡು ಅಳಿವಿಲ್ಲದೆ ಅವಿನಾಶಿಯಾಗಿ ತ್ರಿವಿಕ್ರಮನಂತೆ ಬೆಳೆದುನಿಂತ ವ್ಯಕ್ತಿತ್ವವನ್ನು ವಿಭೂತಿಯೆಂದು ಕರೆಯುವರು. ಹಿರಿಯ ವ್ಯಕ್ತಿತ್ವವೊಂದು ಮತ್ತೂ ವಿಸ್ತೃತವಾದಾಗ, ಉನ್ನತವಾದಾಗ, ಅದು ವಿಭೂತಿಯಾಗುತ್ತದೆ. ಸಾಮಾನ್ಯ ತಂತಿ ಶಕ್ತಿಯ ಸಂಚಾರಕ್ಕೆ ಪ್ರಣಾಲಿಕೆಯಾದಾಗ ವಿಭೂತಿಯಾಗುವಂತೆ ಭೂತಿಯೂ ವಿಭೂತಿಯಾಗುತ್ತದೆ. ಮಣ್ಣು ಭೂತಿ. ಆದರೆ ಅದರಿಂದಲೇ ಮಾಡಿದ ಗಣಪತಿ ವಿಭೂತಿ. ಕಲ್ಲು ಭೂತಿ. ಆದರೆ ಕಲ್ಲಿನಿಂದಲೇ ಮಾಡಿದ ಗೊಮ್ಮಟ ಮೂರ್ತಿ ವಿಭೂತಿ. ಕೊಲೆ, ಲೂಟಿ, ದರೋಡೆಗಳಲ್ಲಿದ್ದ ಬೇಡ ಭೂತಿ, ಆದರೆ ಮಹರ್ಷಿ ವಾಲ್ಮೀಕಿ ವಿಭೂತಿ. ಹೀಗೆ ವ್ಯಕ್ತಿಯ ಪ್ರಣಾಲಿಕೆಯಲ್ಲಿ ಪ್ರವಹಿಸುವ ಶಕ್ತಿ ವಿರಾಡ್ ರೂಪಿಯಾದಾಗ, ವಿಶ್ವಶಕ್ತಿಯ ಅಭಿವ್ಯಕ್ತಿಗೆ ಕಾರಣವಾದಾಗ ವಿಭೂತಿಯಾಗುತ್ತದೆ ಆ ವ್ಯಕ್ತಿ ವಿಭೂತಿಯಾಗುತ್ತಾನೆ.

ಕ್ರಾಂತಿಪುರುಷನಾಗಿ ಕಂಗೊಳಿಸಿ, ತತ್ವಜ್ಞಾನಿಯಾಗಿ ಬೆಳಗಿ ಸಮಾಜ ಸುಧಾರಕನಾಗಿ ಶೋಭಿಸಿ, ಕವಿಯಾಗಿ ಭಾವಜೀವಿಯಾಗಿ ಬೆಳಗಿದ ಬಸವಣ್ಣನವರಲ್ಲಿ ವಿಶ್ವಭೂತಿಗಳ ವಿಶಿಷ್ಟ ವೈಶಿಷ್ಟ್ಯವೂ ಸಮಪ್ರಮಾಣದಲ್ಲಿ ಮೇಳವಿಸಿ ಅವರ ವ್ಯಕ್ತಿತ್ವವನ್ನು ಗೌರೀಶಂಕರದ ಎತ್ತರಕ್ಕೆ ಏರಿಸಿವೆ. ಗೌತಮಬುದ್ಧನ ದಯೆ, ವರ್ಧಮಾನ ಮಹಾವೀರನ ಸರಳತೆ, ಕ್ರೈಸ್ತನ ಅನುಕಂಪೆ, ಮಹಮ್ಮದನ ಕೆಚ್ಚು, ಮಹಾತ್ಮ ಗಾಂಧಿಯವರ ಸತ್ಯ ಹಾಗೂ ಅಹಿಂಸೆಯ ನಿಷ್ಠೆ—ಹೀಗೆ ಜಾಗತಿಕ ಮಹಾವಿಭೂತಿಗಳ ಕಲ್ಯಾಣಗುಣಗಳೆಲ್ಲ ಕಲ್ಯಾಣದ ಅಣ್ಣ ಬಸವಣ್ಣನವರಲ್ಲಿ ಮೇಳವಿಸಿವೆ.

ಕಲ್ಯಾಣವೆಂಬ ಪ್ರಣತಿಯಲ್ಲಿ ಬಹು ಬೆಲೆಬಾಳುವ ಭಕ್ತಿರಸವೆಂಬ ತೈಲವನ್ನೆರೆದು ಬೆಳ್ಳಂಬೆಳಕಾಗಿ ಶಿವನ ಪ್ರಕಾಶದಂತೆ ತೊಳಗಿ ಬೆಳಗಿದ ವಿಶ್ವವಿಭೂತಿ ಬಸವಣ್ಣನವರು ಮುತ್ತಿನಹಾರದಂತೆ ನುಡಿದು, ಲಿಂಗ ಮೆಚ್ಚಿ 'ಅಹುದು' ಎಂಬಂತೆ ನಡೆದು, ಸಾರ್ವಕಾಲಿಕವೂ ಶಾಶ್ವತವೂ ಆದ ವಿಶ್ವತತ್ವಗಳನ್ನು ಸಾರಿದವರು. ಇಂಗಳೇಶ್ವರದ ಮಂಗಳ ಮೂರ್ತಿಯಾದ ಇವರು ಶಿವಾನುಭವದ ಸಾಕಾರಮೂರ್ತಿಯಾಗಿ ಜಂಗಮ ಶಿವಶಾಸನ

ದಂತೆ ಆಳಿ ಬಾಳಿದವರು. ದೇಶಕಾಲಜಾತಿಕುಲಮತಗಳ ಮಾನವನಿರ್ಮಿತ ಸಂಕುಚಿತ ಸೀಮಾ ರೇಖೆಯನ್ನು ಸೀಮೋಲ್ಲಂಘನಗೈದು ಕಾಯಕ ತತ್ತ್ವದ ತಾರಕ ಮಂತ್ರವನ್ನು ಉಪದೇಶಿಸಿದ ಶರಣ ಬಸವಣ್ಣ ಜನಪದದ ಅಚ್ಚುಮೆಚ್ಚಿನ ಅಣ್ಣನಾಗಿದ್ದವರು.

ಬಸವಣ್ಣನವರೆಂದರೆ ತಾಯ್‌ತನದ ವಾತ್ಸಲ್ಯದಿಂದ ಶ್ರೀಸಾಮಾನ್ಯನಿಂದ ಶ್ರೀಮಂತರ ತನಕ ಎಲ್ಲ ವರ್ಗದ ಎಲ್ಲ ವರ್ಣದ ಎಲ್ಲ ವಯಸ್ಸಿನ ಇಡಿ ಮಾನವಕೋಟಿಯನ್ನೇ ತನ್ನ ತೋಳ ತೆಕ್ಕೆಯಲ್ಲಿ ತಬ್ಬಿಕೊಂಡ ವಿಶ್ವಪ್ರೇಮದ ವಿಶಾಲಸಾಗರ. ಆತ್ಮವಿಶ್ವಾಸ, ಕಲಿತನದ ಕೆಚ್ಚು, ನ್ಯಾಯನಿಷ್ಠುರತೆ ಹಾಗೂ ನಿಸ್ಪೃಹಭಾವಗಳಿರುವಂತೆ ಬಸವಣ್ಣನವರಲ್ಲಿ ಅನುಕಂಪೆ, ಕರುಣೆ, ದಯೆ, ಸ್ನೇಹ, ನಿಷ್ಕಾಪಟ್ಯ ಮೊದಲಾದ ಮಾನವೀಯ ಗುಣಸಮುದಾಯವೂ ಕಂಡುಬರುತ್ತದೆ.

ಹನ್ನೆರಡನೆಯ ಶತಮಾನದ ಅನೇಕ ಅನುಭಾವಿಗಳು ಒಂದೆಡೆ ಕಲೆತು ಕುಳಿತು ಉಪಯುಕ್ತ ಲೋಕಕಲ್ಯಾಣಾರ್ಥ ಮಾತುಕಥೆಯಲ್ಲಿ ತೊಡಗುತ್ತಿದ್ದ ವೇದಿಕೆಯೇ ಅನುಭವ ಮಂಟಪ. ಪ್ರಜಾಪ್ರಭುತ್ವದ ಪ್ರತೀಕದಂತಿದ್ದ ಅನುಭಾವಿಗಳ ಒಡ್ಡೋಲಗವದು. ಅಲ್ಲಿ ಪ್ರಧಾನವಾದುದು ಕುಲವಲ್ಲ ಶೀಲ. ಉಚ್ಚನೀಚ ಭಾವದ ಕೊಚ್ಚೆ, ಜಾತಿಭೇದದ ದುರ್ಗಂಧ ಅಲ್ಲಿ ಇರಲಿಲ್ಲ. ಹೀಗೆ ಸದಾಚಾರ ಸದ್ಭಕ್ತಿಗಳೇ ಸೋಪಾನವಾಗಿದ್ದ ಈ ಶಿವಾನುಭವ ಮಂಟಪದ ಸದಸ್ಯರೆಲ್ಲ ಸಮಾನವಾಗಿ ಸವಿದರು. ಸಾನುಕಂಪದ ದ್ಯೋತಕವಾದ ಈ ಅನುಭವ ಮಂಟಪದಲ್ಲಿ ವರ್ಣಸಂಕರ ಭಾವನೆಯನ್ನು ಸೂತಕವೆಂದು ದೂರೀಕರಿಸಿ ಸರ್ವಸಮಾನತೆಯ ಸೋದರಭಾವನೆಯಿಂದ ಅದರೊಳಕ್ಕೆ ಬರಲು ಎಲ್ಲರಿಗೂ ಸ್ವಾಗತ ನೀಡಿದರು. ದಶದಿಕ್ಕಿಗೂ ಅದರ ಹೆಚ್ಚಳದ ಹಿರಿಮೆ ಹಬ್ಬಿತು. ಆಂಧ್ರ, ತಮಿಳುನಾಡು, ಸೌರಾಷ್ಟ್ರಾದಿಗಳಿಂದ ಮುಮುಕ್ಷುಗಳನೇಕರು ಅಲ್ಲಿಗೆ ಆಕರ್ಷಿತರಾದರು. ಇದರ ಶ್ರೇಯಸ್ಸಿನ ಬಹುಪಾಲು ಬಸವಣ್ಣನವರಿಗೆ ಸಲ್ಲುತ್ತದೆ.

ಸಂಪ್ರದಾಯಬದ್ಧವಾಗಿ ಬಂದಿದ್ದ ವರ್ಣಭೇದದ ವಜ್ರಭಿತ್ತಿಯನ್ನು ಶಿಥಿಲಗೊಳಿಸಿ, ತಪ್ಪುಭಾವನೆಯನ್ನು ತೊಡೆದು, ವರ್ಗಭೇದವನ್ನು ತೊಳೆದು, ಅಡುಗೆಯ ಮನೆಗಷ್ಟೇ ಸೀಮಿತಳಾಗಿದ್ದ ಸ್ತ್ರೀಗೆ ಅನುಭವಮಂಟಪದಲ್ಲೂ ಸಮಾನಸ್ಥಾನವನ್ನಿತ್ತು ಅಂದಿನ ಸಮಾಜದಲ್ಲಿ ಅಪೂರ್ವವಾದ ಒಂದು ಪ್ರೇಮದ ಪ್ರಭಾವಳಿಯನ್ನು ನಿರ್ಮಿಸಿದ ಕೀರ್ತಿ ಬಸವಣ್ಣನವರದು. ಕುಲವನ್ನು ಕುರಿತ ಅವರ ನಿಲುವು ನೋಡಿ :

ಆವ ಕುಲವಾದರೇನು ? ಶಿವಲಿಂಗವಿದ್ದವನೆ ಕುಲಜನು
ಕುಲವನರಸುವರೆ ಶರಣರಲ್ಲಿ ಜಾತಿಸಂಕರನಾದ ಬಳಿಕ ?

ಶಿವೇಜಾತಕುಲೇ ಧರ್ಮ । ಪೂರ್ವಜನ್ಮ ವಿವರ್ಜಿತಃ
ಉಮಾ ಮಾತಾ ಪಿತಾರುದ್ರೋ । ಈಶ್ವರಃ ಕುಲಮೇವಚ

ಎಂಬುದಾಗಿ, ಒಕ್ಕುದ ಕೊಂಬೆನವರಲ್ಲಿ, ಕೂಸ ಕೊಡುವೆ
ಕೂಡಲಸಂಗಮದೇವಾ, ನಂಬುವೆ ನಿಮ್ಮ ಶರಣರನು ||೭೧೭||*

ಆದ್ಯರಿಗಲ್ಲದೆ ವೇದ್ಯವಾಗದು : ಮಾಣಿ ಭೋ, ಮಾಣಿ ಭೋ !
ಶಿವಭಕ್ತನೇ ಕುಲಜ :
ಕೈವರ್ತಕೇ ಗರ್ಭಸಂಭಾವನೇ ಮಾರ್ಕಂಡೇಯ ಮಹಾಮುನಿಃ
ತಪಸಾಜಾಯತೇ ವಿಪ್ರಕುಲೇ ತಸ್ಮಾತ್ ಜಾತಿಭೇದಂ ನ ಕುರ್ಯಾತ್
ಜಾತನಲ್ಲ ಅಜಾತನಲ್ಲ.
ಕೂಡಲಸಂಗನ ಶರಣರು ನಿಸ್ಸೀಮರಯ್ಯಾ ||೭೦೧||

ಚತುರ್‌ವೇದಿಯಾದರೇನು ? ಲಿಂಗವಿಲ್ಲದವನೇ ಹೊಲೆಯ !
ಶ್ವಪಚನಾದರೇನು ? ಲಿಂಗವಿದ್ದವನೇ ವಾರಣಾಸಿ
ಆತನ ನುಡಿಗಡಣವೇ ಲೇಸು, ಆತ ಜಗಕ್ಕೆ ಪಾವನ ;
ಆತನ ಪ್ರಸಾದವೆನಗಮೃತಸೇವನೆ !

ನ ಮೇ ಪ್ರಿಯಶ್ಚತುರ್ವೇದೀ । ಮದ್‌ಭಕ್ತಃ ಶ್ವಪಚೋಪಿ ವಾ
ತಸ್ಮಾದೇವ ತತೋಗ್ರಾಹ್ಯಂ । ಸ ಚ ಪೂಜ್ಯೋ ಯಥಾಹ್ಯಹಂ

ಕೂಡಲ ಸಂಗಮದೇವನನರಿತು ಪೂಜಿಸಿದಾತ
ಷಡುದರುಶನಕ್ಕಧಿಕ, ಜಗಕ್ಕೆ ಪಾವನ ನೋಡಾ ||೭೦೫||

ಇದರಂತೆ ೬೯೫, ೬೯೮ ರಿಂದ ೭೦೦ ಮತ್ತು ೭೦೪ ನೆಯ ಸಂಖ್ಯೆಯ ವಚನಗಳನ್ನು ನೋಡಿ.

ಈ ರೀತಿಯಲ್ಲಿ ಬಸವಣ್ಣನವರು ಲಿಂಗವಿದ್ದವರ ಮನೆಯೇ ಕೈಲಾಸವೆಂದರು :

ನೆಲನೊಂದೆ ಹೊಲೆಗೇರಿ—ಶಿವಾಲಯಕ್ಕೆ ;
ಜಲವೊಂದೆ ಶೌಚಾಚಮನಕ್ಕೆ
ಕುಲವೊಂದೆ ತನ್ನ ತಾನರಿದವಂಗೆ
ಫಲವೊಂದೆ ಷಡುದರುಶನ ಮುಕ್ತಿಗೆ
ನಿಲವೊಂದೆ, ಕೂಡಲಸಂಗಮದೇವಾ, ನಿಮ್ಮನರಿದವಂಗೆ ||೮೭೮||

ಆದುದರಿಂದ ಹುಟ್ಟಿನಿಂದ ಕುಲವನ್ನು ಅಳೆಯುವುದಕ್ಕಿಂತಲೂ ಆಚರಣೆಯಿಂದ ಕುಲವನ್ನು ನಿರ್ಧರಿಸುವುದು ಸರಿಯಾದ ಮಾರ್ಗವೆಂಬುದು ಬಸವಣ್ಣನವರ ಅಭಿಪ್ರಾಯವಾಗಿದೆ :

ಕೊಲುವವನೇ ಮಾದಿಗ, ಹೊಲಸು ತಿಂಬವನೇ ಹೊಲೆಯ !
ಕುಲವೇನೋ, ಅವಂದಿರ ಕುಲವೇನೋ ?
ಸಕಲಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲಸಂಗನ ಶರಣರೇ ಕುಲಜರು ||೫೯೦||

ಗಂಡು-ಹೆಣ್ಣು ಎಂಬ ಭೇದಭಾವವನ್ನು ಬಿಟ್ಟುಕೊಟ್ಟು, ಮೇಲು ಕೀಳುಗಳ ತಾರತಮ್ಯ ಭಾವನೆಯನ್ನು ಮೆಟ್ಟಿ ನಿಲ್ಲುವುದು ಸಾಮಾನ್ಯ ಚೇತನಕ್ಕೆ ಅಸಾಧ್ಯವಾದುದು. ಆದರೆ ಅಣ್ಣನವರು ಅದನ್ನು ಅನುಭವಕ್ಕೆ ಅಳವಡಿಸಿದವರು. ಮಾನವ ಮಾನವರನ್ನು ವಿಭಜಿಸಿ ಛಿನ್ನಭಿನ್ನಗೊಳಿಸುವ ಈ ಪ್ರತ್ಯೇಕತೆಯನ್ನು ಹೋಗಲಾಡಿಸಿ ಅದರ ಸ್ಥಾನದಲ್ಲಿ ಒಗ್ಗಟ್ಟು ಒಡನಾಟಗಳನ್ನು ಮೂಡಿಸಿದರು. ಶಿವಶರಣರಂತೆ ಶಿವಶರಣೆಯರೂ ಸಮಾನಸ್ಕಂಧರಾಗಿ ಸಮಾಜಸೇವಾ ನಿರತರಾದರು. ಮಹಾದೇವಿಯಕ್ಕ, ನೀಲಾಂಬಿಕೆ ಮುಂತಾದ ಮಹಿಳಾ ಮಣಿಗಳು ಮುಂದೆ ಬಂದರು.

ಬಸವಣ್ಣನವರು ಪ್ರಧಾನವಾಗಿ ಬೋಧಕರಲ್ಲ ಸಾಧಕರು, ಸುಧಾರಕರು, ಅವರಿಗೆ ಏನಾದರೂ ಒಂದು ವಿಶೇಷಣವನ್ನೇ ಕೊಟ್ಟು ಕರೆಯಬೇಕಾದಲ್ಲಿ ಆಗ ಅವರನ್ನು ದೀನದಲಿತ ಸಮಾಜೋದ್ಧಾರಕರೆಂದು ಕರೆಯಬಹುದು. ಇದಕ್ಕಾಗಿ ಅವರು ಅದ್ಭುತ, ಅತೀತ ಅಲೌಕಿಕ ವಿಚಾರಧಾರೆಯನ್ನು ಆಶ್ರಯಿಸಲಿಲ್ಲ. ಅವರು ಕೇವಲ ತಮ್ಮ ರಕ್ತಗತವಾದ ವಿಚಾರಗಳನ್ನಷ್ಟೇ ತಿಳಿಯ ಹೇಳಿದರು. ಬಸವಣ್ಣನವರ ದೃಷ್ಟಿ ವ್ಯಷ್ಟಿದೃಷ್ಟಿಯಲ್ಲ, ಅವರದು ಸಮಷ್ಟಿದೃಷ್ಟಿ. ಭಕ್ತನಿರ್ದ ಠಾವೇ ದೇವಲೋಕವೆಂದೂ, ದೇವಲೋಕ ಮರ್ತ್ಯಲೋಕವೆಂಬುದು ಬೇರೆ ಮತ್ತೊಂದಿಲ್ಲವೆಂದೂ ಖಚಿತಗೊಳಿಸಿದರು. ಕರ್ತಾರನ ಕಮ್ಮಟವಾದ ಇಲ್ಲಿ ಸಲ್ಲುವವರು ಮುಂದೆ ಅಲ್ಲಿಯೂ, ಎಲ್ಲಿಯೂ ಸಲ್ಲುವರೆಂಬುದನ್ನು ಸಾರಿದರು.

ಮುನ್ನ ಮಾಡಿದ ಪಾಪವೆಂತು ಹೋಹುದೆಂದು ಚಿಂತಿಸಬೇಡ
ಕಹಿಸೋರೆಯಕಾಯ ತಂದು ವಿಭೂತಿಯ ತುಂಬಿದೊಡೆ
ಸಿಹಿಯಾಗದೆ ಮೂರು ದಿವಸಕ್ಕೆ ?
ಹಲವು ಕಾಲ ಕೊಂದ ಸೂನೆಗಾಱನ ಕತ್ತಿಯಾದರೇನು
ಪರುಷ ಮುಟ್ಟಲಿಕೆ ಹೊನ್ನಾಗದೆ, ಅಯ್ಯಾ ?

ಲಲಾಟದಲ್ಲಿ ವಿಭೂತಿ ಬರಲಿಕೆ
ಪಾಪ ಪಲ್ಲಟವಾಗದೆ, ಕೂಡಲಸಂಗಮದೇವಾ ? ||೭೩||

ಪಾತಕ ಶತಕೋಟಿಯನೊರಸಲು ಸಾಲದೆ ಒಂದು ಶಿವನಾಮ ?
ಸಾಲದೆ ಒಂದು ಹರನ ನಾಮ ?
ಕೂಡಲಸಂಗಮದೇವಾ
ನಿಮ್ಮ ಉಂಡಿಗೆಯ ಪಶುವ ಮಾಡಿದೆಯಾಗಿ ? ||೮೪||

ಒಲವಿಲ್ಲದ ಪೂಜೆ ! ನೇಹವಿಲ್ಲದ ಮಾಟ !!
ಆ ಪೂಜೆಯು, ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ, ಚಿತ್ರದ ಕಬ್ಬು ಕಾಣಿರಣ್ಣಾ
ಅಪ್ಪಿದರೆ ಸುಖವಿಲ್ಲ, ಮೆಲ್ಲಿದರೆ ರುಚಿಯಿಲ್ಲ
ಕೂಡಲಸಂಗಮದೇವಾ ನಿಜವಿಲ್ಲದವನ ಭಕ್ತಿ ||೧೬೬||

ಅಚ್ಚ ಅಹಿಂಸಾವಾದಿಯಾಗಿ ಸಕಲಜೀವರಿಗೆ ಲೇಸನೇ ಬಯಸುವ ಬಸವಣ್ಣನವರು ಉಪಮಿಸಬಾರದ ಉಪಮಾತೀತ ವಿಶ್ವವಿಭೂತಿಯಾಗಿ ನಿಲ್ಲುತ್ತಾರೆ. ಅವರು ದಯೆಯೇ ಧರ್ಮದ ಮೂಲವೆಂದು ಸಾರಿದ ಮಹಾ ಮಾನವ ಪ್ರೇಮಿ. ಅವರ ಈ ಮೃದು ಮಧುರ ಮನೋವೃತ್ತಿಗೆ ಮಾರು ಹೋಗದವರು ಯಾರು ? ಅವರ ಭಕ್ತಿಯ ಬೆಳಕಿಗೆ ಒಳಗಾಗದವರು, ಬೆರಗಾದವರು ಯಾರು ?

ಬಸವಣ್ಣನವರು ತಮ್ಮ ನಿರ್ಭೀತವಾದ ನಿಸ್ಸಂಕೋಚವಾದ ಆತ್ಮನಿರೀಕ್ಷಣೆಯಿಂದ ನಿಜವೆಂದು ತೋರಿದುದಷ್ಟನ್ನೇ ನಿಷ್ಠುರವಾಗಿ ತಿಳಿಸಿದರು. ಅವರು ತಮ್ಮ ದೋಷಗಳಿಗೆ ಮುಸುಕು ಹಾಕಲಿಲ್ಲ. ತಮ್ಮಲ್ಲಿರುವ ತಪ್ಪುಗಳಿಗೆ ತೆರೆಹಾಕದೆ, ಕುಂದುಗಳಿಗೆ ಕುರುಡಾಗದೆ ಪ್ರಾಮಾಣಿಕವಾಗಿ ನಡೆದುಕೊಳ್ಳುವುದು ಮಹಾತ್ಮರ ಲಕ್ಷಣ. ಬಸವಣ್ಣನವರೂ ತಮ್ಮಲ್ಲಿನ ನ್ಯೂನತೆಗಳನ್ನು ನಾನಾ ಬಗೆಯಲ್ಲಿ ಅನೇಕ ವಚನಗಳಲ್ಲಿ ತೋಡಿಕೊಂಡಿದ್ದಾರೆ. ಹೃದಯಕ್ಷೇತ್ರದ ದೇವಕೃಷಿಕನ ಈ ವಚನಗಳನ್ನು ಗಮನಿಸಿ :

೧. ಈ ಮಾಯೆಯ ಕಳೆವೊಡೆಯೆನ್ನಳವಲ್ಲ
೨. ಕೊಂದುದಯ್ಯಾ ಈ ಮಾಯೆ
೩. ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ
೪. ಎನ್ನೊಳಗೇನೂ ಶುದ್ಧವಿಲ್ಲ ನೋಡಯ್ಯಾ

೫. ಕೊಂಬೆಯ ಮೇಲಣ ಮರ್ಕಟನಂತೆ
ನಿಂದಲ್ಲಿ ನಿಲ್ಲಲೀಯದೆನ್ನ ಮನವು
೬. ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆನ್ನ
ಬಾಳುವೆ : ಈ ನಾಯಿತನವ ಮಾಣಿಸು ಕೂಡಲಸಂಗಮದೇವಾ
೭. ಸುಡಲೀ ಮನವೆನ್ನನುಡುಹನ ಮಾಡಿತ್ತು
ನಡೆವಲ್ಲಿ ನುಡಿವಲ್ಲಿಯಧಿಕನೆಂದೆನಿಸಿತ್ತು
೮. ಕಾಯವಿಕಾರಕ್ಕೆ ತಱಿಸಲುವೋದೆನು
೯. ಹಿಂಗದು ಮನದಲ್ಲಿ ನಾನಾ ವಿಕಾರವು
೧೦. ಮತಿಗೆಟ್ಟೆನು ಮನದ ವಿಕಾರದಿಂದ

ಇದರಂತೆ ೪೬, ೪೭, ೪೮, ೫೦ಮತ್ತು ೨೭೧ನೆಯ ಸಂಖ್ಯೆಯ ವಚನಗಳನ್ನು ಅವಶ್ಯ ಅವಲೋಕಿಸಬೇಕು. ಇಲ್ಲೆಲ್ಲ ಶಿವಪಥ ಅವರಿಗೆ ಅಸಾಧ್ಯವಾಗುವಂತೆ ಅವರಲ್ಲಿ ಕಾಣಿಸಿಕೊಂಡ ಕಾಯವಿಕಾರ, ಮನೋವಿಕಾರ, ಇಂದ್ರಿಯವಿಕಾರವೇ ಮೊದಲಾದ ನಾನಾ ವಿಕಾರಗಳನ್ನು ಅಹಂಕಾರ ಮಮಕಾರಗಳನ್ನೂ ಮತ್ತೆ ಮೂಡದಂತೆ ಬುಡಸಹಿತ ನಿರ್ನಾಮಗೊಳಿಸಲು ಸಂಗಮನಲ್ಲಿ ಸೆರಗೊಡ್ಡಿ ಬೇಡಿದ್ದಾರೆ. ಮತ್ತೆ ಮುಂದೆ ಹಾಗೆ ಆಗದಂತೆ ಎಚ್ಚರವಿರುವುದಾಗಿ ಪ್ರತಿಜ್ಞೆ ಮಾಡಿದ್ದಾರೆ :

ಎನ್ನ ತಪ್ಪು ಅನಂತಕೋಟಿ, ನಿಮ್ಮ ಸೈರಣೆಗೆ ಲೆಕ್ಕವಿಲ್ಲಾ
ಇನ್ನು ತಪ್ಪಿದೆನಾದರೆ ನಿಮ್ಮ ಪಾದವೇ ದಿಬ್ಯ
ಕೂಡಲಸಂಗಮದೇವಯ್ಯಾ
ನಿಮ್ಮ ಪ್ರಮಥರ ಮುಂದೆ ಕಿನ್ನರ ಬೊಮ್ಮಣ್ಣನೆ ಸಾಕ್ಷಿ ॥೩೨॥

ಈ ಬಗೆಯ ಆತ್ಮ ನಿವೇದನೆ ವಿಭೂತಿಪಟ್ಟಕ್ಕೇರಿಸಿದೆ ಅಣ್ಣನವರನ್ನು. ಇನ್ನು ಅವರು ಮುಖಮೋರೆ ನೋಡದೆ ನಿರ್ದಾಕ್ಷಿಣ್ಯವಾಗಿ ಜನತೆಯ ಲೋಪದೋಷಗಳನ್ನು ಖಂಡಿಸಿದುದಂತೂ ಲೋಕ ವಿಖ್ಯಾತವೇ ಆಗಿದೆ. ಮರವ ಕಂಡರೆ ಸುತ್ತುವವರನ್ನೂ, ನೀರ ಕಂಡರೆ ಮುಳುಗುವವರನ್ನೂ ಲೇವಡಿ ಮಾಡಿ ಚಳಿ ಬಿಡಿಸಿದ್ದಾರೆ. ತಮ್ಮಲ್ಲಿ ತಪ್ಪುಗಳನ್ನಿಟ್ಟುಕೊಂಡು ಕಂಡವರ ಕುಂದುಗಳನ್ನು ತೋರಿಸುತ್ತಿದ್ದವರಿಗೆ "ಲೋಕದ ಡೊಂಕ ನೀವೇಕೆ ತಿದ್ದುವಿರಿ, ಪರರಚಿಂತೆ ನಿಮಗೇಕೆ, ನಿಮ್ಮ ನಿಮ್ಮ ತನುವನ್ನು ಮೊದಲು ಸಂತಯಿಸಿಕೊಳ್ಳಿ" ಎಂದು ತಿಳಿಯ ಹೇಳಿದರು. ಅದರಂತೆ ಬಹಿರಂಗದ ಮೆರೆತವನ್ನು ನಿಂದಿಸಿ ಅಂತರಂಗ ಶುದ್ಧಿಯ ಹಿರಿಯ ಮೌಲ್ಯ ಸಾರಿದರು. ಮಾನವ ತನ್ನ ಮನಃಶುದ್ಧಿಗೆ ಮೊದಲು ಮನ್ನಣೆ ಕೊಡಬೇಕೆಂದು ತಿಳಿಯ ಹೇಳಿದರು.

ಸ್ವಧರ್ಮೀಯರೆನ್ನದೆ, ಪರಧರ್ಮೀಯರೆನ್ನದೆ ತಪ್ಪಿತಸ್ಥರನ್ನೆಲ್ಲ ತಿದ್ದಿದರು, ನೇರ್ಪುಗೊಳಿಸಿದರು :

ಒಳಗೆ ಕುಟಿಲ : ಹೊಱಗೆ ವಿನಯವಾಗಿ ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು !
ಅವರು ಸತ್‌ಪಥಕ್ಕೆ ಸಲ್ಲರು, ಸಲ್ಲರಯ್ಯಾ.
ಒಳಹೊರಗೊಂದಾಗದವರಿಗೆ ಅಳಿಯಾಸೆದೋಱಿ
ಬೀಸಾಡುವನವರ ಜಗದೀಶ ಕೂಡಲಸಂಗಮದೇವಾ ॥ ೯೬ ॥
ಸಾರ ! ಸಜ್ಜನರ ಸಂಗವ ಮಾಡುವುದು
ದೂರ! ದುರ್ಜನರ ಸಂಗ ಬೇಡವಯ್ಯಾ !
ಆವ ಹಾವಾದರೇನು ? ವಿಷವೊಂದೆ ;
ಅಂತಹವರ ಸಂಗ ಬೇಡವಯ್ಯಾ
ಅಂತರಂಗ ಶುದ್ಧವಿಲ್ಲದವರ ಸಂಗ
ಸಿಂಗಿ ಕಾಳಕೂಟವಿಷವೊ, ಕೂಡಲಸಂಗಮದೇವಾ ॥ ೧೧೯ ॥

ಇದರಂತೆ ೯೯, ೧೦೪, ೫೫೫, ೫೬೧, ೫೭೫, ೫೭೬, ೫೭೭ ಮುಂತಾದ ವಚನಗಳನ್ನು ನೋಡಬಹುದು. ಇನ್ನು ಸ್ವಧರ್ಮೀಯರನ್ನೂ ನಿಂದಿಸಿದ ವಚನಗಳಲ್ಲಿ ಒಂದನ್ನು ಅವಲೋಕಿಸಬಹುದು :

ಅರ್ಥರೇಖೆ ಇದ್ದಲ್ಲಿ ಫಲವೇನು ಆಯುಷ್ಯರೇಖೆ ಇಲ್ಲದನ್ನಕ್ಕ?
ಹಂದೆಯ ಕೈಯಲ್ಲಿ ಚಂದ್ರಾಯುಧವಿರ್ದು ಫಲವೇನು?
ಅಂಧಕನ ಕೈಯಲ್ಲಿ ದರ್ಪಣವಿರ್ದು ಫಲವೇನು?
ಮರ್ಕಟನ ಕೈಯಲ್ಲಿ ಮಾಣಿಕವಿರ್ದು ಫಲವೇನು?
ನಮ್ಮ ಕೂಡಲಸಂಗನ ಶರಣರನಱಿಯದವರ ಕೈಯಲ್ಲಿ
ಲಿಂಗವಿರ್ದು ಫಲವೇನು, ಶಿವಪಥವನಱಿಯದನ್ನಕ್ಕ? ॥ ೧೦೮ ॥

ಧರ್ಮದ ಹೆಸರಿನಲ್ಲಿ, ಮತದ ಸೋಗಿನಲ್ಲಿ ನಡೆವ ಡಂಭಾಚಾರಗಳನ್ನು ಅವಹೇಳನಮಾಡಿ ಅಲ್ಲಗಳೆದಿದ್ದಾರೆ. ಬಸವಣ್ಣನವರು ಈ ನ್ಯಾಯ ನಿಷ್ಠುರತೆಯ , ಪರಮ ಪ್ರಾಮಾಣಿಕತೆಯ ಫಲವಾಗಿ ಹಲವರ ವಿರೋಧವನ್ನೂ, ಕೆಲವರ ನಿಂದೆಯನ್ನೂ ಎದುರಿಸಿದರು. ಆದರೆ ಅದರಿಂದ ಅವರು ಹಿಗ್ಗದೆ ಕುಗ್ಗದೆ ಸಾಧನೆ ಮುಂದುವರಿಸಿ ಸಫಲತೆ ಪಡೆದವರು. ಇದರಿಂದಾಗಿ ಅವರ ಭಾಷೆ ಆಚರಣೆಯ ಭಾಷೆಯಾಗಿ, ಅವರ ಮಾತು ಅನುಭವದ

ಮಾತಾಗಿ ತೋರಿದೆಯೇ ಹೊರತು ಅದೊಂದು ಮತ ಪ್ರಚಾರಕನ, ಧರ್ಮಬೋಧಕನ 'ಪರ್ವತಪ್ರಸಂಗ'ವಾಗಿಲ್ಲ.

ಬಸವಣ್ಣನವರು ನಿರ್ದಾಕ್ಷಿಣ್ಯವಾಗಿ, ನಿಷ್ಠುರರಾಗಿ ನುಡಿದರೂ ಅವರು ದಯೆಯ ದ್ಯೋತಕವಾಗಿದ್ದರು; ನಯ ವಿನಯ ನ್ಯಾಯಗಳ ಸಾಕಾರ ಸ್ವರೂಪಿಯಾಗಿದ್ದರು. ಇದು ಮಹಾತ್ಮರ ಲಕ್ಷಣವಲ್ಲದೆ ಮತ್ತೇನು? ಅವರು 'ವಜ್ರಾದಪಿ ಕಠೋರಾನಿ' ಯಾಗಿದ್ದರೂ 'ಮೃದೂನಿ ಕುಸುಮಾದಪಿ' ಕೂಡ ಆಗಿರುತ್ತಾರೆ. ಬಸವಣ್ಣನವರು ಬೆಳೆದ ಗೊನೆವಾಳೆಯಂತೆ ಬಾಗಿ ಬಾಳಿದವರು, ಬೀಗಿ ಗರ್ವದಿಂದ ಆಳಿದವರಲ್ಲ.

ಕಂಡ ಭಕ್ತರಿಗೆ ಕೈಮುಗಿವಾತನೇ ಭಕ್ತ
ಮೃದುವಚನವೇ ಸಕಲಜಪಂಗಳಯ್ಯಾ
ಮೃದುವಚನವೇ ಸಕಲತಪಂಗಳಯ್ಯಾ
ಸದುವಿನಯವೇ ಸದಾಶಿವನೊಲಿಮೆಯಯ್ಯಾ
ಕೂಡಲಸಂಗಯ್ಯ ನಂತಲ್ಲದೊಲ್ಲನಯ್ಯಾ ॥ ೨೪೪ ॥

"ಏನಿ ಬಂದಿರಿ, ಹದುಳವಿದ್ದಿರೆ?" ಎಂದರೆ
ನಿಮ್ಮ ಮೈಸಿರಿ ಹಾರಿಹೋಹುದೇ ?
"ಕುಳ್ಳಿರೆ"ಂದರೆ ನೆಲ ಕುಳಿಹೋಹುದೆ ?
ಒಡನೆ ನುಡಿದರೆ ಶಿರ–ಹೊಟ್ಟೆಯೊಡೆವುದೆ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿರ್ದೊಡೆ,
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು ?॥೨೪೧॥

ತಮಗಿಂತ ಕಿರಿಯರೂ, ಶಿವಶರಣರಿಗಿಂತ ಹಿರಿಯರೂ ಇಲ್ಲವೆಂದು ಸಾರಿ ವಿನಯ ಮೂರ್ತಿಯಾಗಿ ವಿಜೃಂಭಿಸಿದವರು ಅಣ್ಣನವರು. 'ಆನು ನಿಮ್ಮ ಬಂಟರ ಬಂಟ, ಲೆಂಕರ ಲೆಂಕ"ನೆಂದೂ, 'ಮೇಲಾಗಲೊಲ್ಲೆನು ಕೀಳಾಗಲಲ್ಲದೆ" ಎಂದೂ ಹೇಳಿರುವುದಲ್ಲದೆ,

ಅಯ್ಯಾ ನಿಮ್ಮ ವಂಶಾವಳಿಯಲು
ಒಬ್ಬ ತೊತ್ತಿನ ಮಗ ಹುಟ್ಟಿದಾತನ ತೊತ್ತಿನ ಮಗ ನಾನಯ್ಯಾ
ಬಳಿದೊತ್ತು, ಬಳಗದೊತ್ತು, ವಂಶದೊತ್ತು ನಾನಯ್ಯಾ
ಕೂಡಲಸಂಗಮದೇವಾ
ನಿಮ್ಮ ಒಡೆತನಕ್ಕೆ ಕೇಡಿಲ್ಲವಾಗಿ
ಎನ್ನ ತೊತ್ತುತನಕ್ಕೆ ಕೇಡಿಲ್ಲಾ. ॥ ೩೫೩ ॥

ಎಂಬುದಾಗಿ ತಮ್ಮ ನಮ್ರತೆಯನ್ನು ತೋಡಿಕೊಂಡಿದ್ದಾರೆ. ಭಕ್ತಿಭಾಂಡಾರಿಯಾಗಿ ಮೆರೆದ ಬಸವಣ್ಣನವರು ವಿನಯಭಾಂಡಾರಿಯೂ ಆಗಿ ಶೋಭಿಸಿದ್ದಾರೆ. ಇಂದಿಂಗೆ ನಾಳಿಂಗೆ ಎಂದು ಕೂಡಿಡುವ ಸಂಗ್ರಹಬುದ್ಧಿ, ಬಚ್ಚಿಡುವ ಸಂಗ್ರಹದೃಷ್ಟಿ ಅವರದಲ್ಲ. ಇದನ್ನೇ ಜೈನಧರ್ಮದ ಪರಿಭಾಷೆಯಲ್ಲಿ ಹೇಳುವುದಾದರೆ ಅಣ್ಣನವರು ಅಪರಿಗ್ರಹ ವಾದಿ. ಅಪರಿಗ್ರಹವೆಂದರೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಪಡೆಯುವುದೆಂದರ್ಥ. ನಿರಹಂಕಾರದ ನಿಲಯವಾದ ಅಣ್ಣನವರು ನಿಷ್ಠೆ, ನೈರ್ಮಲ್ಯ ಹಾಗೂ ನಿಷ್ಕಾಮಗಳ ನೆಲೆಯಾಗಿದ್ದಾರೆ:

ಬ್ರಹ್ಮಪದವಿಯನೊಲ್ಲೆ
ವಿಷ್ಣುಪದವಿಯನೊಲ್ಲೆ
ರುದ್ರಪದವಿಯನೊಲ್ಲೆ
ಮತ್ತಾವಪದವಿಯನೊಲ್ಲೆನಯ್ಯಾ ।
ಕೂಡಲಸಂಗಮದೇವಾ, ನಿಮ್ಮ
ಸದ್‌ಭಕ್ತರ ಪಾದವನರಿದಪ್ಪ
ಮಹಾಪದವಿಯನೆ ಕರುಣಿಸಯ್ಯಾ. ॥೩೬೦॥

ಎನ್ನಲ್ಲಿ ಭಕ್ತಿ ಸಾಸುವೆಯ ಷಡ್ಭಾಗದನಿತಿಲ್ಲ
ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು
ನಾನೇನು ಪಾಪವ ಮಾಡಿದೆನೊ:
ಬೆಳೆಯದ ಮುನ್ನವೆ ಕೊಯ್ವರೆ? ಹೇಳಾ, ಅಯ್ಯಾ
ಇರಿಯದ ವೀರ! ಇಲ್ಲದ ಸೊಬಗವ
ಎಲ್ಲಾ ಒಡೆಯರು ಏರಿಸಿ ನುಡಿವರು
ಎನಗಿದು ವಿಧಿಯೆ ಕೂಡಲ ಸಂಗಮದೇವಾ? ॥ ೩೭೫ ॥

ಎನ್ನವರೊಲಿದು ಹೊನ್ನಶೂಲದಲ್ಲಿಕ್ಕಿದರೆನ್ನ ಹೊಗಳಿ, ಹೊಗಳಿ !
ಎನ್ನ ಹೊಗಳತೆ ಎನ್ನನಿಮ್ಮೆಯ್ಗೊಂಡಿತ್ತಲ್ಲಾ
ಅಯ್ಯಾ, ನಿಮ್ಮ ಮನ್ನಣೆಯೇ ಮಸೆದಲಗಾಗಿ ತಾಗಿತ್ತಲ್ಲಾ
ಅಯ್ಯೋ! ನೊಂದೆನು, ಸೈರಿಸಲಾರೆನು
ಕೂಡಲಸಂಗಮದೇವಾ, ನೀನೆನಗೊಳ್ಳಿದನಾದರೆ
ಎನ್ನ ಹೊಗಳತೆಗಡ್ಡಬಾರಾ, ಧರ್ಮೀ ! ॥೩೭೬॥

ಬಸವಣ್ಣನವರು ಒಳ್ಳೆಯ ಸಂಘಟನಕಾರರು. ಅವರ ಕಾರ್ಯಸಂಘಟನಾಶಕ್ತಿ ಅಸಾಧಾರಣವಾದುದು. ಅಲ್ಪಕಾಲದ ಅವಧಿಯಲ್ಲಿ ಕಲ್ಪಾಂತಸ್ಥಾಯಿಯಾದ ಹೊಸ

ಸಮಾಜದ ಸಂಘಟನೆಯ ಮಹತ್ ಸಾಧನೆಯನ್ನು ಮಾಡಿದ್ದಾರೆ. ಅವರ ವಿಚಾರ ಪ್ರಣಾಲಿ ಎಲ್ಲರಿಗೂ ನಿಲುಕುವಷ್ಟು ಸರಳ ಸುಲಭವಾದುದಾಗಿತ್ತು. ದಾಸೋಹದ ದೊಡ್ಡಸ್ತಿಕೆಯನ್ನೂ, ಕಾಯಕದ ಮಹತ್ವವನ್ನೂ, ಆತ್ಮಸಾಕ್ಷಿಯಾಗಿ ಪ್ರಾಮಾಣಿಕವಾಗಿ ಬಾಳುವ ಬಗೆಯನ್ನೂ ಸಾರಿ ತೋರಿದುದಲ್ಲದೆ ಶಿವಾನುಭವ ಮಂಟಪ ಕಟ್ಟಿ ಅನುಭಾವಿಗಳಾದ ಶಿವಶರಣರನ್ನು ಒಂದೆಡೆ ಕಲೆ ಹಾಕಿದುದಂತೂ ಅವರ ಕಾರ್ಯರಂಗದ ವ್ಯಾಪಕತೆಯನ್ನು ಸ್ಪಷ್ಟಪಡಿಸುತ್ತದೆ.

ಬಸವಣ್ಣನವರ ಬದುಕು ಒಂದು ಬೃಹದ್ ಭಾವಗೀತೆ. ಅವರು ಭವ್ಯಜೀವಿಯಾಗಿರುವಂತೆ ಭಾವಜೀವಿಯೂ ಆಗಿದ್ದವರು. ಅವರ ಅನೇಕ ವಚನಗಳು ಸಹಜ ಸ್ಫುರಣದ ಸ್ಫೂರ್ತಿಯ ಸ್ಫುಲಿಂಗಗಳು. ಇದಕ್ಕೆ ತಾರ್ಕಣೆಯಾಗಿ ಸುಮಾರು ನೂರು ವಚನಗಳನ್ನು ಉದಾಹರಿಸಬಹುದು. ಸರಳ ಹಾಗೂ ಪರಿಶುದ್ಧವಾದ ಅವರ ನಡೆ ನುಡಿ ಮಹಾತ್ಮರ ಬಾಳಿಗೆ ದಿವ್ಯ ಸಾಕ್ಷಿಯಂತಿವೆ. ಅವರ ರೀತಿ ಜಗತ್ತಿನ ಎಲ್ಲ ಮಹಾತ್ಮರ ರೀತಿ. ಕರುನಾಡಿನ ಕೊರಡು ವಿಚಾರಗಳನ್ನು ಕೊನರಿಸಿ, ಬರಡು ಹೃದಯಗಳನ್ನು ಹಯನಾಗಿಸಿ, ಭಾರತದ ಭಾಗ್ಯವಾಗಿ, ಕನ್ನಡಿಗರ ವರವಾಗಿ ಹುಟ್ಟಿದವರು ಅವರು. ಅವರು ಮನಸ್ಸು ಮಾಡಿದ್ದರೆ ಸಂಸ್ಕೃತದಲ್ಲೇ ಬರೆಯಬಹುದಿತ್ತು. ಆದರೆ ಅವರು ತಮ್ಮ ತಾಯ್ನುಡಿಯಾದ ಸಿರಿಗನ್ನಡದಲ್ಲಿ ಒಲಿದಂತೆ ಹಾಡಿದರು. ದೇಶಾಭಿಮಾನಕ್ಕೆ ಪೂರಕವಾದ ಈ ಭಾಷಾಭಿಮಾನ ಶ್ಲಾಘನೀಯವೂ ಅನುಕರಣಯೋಗ್ಯವೂ ಆಗಿದೆ. ಸಾಮಾನ್ಯ ಜನತೆಗೆ ತಿಳಿಯ ಹೇಳಬೇಕಾದರೆ ಜನತೆಯ ಭಾಷಾ ಮಾಧ್ಯಮವನ್ನೇ ಆಶ್ರಯಿಸಬೇಕೆಂಬ ದೂರದರ್ಶಿತ್ವ ಇದರಲ್ಲಿ ಅಡಕವಾಗಿದೆ. ಕನ್ನಡದ ಕಾಲುವೆಯಲ್ಲಿ ಗಹನವಾದ ಸಂಸ್ಕೃತ ಭೂಯಿಷ್ಠ ತತ್ತ್ವಗಳನ್ನು ಆದೆಷ್ಟು ಸರಳವಾಗಿ, ತಿಳಿಯಾಗಿ ಹೇಳಬಹುದೋ ಅಷ್ಟೂ ಒಪ್ಪವಾಗಿ ತಿಳಿಸಿದ್ದಾರೆ:

ಕಳಬೇಡ, ಕೊಲಬೇಡ; ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ ! ॥ ೨೩೫ ॥

ದೇವಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿ ಭೋ !
ಸತ್ಯವ ನುಡಿವುದೆ ದೇವಲೋಕ
ಮಿಥ್ಯವ ನುಡಿವುದೆ ಮರ್ತ್ಯಲೋಕ

ಆಚಾರವೇ ಸ್ವರ್ಗ, ಅನಾಚಾರವೇ ನರಕ
ಕೂಡಲಸಂಗಮದೇವಾ, ನೀವೇ ಪ್ರಮಾಣು ॥ ೨೩೯ ॥

ಪುಣ್ಯಪಾಪವೆಂಬುವು ತಮ್ಮಿಷ್ಟ ಕಂಡಿರೇ
'ಅಯ್ಯಾ' ಎಂದೊಡೆ ಸ್ವರ್ಗ ; 'ಎಲವೋ' ಎಂದಡೆ ನರಕ
'ದೇವಾ, ಭಕ್ತ, ಜಯಾ, ಜೀಯಾ' ಎಂಬ ನುಡಿಯೊಳಗೆ
ಕೈಲಾಸವಿದ್ದುದೇ ಕೂಡಲಸಂಗಮದೇವಾ ॥ ೨೪೦ ॥

ದಯವಿಲ್ಲದ ಧರ್ಮವದೇವುದಯ್ಯಾ ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ;
ದಯವೇ ಧರ್ಮದ ಮೂಲವಯ್ಯಾ
ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ ॥ ೨೪೭ ॥

ಮಾರಿ ಮಸಣಿಯೆಂಬುವು ಬೇರಿಲ್ಲ ಕಾಣಿರೋ !
ಮಾರಿಯೆಂಬುದೇನು ? ಕಂಗಳು ತಪ್ಪಿ ನೋಡಿದರೆ ಮಾರಿ
ನಾಲಗೆ ತಪ್ಪಿ ನುಡಿದರೆ ಮಾರಿ
ನಮ್ಮ ಕೂಡಲಸಂಗಮದೇವರ ನೆನಹ ಮಱೆದರೆ ಮಾರಿ ! ॥ ೬೩೧ ॥

ಈ ಬಗೆಯ ಮಾತುಗಳು ಜನತೆಯ ಚಿತ್ತವನ್ನು ತಟ್ಟಿದುವು, ಮುಟ್ಟಿದುವು. ಕಾಯಕವೇ ಕೈಲಾಸವೆಂದು ಸ್ಪಷ್ಟವಾಗಿ ಸಾರಿ ಸತ್ಯ ಶುದ್ಧವಾದ ದುಡಿತಕ್ಕೆ ಮಹತು ಕೊಟ್ಟರು. ಇದರಿಂದ ಸೋಮಾರಿಗಳ ಸುಳಿವಿಲ್ಲದಂತಾಯಿತೆಂದು ತೋರುತ್ತದ್ದೆ ಏಕೆಂದರೆ ಅವರೇ ಒಂದು ಕಡೆ 'ಬೇಡುವವರಿಲ್ಲದೆ ಬಡವನಾದೆನಯ್ಯಾ' ಎಂದ. ಕಸಿವಿಸಿಗೊಂಡಿದ್ದಾರೆ.

ವ್ಯಕ್ತಿಗೆ ಒಂದು ಮುಖವಾದರೆ ವ್ಯಕ್ತಿತ್ವಕ್ಕೆ ಹಲವು ಮುಖ. ಬಸವಣ್ಣನವರು ಬಹುಮುಖಿ ವ್ಯಕ್ತಿತ್ವದ ಕೈಗನ್ನಡಿ; ಮರೆತ ಮಾನವನನ್ನು ಎಚ್ಚರಿಸಿದ ಅರಿತ ಶರಣರ ಶ್ರೇಷ್ಠ ಜೀವನದ ಜೀವಂತ ಕೈಪಿಡಿ; ಕರ್ನಾಟಕದ ಜನಜೀವನದಲ್ಲಿ ನವೋದಯ ನಾಂದಿಯನ್ನು ಹಾಡಿದ ಯುಗಪುರುಷ; ಸ್ವರಸಮಾನತೆ, ಅಸ್ಪೃಶ್ಯೋದ್ಧಾರ, ಜಾತಿಲಿಂಗ ಹಾಗೂ ವೃತ್ತಿಭೇದ ನಿರಾಕರಣೆ, ಕಾಯಕ ತತ್ತ್ವ ಪ್ರತಿಪಾದನೆ, ಮಹಿಳೆಯರ ಉನ್ನತಿ, ಸಾಮಾಜಿಕ ಸಂಸ್ಕರಣ ಸಂಘಟನೆ ಹಾಗೂ ಸುಧಾರಣೆಗಳನ್ನು ಕ್ಷಿಪ್ರ ಕಾಲಾವಧಿಯಲ್ಲಿ ಮಾಡಿದ ಮಹಾಪುರುಷ; ಜಗದ್‌ವ್ಯಾಪಿಯಾದ ಸಾರ್ವಕಾಲಿಕ ತತ್ತ್ವಗಳನ್ನು ಸಾರಿದ ವಿಶ್ವಮಾನವ; ಧಾರ್ಮಿಕ ದೃಷ್ಟಿಯ, ನೈತಿಕ ನೆಲೆಗಟ್ಟಿನ, ಪರಿಶುದ್ಧ ನಡೆನುಡಿಯ ತ್ಯಾಗ ಭೋಗ ಸಮನ್ವಯದ ದಿವ್ಯ

ಜೀವನ ಸಾಗಿಸಿದ ಜಗಜ್ಯೋತಿ; ವಿಶ್ವಪ್ರೇಮ, ವಿಶ್ವಬಾಂಧವ್ಯ ಹಾಗೂ ವಿಶ್ವಮೈತ್ರಿಗಳನ್ನು ನಿರ್ಮಿಸಿದ ವಿಶ್ವವಿಭೂತಿ.

★ ★

[ಮೈಸೂರು ವಿಶ್ವವಿದ್ಯಾಲಯದ ಪ್ರಕಟಣೆ "ಬಸವ ಪರುಷ" ಗ್ರಂಥದಿಂದ ಆಯ್ದುದು. ಲೇಖಕರಿಗೆ, ಸಂಪಾದಕರಿಗೆ, ಪ್ರಕಾಶಕರಿಗೆ ಕೃತಜ್ಞತೆ ಸಲ್ಲಿಸುವೆವು.]

---

151 ರೂ. ಸಲ್ಲಿಸಿ ಕಲ್ಯಾಣ ಕಿರಣಕ್ಕೆ ಆದ ಹೊಸ ಆಜೀವ ಸದಸ್ಯರ ಬಳಗ

ಶರಣ/ಶರಣೆಯರುಗಳಾದ

ಕ್ರ. ಸಂ.	ಆಜೀವ ಸದಸ್ಯತ್ವ ಚಂದಾ ನಂಬರ್	
1.	846	ಚಿಕ್ಕೇಗೌಡ ಪಾಟೀಲ್, ಮಾಜಿ ಶಾಸಕರು, ಶಿವಸಂದ್ರ
2.	847	ಹವಾಲ್ದಾರ್ ಸರೋಜಾದೇವಿ, ಗುಲ್ಬರ್ಗಾ-5
3.	848	ವಿರೂಪಾಕ್ಷಪ್ಪ ರೆಡ್ಡಿ, ವಕೀಲರು, ಅಮರಾವತಿ
4.	849	ಡಿ. ಸಿ. ರಂಗಪ್ಪ, ಅಸಿಸ್ಟೆಂಟ್ ಇಂಜಿನಿಯರ್, ಮುನಿರಾಬಾದ್
5.	850	ಕೆ. ಜಂಬುನಾಥ, ಪ್ರಿನ್ಸಿಪಾಲರು, ಹೊಸಪೇಟೆ, ಬಳ್ಳಾರಿ ಜಿಲ್ಲೆ
6.	851	ಎ. ನಿಮಣ್ಣ, ಹೊಸಪೇಟೆ
7.	852	ಎಸ್. ಎಸ್. ಪಾಟೀಲ್, ಮುನಿರಾಬಾದ್ ಡ್ಯಾಂ ಮುನಿರಾಬಾದ್
8.	853	ಮೈಸೂರು ಲಲಿತಮ್ಮ, ಕಿರಾಣಿ ಮರ್ಚೆಂಟ್,ಹೊಸಪೇಟೆ
9.	854	ಎಸ್. ಪಾಪಣ್ಣ ಶೆಟ್ಟಿ, ವ್ಯಾಪಾರಿಗಳು, ಹೊಸಪೇಟೆ
10.	855	ಶಂಕರಪ್ಪ ಅಡಿವೆಪ್ಪ ಸಾತಾರೆ, ಶಹಾಪೂರ
11.	856	ರಾಮಚಂದ್ರಪ್ಪ ಶೆಟ್ಟಿ, ಕಿರಾಣಿ ವ್ಯಾಪಾರಿ, ಹೊಸಪೇಟೆ
12.	857	ಕೆ. ಸತ್ಯನಾರಾಯಣ, ಆರ್.ಎಂ.ಸಿ. ಮಾರ್ಕೆಟ್ ಸೂಪರಿಂಟೆಂಡೆಂಟ್, ಶಿವಮೊಗ್ಗ-577 201
13.	858	ಪಾರ್ವತಿ ಸಿ. ಶಿರೋಳ್, ರಾಜಾಜಿನಗರ, ಬೆಂಗಳೂರು-10

ಕರ್ಮಸಿದ್ಧಾಂತ ಮತ್ತು ಬಸವಣ್ಣನವರು

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮಾರ್ಚ್ 29, 1981ರ ಪ್ರಪಂಚ ಪತ್ರಿಕೆಯಲ್ಲಿ ವಿದೇಶದಲ್ಲಿ ನಾನು ಮಾಡಿದ ಭಾಷಣದ (ಇಲ್ಲಿಯೂ ಆ ಭಾಷಣವನ್ನು ಬೇಕಾದಷ್ಟು ಮಾಡಿದ್ದೇನೆ) ವರದಿಯ ಬಗ್ಗೆ ಹಳಪೇಟ ಚಿಂತಾಮಣಿಯವರ ಟೀಕೆಯನ್ನು ಗಮನಿಸಿದೆ. ಕಲ್ಯಾಣಕಿರಣದ ಓದುಗರಿಗೂ ಸಂದೇಹಕ್ಕೆ ಪರಿಹಾರ ದೊರೆಯಲೆಂದು ಉತ್ತರಿಸುತ್ತಿದ್ದೇನೆ. ಶ್ರೀಹಳಪೇಟ ಚಿಂತಾಮಣಿಯವರ ಬರವಣಿಗೆಯಲ್ಲಿ ತುಂಬಾ ಅಸ್ಪಷ್ಟತೆ ಇದೆ.

ಬಸವಣ್ಣನವರು 'ಸ್ವರ್ಗಲೋಕ–ಮೃತ್ಯುಲೋಕವೆಂಬುವು ಬೇರಿಲ್ಲ ಕಾಣಿರೋ' ಎಂಬ ವಚನದ ಮೂಲಕ ಮರ್ತ್ಯಲೋಕವನ್ನು ಬಿಟ್ಟು ಉಳಿದ ಲೋಕಗಳ ಅಸ್ತಿತ್ವ ಅಲ್ಲಗಳೆದಿದ್ದಾರೆ. ಸ್ವರ್ಗ-ನರಕ ಎಂಬುವು ಮಾನವನ ಕಲ್ಪನೆಗಳು ಎಂಬುದನ್ನು ಸ್ಥಿರೀಕರಿಸಿದ್ದಾರೆ. ಆದರೆ ಇದರರ್ಥ ಅವರು ಕರ್ಮಸಿದ್ಧಾಂತ ಒಪ್ಪಿಲ್ಲ ಎಂಬುದು ತಪ್ಪು. ಕರ್ಮ ಸಿದ್ಧಾಂತದ ಮರ್ಮವಿಷ್ಟೆ. ಮನುಷ್ಯ ಮಾಡಿದ ಕರ್ಮಗಳಿಗೆ ತಕ್ಕ ಪ್ರತಿಫಲವನ್ನು ಉಣ್ಣಲೇಬೇಕು. ಬಿತ್ತಿದಂತೆ ಬೆಳೆ. ಅದನ್ನು ಅನುಭವಿಸಬೇಕು. ಪಾಪ ಪುಣ್ಯಗಳ ಫಲವನ್ನು ಅನುಭವಿಸಲು ನರಕ-ಸ್ವರ್ಗಗಳಿಗೇನೂ ಹೋಗಬೇಕಾದ್ದಿಲ್ಲ; ಅವು ಸುಳ್ಳು. ಈ ಪಾಪ–ಪುಣ್ಯಗಳ ಫಲವನ್ನು ಮಾನವ ದೇಹವನ್ನು ಎತ್ತಿಯೇ ಅನುಭವಿಸಬೇಕು. ಮಾನವ ದೇಹವೊಂದು ಕರ್ಮಕ್ಷೇತ್ರ; ಮರ್ತ್ಯಲೋಕ ಕರ್ತಾರನ ಕಮ್ಮಟ. ಎಲ್ಲ ಶುದ್ಧೀಕರಣ, ಪರಿಪೂರ್ಣತ್ವ ಇಲ್ಲಿಯೇ ಸಾಧ್ಯ. "ಹೊಯ್ಪರೆ ಹೊಯ್ಗಳು ಕೈಯ ಮೇಲೆ, ಬಯ್ಪರೆ ಬಯ್ಗಳು ಕೈಯಮೇಲೆ" ಎಂಬ ವಚನದ ಸಾಲು ಮನುಷ್ಯನು ತನ್ನ ಕರ್ಮಕ್ಕೆ ತಕ್ಕ ಫಲ ಅನುಭವಿಸಬೇಕು ಎಂಬುದನ್ನು ಹೇಳುತ್ತದೆ.

ಭವದಿಂದ ಪಾರಾಗಿ ಮುಕ್ತಿ ಪಡೆಯಲು ದೈವಾನುಗ್ರಹಬೇಕು. ದೇವರು ಮಾತ್ರ ಕರ್ಮಾಧ್ಯಕ್ಷ. ಅವನು ಈ ಬಂಧನದಿಂದ ಪಾರು ಮಾಡಬಲ್ಲ ಎಂಬ ಕರ್ಮಸಿದ್ಧಾಂತದ ಇನ್ನೊಂದು ನಂಬುಗೆಯನ್ನು ಹೀಗೆ ಹೇಳುತ್ತಾರೆ, "ಹಿಂದಣ ಜನನ ವೇನಾದೊಡಾಗಲಿ ಇಂದಿನ ಫಲಭೋಗ ಕೈಯಮೇಲೆ. ಕೂಡಲ ಸಂಗಮದೇವಾ ನಿಮ್ಮ ಪೂಜಿಸಿದಾ ಫಲ ಕೈಯಮೇಲೆ".

ಬಸವ ತತ್ತ್ವವು ಪುನರ್ಜನ್ಮ ಸಿದ್ಧಾಂತವನ್ನು ನಂಬುತ್ತದೆ. "ಒಂದಲ್ಲ ಎರಡಲ್ಲ ಮೂರಲ್ಲ ನಾಲ್ಕಲ್ಲ ಎಂಭತ್ತು ನಾಲ್ಕು ಲಕ್ಷಯೋನಿಯೊಳಗೆ ಬಂದೆ ಬಂದೆ" ಎಂಬ ಅಕ್ಕನ ವಚನ, 'ಭವಪಾಶ ಬವಬಂಧನವಾದ ಕಾರಣವೇನಯ್ಯ. ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ' ಎಂಬ ಬಸವಣ್ಣನವರ ವಚನ ಕರ್ಮ ಸಿದ್ಧಾಂತವನ್ನು ಪುಷ್ಟೀಕರಿಸುತ್ತವೆ. ಆದರೆ ಮನುಷ್ಯ ಕರ್ಮದ ದಾಸನಲ್ಲ. ಅವನಿಗೆ ಸ್ವಾತಂತ್ರ್ಯವಿದೆ. ಅವನು ಮನಸ್ಸು ಮಾಡಿದ್ರೇ ಆದರೆ ಮುಂದಿನ ಭವವನ್ನು ತಪ್ಪಿಸಿಕೊಳ್ಳಬಲ್ಲ, ಪರಮಾತ್ಮನ ಅನುಗ್ರಹದಿಂದ. ಈ ವಿಚಾರವನ್ನು ಈಗ ತಾನೆ ನಾನು ಉಲ್ಲೇಖಿಸಿದ ವಚನಗಳು ಸಾರುತ್ತವೆ. 'ಹಿಂದಣ ಜನನವೇನಾದೊಡಾಗಲೀ ಮುಂದೆ ನೀ ಕರುಣಿಸಾ ಚೆನ್ನಮಲ್ಲಿಕಾರ್ಜುನ' (ಅಕ್ಕಮಹಾದೇವಿ), 'ಅರಿಯದೆ ಜನನಿಯ ಜಠರದಲ್ಲಿ ಬಂದೆ. ಹುಟ್ಟಿದ್ದೆ ತಪ್ಪಾಯಿತ್ತೇ ಎಲೆ ಲಿಂಗವೇ, ಇನ್ನು ಹುಟ್ಟಿದುದಕ್ಕೆ ಕೃಪೆ ಮಾಡು ಲಿಂಗವೆ. ಇನ್ನು ಹುಟ್ಟಿದೆನಾದರೆ ನಿಮ್ಮಾಣೆ ಕೂಡಲ ಸಂಗಮದೇವಾ' (ಬಸವಣ್ಣನವರು).

ಬಸವಣ್ಣನವರ ತತ್ತ್ವಜ್ಞಾನವನ್ನು ಅಧ್ಯಯನಿಸದೆ ಹೇಳುವವರು ನಾವಲ್ಲ. ಅವರ ತತ್ತ್ವಕ್ಕೆ ಎಳ್ಳು ಕಾಳಷ್ಟೂ ಚ್ಯುತಿ ತರದೆ ಬೋಧಿಸುವವರು, ಆಚರಿಸುವವರು ನಾವು ಮತ್ತು ನಾವು ಪ್ರತಿಪಾದಿಸುವ ತತ್ತ್ವಜ್ಞಾನ ಬಸವಣ್ಣನವರ ವಚನಗಳ ಆಧಾರವಿಡಿದೇ ಎಂಬುದನ್ನು ಶ್ರೀ ಹಳಪೇಟ ಚಿಂತಾಮಣಿಯವರು ಮನಗಂಡರೆ ಒಳ್ಳಿತು. ತಾತ್ತ್ವಿಕ ತರಬೇತಿ ಇದ್ದರೆ ಮಾತ್ರ ವಿಧಿವಾದ ಮತ್ತು ಕರ್ಮ ಸಿದ್ಧಾಂತದ ವ್ಯತ್ಯಾಸ ತಿಳಿಯುತ್ತದೆ. ಬಸವಣ್ಣನವರು ವಿಧಿವಾದ (Fatalism) ಅಲ್ಲಗಳೆದಿದ್ದಾರೆ, ಕರ್ಮಸಿದ್ಧಾಂತ ಒಪ್ಪಿದ್ದಾರೆ.

★★

ಬಸವ ಗೀತೆ

ವ್ಯಾಖ್ಯಾನಿಸುವವರು : ಮಾತಾಜಿ

(ಆರಂಭ 5-4 1981 ಯುಗಾದಿ ಪ್ರತಿಪದೆ ಪ್ರಭುದೇವರ ಜಯಂತಿ)

ಕರ್ಮಸಿದ್ಧಾಂತ :

ಪಂಡಿತನಾಗಲಿ ಮೂರ್ಖನಾಗಲಿ ಸಂಚಿತಕರ್ಮ ಉಂಡಲ್ಲದೆ ಬಿಡದು?
ಪ್ರಾರಬ್ಧ ಕರ್ಮ ಭೋಗಿಸಿದಲ್ಲದೆ ಹೋಗದೆಂದು ಶ್ರುತಿ ಸಾರುತ್ತೈದಾವೆ, ನೋಡಾ.

ತಾನಾವ ಲೋಕದೊಳಗಿದ್ದಡೆಯೂ ಬಿಡದು.
ಕರ್ಮಫಲಗೂಡಿ ಕೂಡಲಸಂಗಮ ದೇವಂಗೆ
ಆತ್ಮ ನೈವೇದ್ಯವ ಮಾಡಿದವನೆ ಧನ್ಯ. (ಬ.ಷ.ವ 773)

ಅರ್ಥ : ಮನುಷ್ಯ ಎಂತಹ ಪಂಡಿತನೇ ಇರಲಿ, ಮಹಾಮೂರ್ಖನೇ ಇರಲಿ, ತಾನು ಸಂಚಯಿಸಿಕೊಂಡ ಕರ್ಮವನ್ನು ಅನುಭವಿಸಿದಲ್ಲದೆ ತಪ್ಪದು. ಇದನ್ನು ಎಲ್ಲ ಶೃತಿಗಳು, ಆಗಮಗಳು ಘೋಷಿಸುತ್ತಿದ್ದಾವೆ. ಯಾವ ಲೋಕದಲ್ಲಿದ್ದರೂ ಅನುಭವಿಸಬೇಕು. ಈ ಕರ್ಮದ ಹಿಡಿತದಿಂದ ತಪ್ಪಿಸಿಕೊಳ್ಳಲು ಒಂದೇ ಮಾರ್ಗ. ತಾನು ಮಾಡುವ ಕರ್ಮಗಳ ಫಲದ ಸಹಿತವಾಗಿಯೇ ಪರಮಾತ್ಮನ ಚರಣಾರವಿಂದಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳಬೇಕು.

ವ್ಯಾಖ್ಯಾನ : ಬಸವಣ್ಣನವರು ಈ ವಚನದಲ್ಲಿ ಕರ್ಮಸಿದ್ಧಾಂತವನ್ನು ಪ್ರಸ್ತಾಪಿಸಿ, ಕರ್ಮದ ಪ್ರಭಾವ ವ್ಯಕ್ತಿಯ ಮೇಲೆ ಎಷ್ಟು ಅಗಾಧ ಎಂಬುದನ್ನು ಸ್ಪಷ್ಟೀಕರಿಸಿ, ಅದರ ಅಷ್ಟಪದಿ ಹಿಡಿತದಿಂದ ಪಾರಾಗಲು ಇರುವ ಉಪಾಯವನ್ನೂ ತೋರಿಸುವರು. ಅನೇಕ ಆಚರಣೆ, ವಿಚಾರಗಳಲ್ಲಿ ಬಸವಣ್ಣನವರು ಸಾಂಪ್ರದಾಯಿಕ ಹಿಂದೂತತ್ತ್ವ ಅಥವಾ ವೈದಿಕ ಧರ್ಮದಿಂದ ಭಿನ್ನವಾಗಿರಲು ಇಚ್ಛಿಸಿದರು. ತಮ್ಮ ಆಧುನಿಕ ವಿಚಾರಗಳನ್ನೊಳಗೊಂಡ ವಚನ ಸಾಹಿತ್ಯವೆಂಬ ಸಂವಿಧಾನ ಕೊಟ್ಟರು. ಆದರೆ ಕೆಲವು ವಿಚಾರಗಳಲ್ಲಿ ನಂಬಿಕೆ ವ್ಯಕ್ತಪಡಿಸುವುದೇ ಅಲ್ಲದೆ, ಈ ವಿಷಯದಲ್ಲಿ

ಶ್ರುತಿ ಪ್ರಮಾಣವನ್ನೂ ಸಾರುತ್ತಾರೆ. ಹೀಗೆ ಭಾರತೀಯ ಸಂಜಾತ ಧರ್ಮಗಳೆಲ್ಲವೂ ಒಮ್ಮತದಿಂದ ನಂಬುವ ಒಂದು ಸಿದ್ಧಾಂತ ಕರ್ಮಸಿದ್ಧಾಂತ.

ಈಗಿನ ಜನ್ಮದಲ್ಲಿ ಒಬ್ಬ ಎಷ್ಟೇ ಬುದ್ಧಿವಂತನಾಗಿರಲಿ ಅಥವಾ ಶತಮೂರ್ಖನಾಗಿರಲಿ ಅವನ ಸಂಚಿತ ಕರ್ಮವನ್ನು ಅನುಭವಿಸಲೇ ಬೇಕು. ಸಂಚಿತ ಎಂದರೆ ಸಂಗ್ರಹಗೊಂಡದ್ದು. ಹಿಂದಿನ ಜನ್ಮದಿಂದ ಈ ವರೆಗೆ, ಈ ಜನ್ಮದಲ್ಲಿ ಹುಟ್ಟಿನಿಂದ ಈ ಕ್ಷಣದವರೆಗೆ ಸಂಗ್ರಹಗೊಂಡದ್ದೆಲ್ಲವೂ ಸಂಚಿತ ಕರ್ಮ. ಇದರಲ್ಲಿ ಈಗ ಸದ್ಯದಲ್ಲಿ ಅನುಭವಿಸುತ್ತಿರುವುದು ಪ್ರಾರಬ್ಧ ಕರ್ಮ. ಒಬ್ಬ ಮನುಷ್ಯ ಎಂಟು ದಿವಸಗಳಿಗಾಗುವಷ್ಟು ಬುತ್ತಿ ಕಟ್ಟಿಕೊಂಡು ಪ್ರಯಾಣ ಹೊರಡುತ್ತಾನೆ ಎಂದಿಟ್ಟುಕೊಳ್ಳೋಣ. ಅದನ್ನು ಅವನೇ ಒಂದೇ ದಿನಕ್ಕೆ ತಿಂದು ಹಾಕನು. ದಿನಾಲೂ ಅಷ್ಟಷ್ಟು ಪೂರೈಸುತ್ತ ಹೋಗುವನು. ಅಂದಂದು ಉಣ್ಣುತ್ತಿರುವ ಪಾಲು ಪ್ರಾರಬ್ಧ ಕರ್ಮ. ತಾನು ಕಟ್ಟಿಕೊಂಡಿರುವ ಬುತ್ತಿಯಲ್ಲಿ ಇನ್ನೂ ತಿನ್ನಬೇಕಾಗಿರುವ ಪಾಲು ಅನಾರಬ್ಧ ಕರ್ಮ. ಅನುಭವಿಸಬೇಕಾಗಿರುವ ಪಾಲು ಮತ್ತು ಇನ್ನು ಮುಂದೆ ಮಾಡುವ ಕರ್ಮಕ್ಕೆ ಆಗಾಮಿ ಕರ್ಮವೆಂದೂ ಕರೆಯುತ್ತಾರೆ.

ಹೀಗೆ ತಾನು ಮಾಡಿದ ಕರ್ಮಗಳ ಫಲವನ್ನು ಯಾರಾದರೇನು, ಎಲ್ಲಿದ್ದರೇನು ಅನುಭವಿಸಿಯೇ ತೀರಬೇಕು. ಆದರೆ ಅದರಿಂದ ತಪ್ಪಿಸಿಕೊಳ್ಳಲು ಒಂದೇ ಒಂದು ಮಾರ್ಗವಿದೆ. ಅದು ದೈವೀಶರಣಾಗತಿ. ಜನ್ಮಜನ್ಮಾಂತರಗಳಿಂದಲೂ ಅಜ್ಞಾನದಲ್ಲಿ ಸಾಗಿಬಂದ ಈ ಜೀವಕ್ಕೆ ಒಂದಾನೊಂದು ದಿನ 'ಜಾಗೃತಿ' ಯುಂಟಾಗಿ, ದೇವನತ್ತ ದೃಷ್ಟಿ ಹರಿಯುವುದು. ಆಗ ಅವನು ಕರ್ಮಫಲ ಸಹಿತವಾಗಿ ತನ್ನನ್ನು ತಾನು ದೇವನಿಗೆ ನೈವೇದ್ಯ ಮಾಡಿಕೊಂಡು ಬಿಟ್ಟರೆ, ಧನ್ಯತೆಯನ್ನು ಪಡೆಯುವುದೇ ಅಲ್ಲದೆ, ಭವದ ಹಿಡಿತದಿಂದ ಪಾರಾಗುವನು. ವಾಲ್ಮೀಕಿ, ನನ್ನಯ್ಯ, ಅಂಗುಲಿಮಾಲ-ಮುಂತಾದವರೆಲ್ಲ ಮಹಾನ್ ಕೊಲೆಗಡುಕರಾಗಿದ್ದರು. ಒಂದಾನೊಂದು ದಿನ ಅವರಿಗೆ ಜಾಗೃತಿಯಾಯಿತು; ಹೃದಯ ಪರಿವರ್ತನೆಯಾಯಿತು. ಪರಮಾತ್ಮನಿಗೆ ಶರಣಾದರು. ಸಂಚಿತ, ಪ್ರಾರಬ್ಧ, ಆಗಾಮಿಗಳೆಲ್ಲವನ್ನೂ ಗೆದ್ದು ಮುಕ್ತಾತ್ಮರಾದರು. ಹಾಗಾದರೆ ಕರ್ಮಸಿದ್ಧಾಂತದ ನಿಯಮದ ಪ್ರಕಾರ ಅವರು ಮಾಡಿದ್ದನ್ನು ಅವರು ಅನುಭವಿಸಲೇ ಬೇಕಾಗಿತ್ತಲ್ಲ? ಅವರು ಎಲ್ಲಿ ಅನುಭವಿಸಿದರು? ನಿಜ; ಇವೆಲ್ಲ ವಿಶೇಷ ಪ್ರಸಂಗಗಳು. ಒಬ್ಬ ವ್ಯಕ್ತಿಗೆ ಡಿಸ್ಟ್ರಿಕ್ಟ್‌ಕೋರ್ಟ್, ಹೈಕೋರ್ಟ್, ಸುಪ್ರಿಮ್ ಕೋರ್ಟ್ ಎಲ್ಲೆಡೆಯಲ್ಲಿ ಮರಣ ದಂಡನೆಯಾಗಿದೆ ಎಂದುಕೊಳ್ಳೋಣ. ಇನ್ನು ಈ ಶಿಕ್ಷೆಯಿಂದ ಪಾರಾಗಲು ಬೇರೆ ಮಾರ್ಗವೇ ಇಲ್ಲ. ಇಂತಹ ಕ್ಲಿಷ್ಟಕರ ಪ್ರಸಂಗದಲ್ಲಿಯೂ ಒಂದು ಉಪಾಯವಿದೆ. ಅದೆಂದರೆ ರಾಷ್ಟ್ರಾಧ್ಯಕ್ಷರ ಹಕ್ಕು ಚಲಾವಣೆ. ಅವರು ಮನಸ್ಸು

ಮಾಡಿದರೆ ಈ ಶಿಕ್ಷೆಯಿಂದ ಬೇಷರತ್ತಾಗಿ ಕ್ಷಮೆ ನೀಡಬಲ್ಲರು. ಹಾಗೆಯೇ, ಲೋಕದಲ್ಲಿರುವ ಜೀವಿಗಳೆಲ್ಲರೂ ಕರ್ಮದ ಕಟ್ಟಿಗೆ ಒಳಪಟ್ಟವರು, ದೇವನು ಮಾತ್ರ ಕರ್ಮಾಧ್ಯಕ್ಷ. ಕರ್ಮಾಧ್ಯಕ್ಷ ದೇವನ ಒಲಿಮೆಯಾದರೆ ಮಾತ್ರ ಕರ್ಮದ ಅಷ್ಟಸದಿ ಹಿಡಿತದಿಂದ ಪಾರಾಗಲು ಸಾಧ್ಯ.

ಅದನ್ನು ಬಸವಣ್ಣನವರು ಮಾರ್ಮಿಕವಾಗಿ ಹೇಳುತ್ತಾರೆ: "ಕರ್ಮಫಲಂಗೂಡಿ ಕೂಡಲ ಸಂಗಮದೇವಂಗೆ ಆತ್ಮನೈವೇದ್ಯವ ಮಾಡಿದವನೇ ಧನ್ಯ" ಎಂದು. ತನ್ನನ್ನು ತಾನು ಸಮರ್ಪಣ ಭಾವದಿಂದ ದೇವನಿಗೆ ಅರ್ಪಿಸಿಕೊಂಡು ಬಿಟ್ಟರೆ ದೇವನ ಅನುಗ್ರಹದ ಉರಿಯಲ್ಲಿ ಕರ್ಮಶೇಷವೆಲ್ಲ ಹುರಿಯಲ್ಪಡುವ ಕಾರಣ ಮುಂದೆ ಭವಕ್ಕೆ ಬೀಜವಿಲ್ಲ; ಮೊಳಕೆಗೆ ಆಸ್ಪದವಿಲ್ಲ. ಹೀಗೆ ಶರಣಾಗತಿಹೊಂದಿ ದೈವಾನುಗ್ರಹ ಪಡೆದವನು ಕರ್ಮರಹಿತನಾಗುವನು.

ಮಾಯೆ

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ಇದಾವಾವ ಪರಿಯಲ್ಲಿ ಕಾಡಿತ್ತು ಮಾಯೆ
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೇ ಬಲ್ಲಿರಿ ಕೂಡಲ ಸಂಗಮ ದೇವಾ! (ಬ.ಷ.ವ 15)

ಬಸವಣ್ಣನವರ ಈ ವಚನ ಕಬ್ಬಿಣದ ಕಡಲೆಯಂತೆ ಇದೆ. ಶಬ್ದಗಳು ಅತ್ಯಂತ ಸರಳವಾಗಿಯೇ ಇದ್ದರೂ, ಒಳಗೆ ಹುದುಗಿರುವ ಅರ್ಥವು ಅವರ ತಾತ್ತ್ವಿಕ ಸಿದ್ಧಾಂತಕ್ಕೆ ಪ್ರತಿಕೂಲವಾಗಿರುವುದರಿಂದ ಬಹುಬೇಗನೆ ಈ ವಚನ ಅರ್ಥವಾಗದು. ಜೀವನದಲ್ಲಿ ಸ್ತ್ರೀಯೊಡನೆ ಪುರುಷನ ಸಂಬಂಧ ಮೂರು ಬಗೆ; 1. ತಾಯಿಯಾಗಿ 2. ಮಗಳಾಗಿ ಮತ್ತು ೩. ಸತಿಯಾಗಿ, 'ಈ ಮೂರೂ ಮಾಯೆಯ ಮೂರು ಮುಖಗಳು. ಇವನ್ನು ನಿವಾರಿಸುವುದು ಅಥವಾ ಗೆಲ್ಲುವುದು ನನ್ನ ಅಳವಿಗೆ ಸಿಕ್ಕುವಂಥದಲ್ಲ; ನೀನೇ ಬಲ್ಲೆ ಎಂಬಲ್ಲಿ ಒಂದು ಬಗೆಯ ನಿರಾಶೆಯ ಭಾವನೆ ವ್ಯಕ್ತವಾಗಿದೆ.

ಬಸವಣ್ಣನವರು ಸ್ತ್ರೀಯನ್ನು ಮಾಯೆಯಾಗಿ ಕಂಡವರಲ್ಲ. ಆಕೆಯಲ್ಲೂ ದೈವಾಂಶವನ್ನು ಕಂಡವರು. ಅಂಥವರು ಹೀಗೆ ಟೀಕಿಸುವುದುಂಟೆ? ಹಾಗಿದ್ದರೆ ಏನಾದರೂ ಬೇರೆ ಅರ್ಥ ದೊರೆತೀತೆ? ಬಸವಣ್ಣನವರು ಹುಟ್ಟಿದ್ದು ಬ್ರಾಹ್ಮಣ ಮನೆತನದಲ್ಲಿ, ಶುದ್ಧ ವೈದಿಕ ಸಂಪ್ರದಾಯದಲ್ಲಿ. ಅದರ ಪ್ರಕಾರ ಸ್ತ್ರೀಯು ಶೂದ್ರಳು, ಸಂಸ್ಕಾರ ಬಾಹಿರಳು. ತಾಯಾಗಿ ಜನ್ಮದಾತೆಯಾಗಬಹುದು, ಮಗಳಾಗಿ ವಾತ್ಸಲ್ಯದ ಪ್ರತಿರೂಪವಾಗಬಹುದು, ಸಸ್ನೇಹದ ಸತಿಯಾಗಿ ಒಡನಾಡಿಯಾಗಿರಬಹುದು. ಆದರೂ ಕೆಲವು ಪ್ರಾಕೃತಿಕ ಕಾರಣಗಳಿಗಾಗಿ ಆಕೆ ಧರ್ಮ ಸಂಸ್ಕಾರ ವಂಚಿತಳು. ಇಂತಹ ವಿಚಿತ್ರ ನಂಬಿಗೆಯನ್ನು ಕಂಡು ಸ್ವತಂತ್ರ ವಿಮರ್ಶಾ ಪ್ರಜ್ಞೆಯ ಬಸವಣ್ಣನಿಗೆ ಅಪಾರ ವೇದನೆ. ಅವನಿಗೆ ಜನಿವಾರ ಧಾರಣೆಯಾಗುವ ಪ್ರಸಂಗವೊಂದನ್ನೇ ಕಲ್ಪಿಸಿಕೊಳ್ಳೋಣ. ಯಜ್ಞೋಪವೀತವನ್ನು ನೀಡುವ ಕಾರ್ಯಕ್ರಮಕ್ಕೆ ಅಣಿಯಾಗಿದೆ. ಆಗ ಬಸವಣ್ಣನು ಕೇಳುತ್ತಾನೆ; 'ನನಗಿಂತ ಹಿರಿಯಳಾದ ಅಕ್ಕನಿಗೆ ಮೊದಲು... ಸಂಸ್ಕಾರ ಕೊಡಲ್ಪಡಬೇಕು.' 'ಇಲ್ಲ, ನಮ್ಮ ಸಂಪ್ರದಾಯದ ಪ್ರಕಾರ ಸ್ತ್ರೀಯರಿಗೆ ಕೊಡುವಂತಿಲ್ಲ. ಆಕೆ ಮಾಯೆ. ಶೂದ್ರಳು' "ಅಯ್ಯೋ, ದೇವರೇ ಹಾಗಾದರೆ ಜನನಕ್ಕೆ ಕಾರಣೀಭೂತಳಾಗಿ ಮಮತೆ ತೋರುವ ತಾಯಿಯು ಮಾಯೆಯೆ? ಮೋಹದ ಫಲವಾಗಿ ಹುಟ್ಟಿ, ವಾತ್ಸಲ್ಯದ ತೃಪ್ತಿ ನೀಡುವ ಮಗಳು ಮಾಯೆಯೆ? ತನು ಮನ ಧನ ಎಲ್ಲದರಲ್ಲಿ ಅರ್ಧಾಂಗಿನಿಯಾಗಿ ಶಾರೀರಿಕ, ಮಾನಸಿಕ ಕೂಟದಲ್ಲಿ ಒಂದಾಗುವ ಪತ್ನಿಯೂ ಮಾಯೆಯೆ? (ಇಂಥ ಮಾಯೆಯಿಂದ ಹುಟ್ಟಿ, ಮಾಯೆಯನ್ನು ಕೂಡಿ, ಮಾಯೆಯನ್ನು ಹೆರುವ ಪುರುಷ ಮಾತ್ರ ದ್ವಿಜನು, ಪವಿತ್ರಾತ್ಮನೂ ಹೇಗಾದಾನು?) ಇಂಥ ಮಾಯದ ಭ್ರಾಂತಿಯನ್ನು ತೊಡೆಯುವುದು ಹೇಗೆ? ಶತ ಶತಮಾನಗಳಿಂದ ಬೇರೂರಿ ಬಂದು, ಚೆಲ್ಲವರಿದಿರುವ ಈ ನಂಬುಗೆಯನ್ನು ಅತಿಗಳೆವುದು, ತೊಡೆಯುವುದು ಎನ್ನ ಅಳವಿಗೆ ಸಿಕ್ಕಿದ್ದಲ್ಲ. ಇಂಥ ಪರಿವರ್ತನೆ ಹೇಗೆ ಸಾಧ್ಯವೆಂಬುದನ್ನು ನೀವೇ ಬಲ್ಲಿರಿ ಕೂಡಲ ಸಂಗಮದೇವಾ' ಎಂದು ವಿಷಾದದ ಉದ್ಗಾರವನ್ನು ಬಸವಣ್ಣನವರು ತೆಗೆದಂತೆ ಕಾಣುತ್ತದೆ. ಪ್ರಸ್ತುತ ಸಮಾಜವನ್ನು, ಸಮಾಜದ ನಂಬಿಕೆಗಳನ್ನು ಪರಿವರ್ತಿಸುವದೆಂತು ಎಂಬ ಪ್ರಶ್ನಾರ್ಥಕ ಚಿಹ್ನೆಯೊಂದು ಇಲ್ಲಿ ಎದ್ದು ನಿಂತಿದೆ. ಬಾಲಕ ಬಸವಣ್ಣನಲ್ಲಿ ಉದ್ಭವಿಸಿದ ಆ ವೈಚಾರಿಕ ಆಂದೋಳನವನ್ನು ಇದು ಚಿತ್ರಿಸುತ್ತದೆ.

ಈ ವಚನದ ಬಗ್ಗೆ ಇನ್ನೊಂದು ಅರ್ಥವೂ ಗೋಚರಿಸುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ಅನ್ವಯಿಸುವುದು ಎಂಬ ಬಗ್ಗೆ ಆಲೋಚಿಸಬೇಕಾಗಿದೆ. ಶಂಕರಾಚಾರ್ಯರ ಸಿದ್ಧಾಂತಕ್ಕೆ ಮಾಯಾವಾದವೆಂದು ಹೆಸರು. ಅದರ ಪ್ರಕಾರ ನಮ್ಮ

ಕಣ್ಣೆದುರಿಗೆ ತೋರುವ ಇರುವಿಕೆಯೆಲ್ಲ ಮಿಥ್ಯ! ಈ ಜಗತ್ತಿಗೆ ವಾಸ್ತವಿಕ ಅಸ್ತಿತ್ವವೇ Objective reality ಇಲ್ಲ. ನಮ್ಮ ಮನದೊಳಗಣ ಮಾಯೆ Self-Projection ಆಗಿ, ಹೊರಗೆ ತೋರುತ್ತದೆ ಜಗತ್ತಾಗಿ. ಈ ಮಾಯೆಯ ತೆರೆ, ಎಲ್ಲೆಡೆಯಲ್ಲೂ ಇರುವ ಬ್ರಹ್ಮನಲ್ಲಿ ಜಗತ್ತನ್ನು ಕಾಣುವಂತೆ ಮಾಡುತ್ತದೆ–ಮನಸ್ಸಿನ ಭಯವು ಕತ್ತಲೆಯಲ್ಲಿ ಹಗ್ಗದಲ್ಲೊಂದು ಹಾವನ್ನು ಕಂಡಂತೆ!

ಆದರೆ ಈ ಸಿದ್ಧಾಂತಕ್ಕೆ ತದ್ವಿರುದ್ಧವಾಗಿ ಬರುತ್ತದೆ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತ. ಬಸವಣ್ಣನ ವಿಚಾರದ ಪ್ರಕಾರ ಈ ಜಗತ್ತು ಮಿಥ್ಯವಲ್ಲ; ಭ್ರಾಂತಿಯ ಕೂಸಲ್ಲ. ಇದು ಸತ್ಯ; ಮಾತ್ರವಲ್ಲ ಆತ್ಮರುಗಳನ್ನು ಪರಿಪಕ್ವಗೊಳಿಸುವ ಕಾರ್ಯಾಗಾರ. ಇದು ಪರಮಾತ್ಮನ ಒಡಲ ಕುಡಿ. ಅವನಲ್ಲಿ ಅಂತರ್ಗತವಾಗಿರುವ ಪರಾಶಕ್ತಿಯ ಕಾರ್ಯಚಟುವಟಿಕೆಯ ಮಹಾನ್ ಕೊಡುಗೆ. ಆದ್ದರಿಂದ ಈ ಪರಾಶಕ್ತಿಯು ಮೂರು ಹಂತಗಳಲ್ಲಿ ವಿಶ್ವದ ಸೃಷ್ಟಿಗೆ ಕಾರಣಳಾಗುತ್ತಾಳೆ. 1.ಚಿಚ್ಛಕ್ತಿ, ಪರಾಶಕ್ತಿ (ಶುದ್ಧತತ್ತ್ವ) ಅಥವಾ ತಾಯಿ 2. ಮಾಯಾಶಕ್ತಿ (ಶುದ್ಧಾಶುದ್ಧ ತತ್ತ್ವ) ಅಥವಾ ಪತ್ನಿ 3. ಪ್ರಕೃತಿ (ಅಶುದ್ಧ ತತ್ತ್ವ) ಅಥವಾ ಮಗಳು. ಸೃಷ್ಟಿಯು 36 ಹಂತಗಳಲ್ಲಿ ವಿಕಾಸಗೊಂಡಿತೆಂದು ನಂಬುವ ಈ ಸಿದ್ಧಾಂತದಲ್ಲಿ 36 ತತ್ತ್ವಗಳಲ್ಲಿ ಚಿಚ್ಛಕ್ತಿ ಎರಡನೆಯ ತತ್ತ್ವ, ಮಾಯೆ ಆರನೆಯ ತತ್ತ್ವ ಮತ್ತು ಪ್ರಕೃತಿಯು ಹದಿಮೂರನೆಯ ತತ್ತ್ವ. ಪರಶಿವನಲ್ಲಿ ಅಂತರ್ಗತವಾಗಿರುವ ಪರಾಶಕ್ತಿಯ ವಿಕಾಸ ಹಂತಹಂತವಾಗಿ ಆಗಿ ಸೃಷ್ಟಿಯಾಗಿರುವುದರಿಂದ ಈ ಸೃಷ್ಟಿಯು ಮಾಯೆಯಲ್ಲ, ಮಿಥ್ಯವಲ್ಲ, ಆತಂಕವಲ್ಲ. ಇದು ಶಿವನ ಲೀಲಾರಂಗ, ಕರ್ತಾರನ ಕಮ್ಮಟ. ಪರಿಪೂರ್ಣತೆಯ ಪರಮಸಾಧನ.

ಈ ಲೋಕವೊಂದು ಮಾಯೆ, ಮಿಥ್ಯೆ, ಹೇಯ ಎಂದು ಜನರಲ್ಲಿ ತುಂಬಿರುವ ಭ್ರಾಂತಿಯನ್ನು ತೊಡೆಯುವುದು ಎನ್ನಳವಲ್ಲ; ಅದನ್ನು ನೀನೇ ಬಲ್ಲೆ ಕೂಡಲ ಸಂಗಮದೇವಾ ಎಂದೆನ್ನುತ್ತಾರೆ ಬಸವಣ್ಣನವರು. ★

(ಈ ವಚನಕ್ಕೆ ಇನ್ನೇನಾದರೂ ಹೆಚ್ಚಿನ ಅರ್ಥ ಹೊಳೆಯುವುದಾದರೆ ಅಂಥ ಶರಣರು ಬರೆದು ಕಳಿಸಬೇಕೆಂದು ತಿಳಿಸಲಿಚ್ಛಿಸುತ್ತೇವೆ.)

A runaway monk never praises his convent

—*English proverb*

ನಿರ್ದಿಷ್ಟ ಮತ್ತು ನಿಶ್ಚಿತ ಬದುಕಿನಿಂದ ಅನಿರ್ದಿಷ್ಟ, ಅನಿಶ್ಚಿತ ಬದುಕಿಗೆ ಹೋಗುವವನು ಎಂದು ಬುದ್ಧಿವಂತನಲ್ಲ.

—ಸಾಮ್ಯುಯಲ್ ಜಾನ್ಸನ್

ಶ್ರೀ ಬಸವೇಶ್ವರ–ಸುಪ್ರಭಾತ

ಶೈಲಜ ಕುಮಾರಿ, ಮುಡಿಗುಂಡ

ಉಷೆ ದೀವಿಗೆಯ । ಹಿಡಿಯೆ । ವಿಶ್ವವೇ ಬೆಳಗಿದೆ ॥
ಆ ಬೆಳಕ । ಪ್ರಖರತೆಯೊಳು । ಜಗವೆಲ್ಲ ನಲಿದಿದೆ ॥
ಹರಡಿ ತುಂಬಿದೆ । ರವಿಕಿರಣ । ಅಂಗಳದೆ ॥
ಏಳು ಶರಣರ ಸದ್ಗುರು । ಬಸವೇಶ । ಬೆಳಗಾಗಿದೆ ॥
ಬಸವ । ಪ್ರಭು ತವಚರಣಕೆ ಸುಪ್ರಭಾತಂ ॥

ಹಕ್ಕಿಗಳ । ಚಿಲಿಪಿಲಿಯ । ಇಂಚರಕೇಳು ॥
ಓಂಕಾರ ನುಡಿದಿದೆ । ಘಂಟೆ ಕುಳಿಗ್ರಾಳಿ । ಕೊರಳೊಳು ॥
ಬಂಗಾರ । ಬೆಳಕು । ತುಂಬಿ । ಸರಿದಿದೆ । ನೆರಳು ॥
ತರುಲತೆಯ । ಹೂ ಅರಳಿ । ಬೆಳಗಾಯಿತೇಳು ॥
ಬಸವ। ಪ್ರಭು ತವಚರಣಕೆ ಸುಪ್ರಭಾತಂ ॥

ಹೊಸತಾದ ! ತಂಗಾಳಿ । ಅಂಗಳದೆ । ಬೀಸಿ ॥
ತುಂಬಿರುವ । ಕಸ ತೂರಿ । ಹಸನಾಗಿಸಿ ॥
ಮೈಮರೆತು । ಮಲಗಿಹ । ಜೀವಿಗಳ । ಕಣ್ತೆರೆಸಿ ॥
ಸುಳಿದಾಡಿದೆ ಪ್ರಭುವೆ । ಚೇತನವ। ಹರಿಸಿ ॥
ಬಸವ । ಪ್ರಭು ತವಚರಣಕೆ ಸುಪ್ರಭಾತಂ ॥
ಗಿರಿ ಶಿಖರದೊಡಲಿಂದಿಳಿದು । ಬಂದಿಹಳು ಗಂಗಾ ॥
ಸುವಿಶಾಲವಹುದವಳ ಹೃದಯಾಂತರಂಗ ॥
ಹಗಲಿರುಳು । ಹಾಡಿಹಳು । ರಸರಂಗರಾಗ ॥
ನಿನಪಾದ ತೊಳೆಯಲುಹರಿದಿಹಳು । ಬೇಗ ॥
ಬಸವ। ಪ್ರಭು ತವಚರಣಕೆ ಸುಪ್ರಭಾತಂ ॥

ಫಲಭರಿತ । ಮರಗಿಡವು । ಬಾಗಿ । ತೂಗಾಡಿಹುದು ॥
ಪ್ರಭು ನಿನಗೆ । ಸಮರ್ಪಣೆಯ । ಸಂಕೇತವಾಗಿಹುದು ॥

ತನ್ನೊಡೆಯನಿಗೆ । ಸವಿಯಾದ । ನೈವೇದ್ಯ ತಂದಿಹುದು ॥
ಸ್ವೀಕರಿಸಿ । ಸಲಹಯ್ಯ । ನೀ ಕೃಪೆದೋರಿ। ಬಂದು ॥
ಬಸವ ಪ್ರಭು ತವಚರಣಕೆ ಸುಪ್ರಭಾತಂ ॥

ಮಾದರಸ । ಮಾದಲಾಂಬೆಯಾ । ಉದರದೆ ॥
ಜನಿಸಿ ನೀ । ಬಸವ ಜಗಕೆ । ಮಂಗಳವ ತಂದೆ ॥
ಮಹೋನ್ನತ । ಗುರಿ ಸಾಧಿಸಿ । ಆದರ್ಶ ಗುರುವಾದೆ ॥
ನೀತಿ ಜ್ಯೋತಿಯ ಬೆಳಗಿ । ಜಾತಿ ಭೇದವ । ತೊಡೆದೆ ॥
ಬಸವ ಪ್ರಭು । ತವಚರಣಕೆ ಸುಪ್ರಭಾತಂ ॥

ಕಾದಿಹರು । ಶಿವಶರಣರು । ತಂದೆ ! ನೀ ಬರುವದಾರಿ ॥
ಕುಳಿತಿಹರು ಅನುಭವ ಮಂಟಪದೆ । ಕಾತುರವ ತೋರಿ ॥
ಕಲ್ಯಾಣ ಕಹಳೆಯನೂದಿ । ನಿನಗೆಲ್ಲೆಡೆಯು । ಜಯಭೇರಿ ॥
ತವಚರಣಕೆ । ನಮಿಸಿಹರು । ಶುಭಾಶೀರ್ವಾದ। ಕೋರಿ ॥
ಬಸವಪ್ರಭು । ತವಚರಣಕೆ ಸುಪ್ರಭಾತಂ ॥

ಶುಭ ಸುಪ್ರಭಾತದ । ಸುಂದರದ ಸಮಯದೆ ॥
ತುಂಬಿರಲಿ । ಬಸವರಸ । ಬೆಳಕೆಂದು । ಸರಿಯದೆ ॥
ನಿಮ್ಮ ಶ್ರೀಪಾದ ಪೂಜೆಯ । ಮಾಡುವೆನು । ತನ್ಮಯದೆ ॥
ಹಲ ಪಾಪ ದೂರಾಗಿಸು । ದೇವ ಈ ಜನ್ಮದೆ ॥
ಬಸವ ಪ್ರಭು ತವಚರಣಕೆ ಸುಪ್ರಭಾತಂ ॥

ನೀ ಅಂದು । ಹಚ್ಚಿದ । ಹಣತೆಯಾ ಕಿರಣ ॥
ಭಕ್ತರಿಗೆ । ಬೆಳಕಾಗಿ । ದಾರಿ । ತೋರಿಹುದಪ್ಪಾ ॥
ನೀ ಕರುಣೆ ತೋರೆ । ಸಾಕ್ಷಾತ್ಕಾರ । ಸಂಪೂರ್ಣ ॥
ಈ ಕರೆಗೆ ಕರಗಲಿ । ನಿನ್ನಂತಃಕರಣ ॥
ಬಸವಪ್ರಭು । ತವಚರಣಕೆ ಸುಪ್ರಭಾತಂ ॥

ಅತಿನೊಂದು । ಬಸವಳಿದ । ಈ ಹೃದಯ ನೋಡು ॥
ಭವದ । ಬಡ ಬಾಗ್ನಿಯಲಿ । ಬೆಂದು । ಬರಡು ॥
ನೀನೊಲಿದು । ಕೊನರಿಸು । ಈ ಬಾಳ ಕೊರಡು ॥
ಅರಿಯದಾ । ಶಿಶುವಾನು । ಬಸವಣ್ಣ ಕಾಪಾಡು ॥
ಬಸವಪ್ರಭು ! ತವಚರಣಕೆ ಸುಪ್ರಭಾತಂ ॥

ನೀ ದಯೆ–ಧರ್ಮ–ತ್ಯಾಗಗಳ | ಸಾಕಾರಮೂರ್ತಿ ||
ಹೆಣೆದು ಹರಡಿಹೆ । ಸುಂದರ | ವಚನಗಳ ರಾಶಿ ||
ನಿನ್ನ ಕಾರುಣ್ಯ | ಕಿರಣದ | ಜ್ಯೋತಿ । ಬೆಳಗುತಿದೆ ಕಂಗೊಳಿಸಿ ||
ಕಾದಿಹೆನು । ಓ ಗುರುವೆ | ನಿಮ್ಮ ಶ್ರೀ ಚರಣದರ್ಶನವ ಬಯಸಿ ||
ಬಸವಪ್ರಭು । ತವಚರಣಕೆ ಸುಪ್ರಭಾತಂ ||

ಪಾಪ ಕಡಲಲಿ | ಮುಳುಗಿ । ನಾನೊಂದಿರುವೆ ||
ಈಸಲಾರದೆ | ಪ್ರಭುವೆ | ತೊಳಲಾಡಿ । ಬಳಲಿರುವೆ ||
ಹರಿಸಿ । ಶಿವಕಾರುಣ್ಯವ । ಧಾರೈಸು ಗುರುವೆ ||
ಮಾಯಿಸೆಮ್ಮನು | ಪುನೀತರಾಗಿಸು | ಭಕ್ತಕಲ್ಪತರುವೆ ||
ಬಸವಪ್ರಭು। ತವಚರಣಕೆ ಸುಪ್ರಭಾತಂ ||

ತುಂಬಿ ಧರ್ಮ । ಸತ್ಯಗಳ । ಸುಜ್ಞಾನಾಮೃತಧಾರೆ ||
ಸರಿಸಿದೆ । ಗುರುವೆ | ಮೂಢ ಸಂಪ್ರದಾಯದ ತೆರೆ ||
ಕಡು ನೊಂದ । ದೀನರಿಗೆ | ನೀನೆ ಆಸರೆ ||
ವಿಶ್ವಗುರು | ನೀನೆಂದು । ಬೆಳಗುವ ಧ್ರುವತಾರೆ ||
ಬಸವಪ್ರಭು । ತವಚರಣಕೆ ಸುಪ್ರಭಾತಂ ||

ತುಂಬಿರುವ | ಅಜ್ಞಾನ । ತೆರೆಯನ್ನು ಸರಿಸು ||
ಮುನ್ನಡೆವ । ಹಾದಿಯು । ಸನ್ಮಾರ್ಗ ತೋರಿಸು ||
ಮದ—ಮತ್ಸರ | ತೊರೆಸಿ । ಮನವ | ಹಸನಾಗಿಸು ||
ನಂಬಿರುವ | ಭಕ್ತರ | ಕೈಹಿಡಿದು | ನಡೆಸು ||
ಬಸವಪ್ರಭು | ತವಚರಣಕೆ ಸುಪ್ರಭಾತಂ ||

ಜೀವನದ | ದುಃಖ ದುಮ್ಮಾನಗಳ | ಕಡೆಗಣಿಸಿ ||
ಶ್ರೀ ಗುರು ಬಸವಣ್ಣ । ನಿನ್ನ ಒಮ್ಮನದಿ || ಸ್ಮರಿಸಿ ||
ಬೇಡುವೆನು | ಕಾರುಣ್ಯ। ಕಡು ಭವವ | ಪರಿಹರಿಸಿ ||
ಕಾಪಾಡು । ಪ್ರಭು । ಎನ್ನ। ನೀ ಕರುಣಿಸೆ ||
ಬಸವಪ್ರಭು | ತವಚರಣಕೆ ಸುಪ್ರಭಾತಂ ||

ಶರಣು-ಶರಣಾರ್ಥಿ । ಗುರು। ಬಸವ ತಂದೆ ||
ಕರ್ತನ ಬೆಸನವ ಹೊತ್ತು | ನೀ ಇಹ–ಪರವ ಬೆಳಗಿದೆ ||
ಕಲ್ಯಾಣ ರಾಜ್ಯದ । ಮಹಾಜ್ಯೋತಿಯಾದೆ ||
ಕೂಡಲ ಸಂಗಮನೊಳು | ಬೆರೆತು | ಮರೆಯಾದೆ ||
ಬಸವಪ್ರಭು । ತವಚರಣಕೆ ಸುಪ್ರಭಾತಂ ||

* ಮಂಗಳವು | ಬಸವಣ್ಣಗೆ। ಶುಭ ಮಂಗಳವು | ಬಸವಯ್ಯಗೆ || *
* ಮಂಗಳಂ । ಜಯ । ಮಂಗಳಂ ||


★

ಬಸವಣ್ಣನವರಿಗೆ ಕೃತಜ್ಞತೆ

ಡಾ|| ಸಿ. ಪಿ. ಕೃಷ್ಣಕುಮಾರ್
ಮಾನಸಗಂಗೋತ್ರಿ, ಮೈಸೂರು

ಸರ್ವರೇಳ್ಗೆಯ ಕೋರಿ ಪ್ರಾಚೀನ ಋಷಿವರರು
ವೇದ ವೇದಾಂತಗಳನುಪದೇಶಿಸಿದರಂದು.
ಆ ಪುಣ್ಯತೀರ್ಥ ಪಾಮರರ ಬದಕನು ಹೊಕ್ಕು
ಉದ್ಧರಿಪ ಮುನ್ನವೇ ಬಂದಿತಡಚಣೆಯೊಂದು :
ಆಕಾಶದಿಂದಿಳಿದ ದೇವಗಂಗೆಯು ಸಿಕ್ಕು
ಮೃಡನ ಮುಡಿಯಲಿ ಕಟ್ಟುವಡೆದಂತೆ,ಸಂಸ್ಕೃತದ
ಸ್ವರ್ಣ ಶೃಂಖಲೆಯು ಬಂಧಿಸಿತು ಆ ವಾಕ್ಸುಧೆಯ !
ಪಂಡಿತರ ಸೊತ್ತಾಗಿ ಸಾಮಾನ್ಯ ಜನರೆದೆಯ
ಬೆಳಗಲಾರದ ಮಂತ್ರಗಳನು ತಿಳಿಗನ್ನಡದಿ
ಮನೆ ಮನೆಯ ಬಾಗಿಲಿಗೆ ಒಯ್ದು ಕೊಟ್ಟಿರಿನೀವು ;
ನಿಮ್ಮಿಂದ ಸಕಲರಿಗು ಸಾಧ್ಯವೆನಿಸಿತು ಮುಕುತಿ !
ಉಪನಿಷದ್ ಗಂಗೆಯನು ಸಂಸ್ಕೃತದ ಜಡೆಯಿಂದ
ಬಿಡಿಸಿ, ನಾಡಿನ ಮೇಲೆ ವಚನ ವಾಹಿನಿಯಾಗಿ
ಹರಿಸೆ, ಉಪಕರಿಸೆ ನಿಮ್ಮದು ಭಗೀರಥಖ್ಯಾತಿ !

★



–ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಹಂದಿಯೂ ಮದಕರಿಯೂ ಒಂದೇ ದಾರಿಯಲ್ಲಿ ಸಂಧಿಸಿದಡೆ
ಹಂದಿಗಂಜಿ ಮದಕರಿ ಕೆಲಕ್ಕೆ ಸಾರಿದರೆ
ಆ ಹಂದಿಯದು ಕೇಸರಿಯಪ್ಪುದೇ ಚನ್ನಮಲ್ಲಿಕಾರ್ಜುನಾ

—ಜಗನ್ಮಾತಾ ಅಕ್ಕಮಹಾದೇವಿ

ಶರಣರ ವಚನಗಳು ಸೈದ್ಧಾಂತಿಕ ರೂಪಕಗಳು. ಅದು ಎಷ್ಟೇ ಸಣ್ಣದಿರಲಿ ಅದರಲ್ಲೊಂದು ಸಿದ್ಧಾಂತ, ಜೀವನ ವಿಮರ್ಶೆ, ಬಾಳ ಬಗೆ ಅಡಕವಾಗಿರುತ್ತದೆ. ಗಂಭೀರ ಚಿಂತನೆಯೊಡನೆ ಒಮ್ಮೊಮ್ಮೆ ವಕ್ರೋಕ್ತಿ, ಸೂಕ್ಷ್ಮ ಹಾಸ್ಯ ಇರುವುದೂ ಉಂಟು.

ಇಲ್ಲೊಂದು ರೂಪಕವಿದೆ. ಒಂದು ರಾಜಬೀದಿಯನ್ನು ಕಲ್ಪಿಸಿಕೊಳ್ಳೋಣ, ಆ ರಾಜಬೀದಿಯಲ್ಲಿ ಒಂದು ಸುಂದರ ಮದಕರಿ ಬರುತ್ತಿದೆ. ಅದನ್ನು ಚೆನ್ನಾಗಿ ಮೀಯಿಸಿ, ಅಲಂಕರಿಸಲಾಗಿದೆ. ಅದರ ಮೇಲೆ ಶುಭ್ರವಾದ ಹಾಸುಗಳು; ಅಲ್ಲಲ್ಲೇ ಉತ್ಕೃಷ್ಟ ಆಭರಣಗಳು, ಬಹುಶಃ ಅದರ ಮೇಲೊಂದು ಚಿನ್ನದ ಅಂಬಾರಿ ಇದ್ದಿರಬಹುದು. ಅದರಲ್ಲಿ ಒಬ್ಬ ರಾಜನು ಕುಳಿತಿರಲೂಬಹುದು. ಒಂದಕ್ಕಿಂತ ಒಂದ ಚೆಂದ. ಹೀಗಾಗಿ ಜನಸಂದಣಿ ನೆರೆದು ಬೆರಗಾಗಿ ಆ ಮದಕರಿಯನ್ನು, ಅದರ ವೈಭವವನ್ನೂ ನೋಡುತ್ತಿದೆ. ಆಹಾ ಎಂದು ಜನಸಮೂಹ ಉದ್ಗಾರ ತೆಗೆಯುತ್ತಿದೆ. ಆನೆ ಯಾರ ತಂಟೆಗೂ ಹೋಗದೆ ಗಂಭೀರವಾಗಿ ಹೆದ್ದಾರಿಯಲ್ಲಿ ನಡೆಯುತ್ತಿದೆ.

ಆದರೆ ಒಂದು ಹಂದಿಗೆ, ಹೆದ್ದಾರಿಯ ಪಕ್ಕದಲ್ಲಿದ್ದ ಓಣಿಯ ಕೊಳಚೆ ಗುಂಡಿಯಲ್ಲಿ ಹೊರಳಾಡುತಿದ್ದುದ್ದಕ್ಕೆ, ಆ ಜನಸಂದಣಿ ನೋಡಿ ಗಾಬರಿಯಾಗಿರಬೇಕು. ಅಥವಾ ಜನರ ದೃಷ್ಟಿಯೆಲ್ಲ ಮದಕರಿಯತ್ತ ನಿಂತುದಕ್ಕೆ ಮಾತ್ಸರ್ಯವಾಗಿರಬೇಕು. ಜನರ ಗಮನವನ್ನು ಮದಕರಿಯಿಂದ ವಿಕೇಂದ್ರೀಕರಿಸಿ ತನ್ನತ್ತ ಕೇಂದ್ರೀಕರಿಸಿಕೊಳ್ಳಲು ಆಸೆಯೂ ಆಗಿರಬಹುದು. ತಕ್ಷಣವೇ ಹೆದ್ದಾರಿಯತ್ತ ಮುನ್ನುಗ್ಗಿತು. ನಾನೇನು

ನಿನಗಿಂತ ಕಡಿಮೆ ಎಂದು ಎದೆ ಸೆಟೆಸಿ ಮದಕರಿಯತ್ತ ನೋಡಿತು. ಅದರ ಎದುರು ಸವಾಲು ಹಾಕಿ ನಿಂತಿತು. ಮದಕರಿ ಕ್ಷಣಕಾಲ ನಿಂತು ಹಂದಿಯನ್ನು ಗಮನಿಸಿತು. ಹಂದಿಯ ಮೈಯೆಲ್ಲ ಕೊಳೆಯೋ ಕೊಳೆ. ಬಗ್ಗಡದಲ್ಲಿ ಹೊರಳಾಡಿದೆ. ಅದರ ಮೈಯಿಂದ ದುರ್ನಾತ ಸೂಸುತ್ತಿದೆ. ಆದರೆ ಹಂದಿಯ ಹಮ್ಮು, ಕುಚೇಷ್ಟೆ ನೋಡಿ ಮದಕರಿಯೂ ಕೆರಳಿತು. ಒಮ್ಮೆ ಕಾಲನ್ನೆತ್ತಿ ಹಂದಿಯ ಮೇಲೆ ಇಟ್ಟು ಬಿಟ್ಟರೆಂತು? ಅದು ಚೀರಿ, ಕುಯ್ಯೋ ಮರ್ರೋ ಎಂದು ಓಡಿಬಿಡುವುದು ಅಥವಾ ಅಲ್ಲೇ ಅಪ್ಪಚ್ಚಿಯಾಗುವುದು ಮದಕರಿ ಮತ್ತೆ ಕ್ಷಣಕಾಲ ಚಿಂತಿಸಿತು, "ನಿಜ. ಆ ಹಂದಿಯನ್ನು ಮುಟ್ಟಿಸಿಕೊಳ್ಳುವುದರಿಂದ ತನ್ನ ಮೈಯೆಲ್ಲ ಕೊಳೆಯಾಗುವುದು. ತಾನಿನ್ನೂ ಅಂಬಾರಿಯನ್ನು, ರಾಜನನ್ನು ಹೊತ್ತು ಸವೆಸಬೇಕಾದ ದಾರಿ ಬಹಳಷ್ಟಿದೆ. ಹುಡುಗಾಟಕ್ಕೆ, ಸೆಣಸಲಿಕ್ಕೆ ಸಮಯವೆಲ್ಲಿದೆ? ತನ್ನ ಗುರಿಯತ್ತ ಕರ್ತವ್ಯ ಪರನಾಗಿ ಸಾಗುವುದು ಒಳ್ಳಿತು" ಎಂದುಕೊಂಡು ಹಂದಿ ನಿಂತ ಜಾಗದಿಂದ ಪಕ್ಕಕ್ಕೆ ಸರಿದು, ಹೆದ್ದಾರಿಯಲ್ಲಿ ಮುಂದೆ ಸಾಗಿತು.

ಆಗ ಈ ಹಂದಿಗೆ ಜಂಭವೋ ಜಂಭ. ಆನೆಯಂತಹ ಪ್ರಾಣಿ ತನಗೆ ಅಂಜಿ ಕೆಲಕ್ಕೆ ಸಾರಬೇಕಾದರೆ ತಾನು ಆನೆಗಿಂತಲೂ ಶ್ರೇಷ್ಟವಾದ ಕೇಸರಿ (ಸಿಂಹ)ಯೇ ಇರಬೇಕು ಎಂದು ಮದದಿಂದ ಬೀಗಿತು. ಆದರೆ ಸುತ್ತಲೂ ನೆರೆದವರೆಲ್ಲ ಅದರ ಮೌಢ್ಯತೆ ಕಂಡು ಮನವಾರೆ ನಕ್ಕಿರಬೇಕು. ಈ ರೂಪಕದಲ್ಲಿ ಹಾಸ್ಯವಿದೆ, ಗಾಂಭೀರ್ಯ ಸಹಿತ ತತ್ತ್ವಜ್ಞಾನವಿದೆ. ಈ ಬಾಳೊಂದು ರಾಜಬೀದಿ. ಇಲ್ಲಿ ಅನೇಕ ಸಂತರು, ಮಹಂತರು, ರಾಷ್ಟ್ರಾಭಿಮಾನಿಗಳು, ಆದರ್ಶ ಜೀವಿಗಳು ಸಾಗುತ್ತಿರುವುದುಂಟು. ಯಾವುದೋ ಆದರ್ಶವಾದದ ನೀರಿನಲ್ಲಿ ಅವರು ಮಿಂದಿದ್ದಾರೆ. ಉತ್ತಮ ವಿಚಾರಗಳ ಬಟ್ಟೆ ತೊಟ್ಟಿದ್ದಾರೆ. ಸದ್ಗುಣಗಳ ಆಭರಣಗಳಿಂದ ಅಲಂಕರಿಸಿಕೊಂಡಿದ್ದಾರೆ, ಕರ್ತವ್ಯದ ಅಂಬಾರಿ ಹೊತ್ತಿದ್ದಾರೆ. ಅದರಲ್ಲಿ ದೇವರನ್ನೋ, ರಾಷ್ಟ್ರವನ್ನೋ, ಯಾವುದೋ ಆದರ್ಶವನ್ನೋ ಪ್ರತಿಷ್ಠಾಪಿಸಿ, ಹೊತ್ತುಕೊಂಡು ಮುನ್ನಡೆಯುತ್ತಿದ್ದಾರೆ. ಅವರಿಗೇನೂ ಬೇಡ. ಬಾಳಸಂಜೆ ಸಮೀಪಿಸುವ ಮುನ್ನ ಗುರಿಯನ್ನು ತಲುಪುವ ಆತುರ ಅವರಿಗೆ. ಜನರೂ ಉತ್ಸುಕರಾಗಿ, ಮೆಚ್ಚುಗೆಯಿಂದ ಅವರ ಸಾಧನೆಯನ್ನು ನೋಡುತ್ತಿದ್ದಾರೆ. ಆದರೆ ಇದ್ದಕ್ಕಿದ್ದಂತೆಯೇ ಮಾರ್ಗಕ್ಕಡ್ಡವಾಗಿ ಈ ಪುಟ್ಟ ಹಂದಿಯಂಥ ಜನರು ಬರುತ್ತಾರೆ. ಅನ್ಯಾಯ ಅಪ್ರಾಮಾಣಿಕ ಬದುಕಿನ ಕೆಸರಲ್ಲಿ ಲೋಲಾಡುತ್ತ, ತಮ್ಮತ್ತ ಜನರ ಮೆಚ್ಚುಗೆ ಹರಿಯದೆಂದು ಮತ್ಸರ ಪಡುತ್ತ ಕರ್ತವ್ಯ: ಮಗ್ನ ಮಹಾಂತರೆದುರು ನಿಲ್ಲುತ್ತಾರೆ; ಚೇಷ್ಟಿಸುತ್ತಾರೆ, ತೆಗಳುತ್ತಾರೆ. ತಮ್ಮ ಸಮಯ ಹರಣ ಮಾಡಿಕೊಳ್ಳಲು ಇಚ್ಛಿಸದ ಘನವಂತರು ಇಂತಹ ಕ್ಷುದ್ರ

ರೊಡನೆ ಸೆಣಸಲಾರದೆ ಕರ್ತವ್ಯದ ಕಡೆಗೆ ಸಾಗಿದರೆ, ಸೋತರೆಂದು ಜರಿದಾಡುತ್ತಾರೆ. ತಾವು ಗೆದ್ದೆವೆಂದು ಬೀಗುತ್ತಾರೆ. ಆದರೆ ಇಲ್ಲಿ ಆನೆ ಪಕ್ಕಕ್ಕೆ ಸಾಗುವಲ್ಲಿ ಹಂದಿಯ ಕೊಳಕುತನದ ಬಗ್ಗೆ ಜಿಗುಪ್ಸೆ, ಅನುಕಂಪ ಉಂಟೇ ವಿನಾ ಸೋಲಿನ ಮನೋಭಾವ ವಿಲ್ಲ. ಅಂತೆಯೇ ಶರಣರ ಜೀವನವೂ ಇರುತ್ತದೆ. ★

ವಿಶ್ವಕಲ್ಯಾಣ ಮಿಷನ್ ವಿದ್ಯಾ ಸಂಸ್ಥೆಯ

ಅಕ್ಕಮಹಾದೇವಿ ನರ್ಸರಿ ಮತ್ತು ಪ್ರೈಮರಿ ಶಾಲೆ

(ಇಂಗ್ಲೀಷ್ ಮಾಧ್ಯಮ ಮಾತ್ರ)

ಬಸವ ಮಂಟಪ, ನಂ. 24, 2ನೇ ಬ್ಲಾಕ್: ಕಾರ್ಡ್‌ರೋಡ್,
ರಾಜಾಜಿನಗರ, ಬೆಂಗಳೂರು-560-010

ಬೆಂಗಳೂರು ರಾಜಾಜಿನಗರ ಬಡಾವಣೆಯಲ್ಲಿ ಅಕ್ಕಮಹಾದೇವಿ ನರ್ಸರಿ ಮತ್ತು ಪ್ರೈಮರಿ ಶಾಲೆ ನಡೆಯುತ್ತಿದ್ದು ಶಿಶುವಿವಾರ 1 ಮತ್ತು 2, ಪ್ರಾಥಮಿಕ 1, 2 ಮತ್ತು 3ನೆಯ ತರಗತಿಗಳು 1881-1882 ಸಾಲಿಗೆ ನಡೆಯಲಿವೆ. ಅರ್ಜಿ ಪತ್ರ ಗಳನ್ನು ವಿತರಣೆ ಮಾಡಲಾಗುತ್ತಿದ್ದು, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22-5-1981,

ವಿಶೇಷ ಸೂಚನೆ: ಕೆಲವಾರು ಮಾತಾಪಿತೃಗಳು ಈ ತರಗತಿಗಳ ಮಕ್ಕಳಿಗೂ ಹಾಸ್ಟೆಲ್ ವ್ಯವಸ್ಥೆಗಾಗಿ ಒತ್ತಾಯಪಡಿಸಿರುವುದರಿಂದ ಈ ವರ್ಷ ಕೇವಲ ಹದಿನೈದು ಮಕ್ಕಳಿಗೆ ರೆಸಿಡೆನ್ಶಿಯಲ್ ಹಾಸ್ಟೆಲ್ ವ್ಯವಸ್ಥೆ ಒದಗಿಸಲು ವಿ.ಕ.ಮಿ. ವಿದ್ಯಾಸಂಸ್ಥೆ ನಿಶ್ಚಯಿಸಿದೆ. ವಿಶೇಷ ಕಾರಣ, ಅನಿವಾರ್ಯ ಸನ್ನಿವೇಶವಿದ್ದ ತಾಯಿ ತಂದೆಗಳು ಮಾತ್ರ ಪ್ರಯತ್ನಿಸಬೇಕಾಗಿ ವಿನಂತಿ. ಪ್ರಾಸ್ಪೆಕ್ಟಸ್‌ಗಾಗಿ 5 ರೂ. ಕಳಿಸಿರಿ.

ಬಸವ ಗಂಗೋತ್ರಿಯ ವಿಶೇಷ ಕಾರ್ಯಕ್ರಮ

ಆತ್ಮೀಯರಾದ ಸದ್ಭಕ್ತರೇ ಮತ್ತು ಸಹೃದಯರೇ,

ವಿಶ್ವಕಲ್ಯಾಣ ಮಿಷನ ಉದಾತ್ತ ಧ್ಯೇಯ ಹೊತ್ತು ಕಾರ್ಯೋನ್ಮುಖವಾಗಿರುವ ಸಂಸ್ಥೆ. "ಬಸವ ಗಂಗೋತ್ರಿ" ಎಂದು ನಾಮಕರಣ ಹೊಂದಿರುವ ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲಿರುವ ಸುಂದರ ಆವರಣದಲ್ಲಿ ನಿರ್ಮಾಣವಾಗುತ್ತಿರುವ

1. ಬಸವ ಭಾರತಿ ವಿದ್ಯಾಲಯದ ಶಾಲಾಕಟ್ಟಡ
2. ಗಂಗಾಂಬಿಕಾ ಪ್ರಸಾದ ನಿಲಯ
3. ಮಹಾತ್ಮಾ ಗಾಂಧಿ ವಸತಿ ಗೃಹ

ಈ ಮೂರರ ಉದ್ಘಾಟನಾ ಸಮಾರಂಭ ಜೂನ್ 1981, ಯಾವುದಾದರೊಂದು ಭಾನುವಾರ ಬೆಳಿಗ್ಗೆ 10 ಗಂಟೆಗೆ ಜರುಗಲಿದೆ. ದಿನಾಂಕವನ್ನು ಖಚಿತವಾಗಿ ಮುಂದೆ ತಿಳಿಸಲಾಗುವುದು.

ಶಾಲಾಮಕ್ಕಳ ಮಾತಾಪಿತೃಗಳಿಗೆ ಮತ್ತು ಸಮಸ್ತ ಸದ್ಭಕ್ತರಿಗೆ ಆದರದ ಸುಸ್ವಾಗತ ಕೋರುವೆವು.

ಸ್ಥಳ ಮಾರ್ಗದರ್ಶನ :—

ಬೆಂಗಳೂರು-ಮೈಸೂರು ರಸ್ತೆಯ ಮೇಲೆ 21 ನೇ ಕಿಲೋಮೀಟರ್ ದೂರ ದಲ್ಲಿ, ಕುಂಬಳಗೋಡು ಗ್ರಾಮದ ಬಳಿ ಇದೆ.

ಬಸ್‌ರೂಟ್‌ನಂಬರ್ ; ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ 225, 226, 227 ಮತ್ತು 228. ಬೆಂಗಳೂರು-ಮೈಸೂರು ಹೆದ್ದಾರಿಯ ಮೇಲೆ ಸಂಚರಿಸುವ ಸಾಮಾನ್ಯವೇಗದ ಬಸ್‌ಗಳಲ್ಲಿಯೂ ಬಂದು ಇಳಿಯಬಹುದು. ಬಸವ ಗಂಗೋತ್ರಿ ಮುಖ್ಯದ್ವಾರದ ಬಳಿ ಬೇಡಿಕೆಯ ನಿಲ್ದಾಣವಿದೆ. ★

ನಮ್ಮ ತಾಯಿ ನಾಡಿನಲ್ಲಿ ಧಾರ್ಮಿಕ ಮತ್ತು ನೈತಿಕಕ್ಕಾಗಿ ದುಡಿದ ಸರ್ವ
ದೃಷ್ಟಿಯಿಂದಲೂ ಅಚ್ಚಕನ್ನಡಿಗರೆಂದರೆ ಅಂದಿನಿಂದ ಇಂದಿನವರೆಗೆ ಬಸವೇಶ್ವರ
ರೊಬ್ಬರೇ. ಅವರನ್ನು ಮೀರಿಸಿದ ಕೊನೆಗೆ ಅವರಿಗೆ ಸರಿಸಮಾನರಾದ ಮಹಾ
ವಿಭೂತಿಯು ಬೇರೆ ಯಾರಾದರೂ ಇರುವರೆಂದು ನಾನು ಧೈರ್ಯವಾಗಿ ಹೇಳಲಾರೆ.

—ಬೆನಗಲ್ ರಾಮರಾಯರು

ಮಾತೃ ನೀತಿ

ಚೆಲುವ ರಾಶಿ ನಿನ್ನ ಹೃದಯ
ಮಧುರ ಅಬ್ದಿ ನಿನ್ನ ವಾಣಿ,
ಸಾವನರಿಯದು ನಿನ್ನ ಬದುಕು
ಜ್ಯೋತಿ ರಾಶಿಯ ಬೆಳಕಲಿ —೧

ಹೃದಯ ತಂತುವ ಮಿಟುತ್ತಿರುವೆ
ಭವ್ಯವಾಣಿಯ ಅರ್ಪಿಸಿ ;
ಸುಪ್ತ ಹೃದಯವ ತಟ್ಟುತ್ತಿರುವೆ
ಜ್ಞಾನ ವಿಜ್ಞಾನವ ಸಮರ್ಪಿಸಿ — ೨

ಬಿಚ್ಚುಮನದ ಬಾಳಹೊಂದಿ
ತ್ಯಾಗ ಮೌನದ ಬೆಳಕ ತುಂಬಿ
ಹಚ್ಚುತ್ತಿರುವೆ ಹಣತೆಯ
ದೇವ ದೀಪ್ತಿಯ ಕರುಣೆಯ —೩

ತಿರುಳು ತಿರುಳೇ ನಿನ್ನ ನೀತಿ
ಬರಡು ಬರಡಿಗೆ ನೀಡಿ ಜ್ಯೋತಿ
ನಿನ್ನ ಬದುಕದು ವಿಶ್ವನೀತಿ
ಹಬ್ಬಿಹರಡಲಿ ಮಾತೃಪ್ರೀತಿ.—೪

ಡಾ|| ಗುಂಡಪ್ಪ, ಶ್ರೀನಗರ, ಬೆಂಗಳೂರು–50

೧೫೧ ರೂ. ಸಲ್ಲಿಸಿ ಆಜೀವ ಸದಸ್ಯರಾದ ಕಂಪ್ಲಿಯ ಸದ್ಭಕ್ತರು

ಶರಣರಾದ

1. ವೇ. ಗೊಗ್ಗಬಸಯ್ಯನವರು, ಶಿವಾನಂದಾಶ್ರಮ
2. ಎಸ್. ಎಂ. ರುದ್ರಯ್ಯಸ್ವಾಮಿ, ಕಂಪನಿ
3. ಬಿ. ಎಂ. ಕೊಟ್ರೇಶ, ಮಲ್ಲಿಕಾರ್ಜುನಾ ಟ್ರೇಡಿಂಗ್ ಕಂಪನಿ, ಕಂಪ್ಲಿ
4. ಹೆಚ್. ಕರಿಗೌಡರು, ಕೆ.ಇ.ಬಿ.
5. ಕೆ. ಶ್ರೀನಿವಾಸಪ್ಪನವರು, ಮರ್ಚೆಂಟ್ಸ್
6. ಬಂಡಾರಿ ಹುಲಗಪ್ಪ, ಕಾಳಮ್ಮನ ಗುಡಿ ಬೀದಿ
7. ಕೆ. ವಿ. ನಾಗರಾಜ. ಬಿ.ಇ. ಅಸಿಸ್ಟೆಂಟ್ ಇಂಜಿನಿಯರ್
8. ಬೆಟಗಿರಿ ವಿರುಪಾಕ್ಷಪ್ಪ, ಎಮ್ಮಿಗನೂರು
9. ವೈ. ಜಯರಾಮರೆಡ್ಡಿ, ಮೆಕಾನಿಕ್
10. ಟೌನ್ ರೀಡಿಂಗ್ ರೂಮ್, ಹೊಸಪೇಟೆ
11. ಶ್ರೀಶೈಲ ಪಾಟೀಲ್, ಬೆಂಗಳೂರು
12. ಎಸ್. ಎಂ. ಕುಪ್ಪಸದ, ಬೆಂಗಳೂರು
13. ಶಿವಾಂಬಿಕೆ ರುದ್ರಮುನಿ, ಬೆಂಗಳೂರು

ಬಸವಣ್ಣನವರ ಕಾವ್ಯಶಕ್ತಿ

ಡಾ॥ ಸಿ. ಪಿ. ಕೃಷ್ಣಕುಮಾರ್

ಬಸವಣ್ಣನವರ ಕಾವ್ಯಶಕ್ತಿ ಬಹಳ ಎತ್ತರದ್ದು ; ಯಾವ ಒರೆಗಲ್ಲಿನ ಮೇಲೂ ತನ್ನ ಮೇಲ್ಮೆಯನ್ನು ಸ್ಥಾಪಿಸಿಕೊಳ್ಳಬಲ್ಲದ್ದು. ಒಬ್ಬ ಲೇಖಕನಲ್ಲಿ ಸಾಹಿತ್ಯಕವಾಗಿ, ಸಾಹಿತ್ಯೇತರವಾಗಿ ಏನೇನನ್ನು ನಿರೀಕ್ಷಿಸಬಹುದೊ ಅದನ್ನೆಲ್ಲ ಒಂದು ಸಾಮರಸ್ಯದಲ್ಲಿ ಒಳಗೊಂಡಿದೆ ಬಸವಣ್ಣನವರ ವಚನ ಸಮುದಾಯ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಪ್ರತಿಕ್ರಿಯೆ, ಕ್ರಿಯೆ ಎರಡೂ ಆಗಿ ಮೂಡಿದ ಈ ವಚನಗಳು, ಅಂಥದೇ ಪರಿಸ್ಥಿತಿಯಿರುವ ಇಂದಿನ ದಿನಗಳಲ್ಲಿ ಮತ್ತಾವುದೇ ಹಿಂದಿನ ಕಾವ್ಯಕ್ಕಿಂತ ಪ್ರಸ್ತುತವೂ ಮಹತ್ವಪೂರ್ಣವೂ ಆಗಿರುವುದು ಆಶ್ಚರ್ಯದ ಸಂಗತಿಯಲ್ಲ. ನಿಜವಾದ ಆಶ್ಚರ್ಯ ಎಂದರೆ, ಆ ಹಿನ್ನೆಲೆಯನ್ನು ಮರೆಮಾಡಿ ನೋಡಿದಾಗಲೂ ಹಿಂದಿಲ್ಲ ಮುಂದಿಲ್ಲ ಎನ್ನುವಂತೆ ಈ ವಚನಗಳಲ್ಲಿ ಕಂಡುಬರುವ ವಿಶೇಷ ಸತ್ವ ; ಈ ಹೊತ್ತು ನಾವು ಹೇಳುವುದೆಲ್ಲ ಹಳೆಯದು ಎನಿಸಿಬಿಡುವ ಸಮಗ್ರತೆ ಮತ್ತು ವ್ಯಾಪಕತೆ. ಹೊಸಗನ್ನಡದ ರೊಮ್ಯಾಂಟಿಕ್, ಪ್ರಗತಿಶೀಲ, ನವ್ಯ, ನವ್ಯೋತ್ತರ ಅಥವಾ ದಲಿತ—ಎಲ್ಲ ಪ್ರಸ್ಥಾನಗಳೂ ಬಸವಣ್ಣನವರ ವಚನಗಳಲ್ಲಿ ತಮ್ಮ ಮುಖಗಳನ್ನು ಕಂಡುಕೊಳ್ಳಬಹುದು.

ಈ ವಚನಗಳು ಕವನ ಪ್ರಜ್ಞೆಯಿಂದ ಹುಟ್ಟಿದವಲ್ಲ, ಜೀವನಪ್ರಜ್ಞೆಯಿಂದ ಹುಟ್ಟಿದವು. ಆದರೂ, ಅಥವಾ ಆ ಕಾರಣದಿಂದಲೇ, ಅವು ಶ್ರೇಷ್ಠತಮ ಕಾವ್ಯವಾಗಿ ಪರಿಣಮಿಸಿವೆ. ಜೀವನ ಮತ್ತು ಕಾವ್ಯದ ಸಂಬಂಧವನ್ನು ಕುರಿತು ಯೋಚಿಸುವಾಗ, ಮೂರು ಬಗೆಯ ಕವಿಗಳು ಕಂಡುಬರುತ್ತಾರೆ : ಜೀವನದೊಡನೆ ಸಂಬಂಧವೇ ಇಲ್ಲದಂತೆ ಕಾವ್ಯವನ್ನು ಆಕಾಶದಲ್ಲಿ ಹಾರಿಸಿಕೊಂಡು ಹೋಗುವವರು ಒಂದು ವರ್ಗ ; ನಮ್ಮ ಬಹುಮಂದಿ ಪ್ರಾಚೀನ ಕವಿಗಳು ಇಂಥವರು. ಕಾವ್ಯವನ್ನು ಬದುಕಿನ ಮಟ್ಟಕ್ಕೆ ಇಳಿಸಿಬಿಡುವವರು ಇನ್ನೊಂದು ವರ್ಗ ; ಉದಾಹರಣೆಗೆ, ನಮ್ಮ ನವ್ಯ ಕವಿಗಳು. ಬದುಕನ್ನೆ ಕಾವ್ಯದ ಮಟ್ಟಕ್ಕೇರಿಸುವವರು ಅಥವಾ ಬದುಕನ್ನು ಎತ್ತರಿಸಿಕೊಂಡು, ಅದರ ಹಂತಕ್ಕೆ ಕಾವ್ಯವನ್ನು ಒಯ್ಯುವವರು ವಿರಳ ವರ್ಗ. ಇವರೇ ಅತ್ಯುತ್ತಮ ಕವಿಗಳು. ಈ ವರ್ಗಕ್ಕೆ ಬಸವಣ್ಣನವರಿಗಿಂತ ಒಳ್ಳೆಯ ಪ್ರತಿನಿಧಿ ಸಿಕ್ಕುವುದು ಕಷ್ಟ. ಕುವೆಂಪು ಅವರಂಥವರು ಇದೇ ವಲಯದ ಒಂದು ಉಪವರ್ಗದಲ್ಲಿ ಸ್ಥಾನ ಪಡೆಯುತ್ತಾರೆ.

ಬಸವಣ್ಣನವರು 'ಕೇವಲ ಕಾವೇತರ ಮನೋಧರ್ಮ'ದಿಂದ ಕಾವ್ಯರಚನೆ ಮಾಡಿದರು ಎಂದು ವಿಮರ್ಶಕರೊಬ್ಬರು ಹೇಳುತ್ತಾರೆ.[1] ಇಲ್ಲಿ 'ಕೇವಲ' ಎಂಬ ಮಾತನ್ನು ಬಿಡಬಹುದೆನಿಸುತ್ತದೆ. ಬಸವಣ್ಣನವರಲ್ಲಿ ಕಾವ್ಯ ಮನೋಧರ್ಮ ಇರಲೇ ಇಲ್ಲವೆಂದು ಸಾಧಿಸಬೇಕಾಗಿಲ್ಲ. ಅಸ್ತಿತ್ವದಲ್ಲೇ ಇಲ್ಲದ ಚಕೋರವನ್ನು ಅವರೂ ಬಿಟ್ಟಿಲ್ಲ. ಹೋಗಲಿ, "ಆನು ಒಲಿದಂತೆ ಹಾಡುವೆ" ಎಂಬ ಮಾತಿನಲ್ಲಿ, ಹಾಡುವುದು ಏನನ್ನು ಸೂಚಿಸುತ್ತದೆ ? ಇಲ್ಲಿ ವ್ಯಕ್ತವಾಗುವುದು ಅವರ ಸ್ವತಂತ್ರ ಮನೋಧರ್ಮವೆ ಹೊರತು ಕಾವ್ಯ ಮನೋಧರ್ಮದ ಅಭಾವವಲ್ಲ.

ಆದರೆ ಈ ಸ್ವಾತಂತ್ರ್ಯ ಎಲ್ಲ ಕಟ್ಟುಗಳನ್ನು ಹರಿದುಕೊಂಡ ಸ್ವೈರಪ್ರವೃತ್ತಿಯಾಗಿಲ್ಲ. "ಆನು ಒಲಿದಂತೆ ಹಾಡುವೆ" ಎಂಬುದಕ್ಕೆ ಮೊದಲು "ನಿನಗೆ ಕೇಡಿಲ್ಲವಾಗಿ" ಎಂಬ ಮಾತೊಂದನ್ನು ಸೇರಿಸಿದ್ದಾರೆ ಬಸವಣ್ಣ. ಶಿವಕ್ಕೆ ಅವರು ಕೊಟ್ಟಿರುವ ಪ್ರಾಧಾನ್ಯವನ್ನು ಇದು ಸೂಚಿಸುತ್ತದೆ : ಅವರ ಜಗತ್ತು ಅನನ್ಯ ಪರತಂತ್ರವಲ್ಲ, ಶಿವಪರತಂತ್ರವಾದದ್ದು. ಸೌಂದರ್ಯವನ್ನು ಅವರು ಅಲಕ್ಷಿಸಿದವರಲ್ಲ; ಶಿವವಿದ್ದಲ್ಲಿ ಸೌಂದರ್ಯವೂ ಇರುತ್ತದೆ ಎಂದು ನಂಬಿದವರು. ಅವರ ಈ ಶಿವನಿಷ್ಠೆಯಿಂದಲೆ ನಿಷ್ಪನ್ನವಾಗುತ್ತದೆ ಅವರ ಜೀವನನಿಷ್ಠೆ ಹಾಗೂ ಸಮಾಜನಿಷ್ಠೆ. ಅಂತೂ, ಕನ್ನಡದ ಪ್ರಪ್ರಥಮ 'ಕಮಿಟೆಡ್' ಸಾಹಿತಿ ಬಸವಣ್ಣನವರು.

ಒಂದು ಮೂಲಭೂತ ಅಂಶವನ್ನಿಲ್ಲಿ ಗಮನಿಸಬೇಕು. ಬಸವಣ್ಣನವರು ಪ್ರೌಢಕವಿಗಳ ಪಂಕ್ತಿಗೇನೂ ಸೇರುವುದಿಲ್ಲ; ಆದರೆ ಅವರು ಒಂದು ಕಡೆ ಇತರ ವಚನಕಾರರಿಗಿಂತ, ಇನ್ನೊಂದು ಕಡೆ ಜನಪದ ಕವಿಗಳಿಗಿಂತ ಬೇರೆಯಾಗಿ ನಿಲ್ಲುತ್ತಾರೆ. ಅವರೆಲ್ಲರ ಗುಣಲಕ್ಷಣಗಳನ್ನು ಮೈಗೂಡಿಸಿಕೊಂಡೂ ಕೂಡ, ಅವರು ಸಾಂಪ್ರದಾಯಕವಾಗಿ ವಿದ್ಯಾಭ್ಯಾಸ ಮಾಡಿದವರು; ಸಂಸ್ಕೃತ ಕಲಿತು, ವೇದೋಪನಿಷತ್ತು ಪುರಾಣಾಗಮ ಕಾವ್ಯಾದಿಗಳನ್ನೆಲ್ಲ ಕರತಲಾಮಲಕ ಮಾಡಿಕೊಂಡವರು. ಪರಂಪರೆಯ ಈ ಅನುಸಂಧಾನದಿಂದ ಅವರಿಗೆ ತುಂಬ ಲಾಭವಾಗಿದೆ. ಅವರು 'ಅಕೆಡೆಮಿಕ್' ಕೂಡ ಹೌದು. ಆ ಸೀಮೆಯನ್ನು ಮೀರಿದವರೂ ಹೌದು. ಅವರ ವಚನಗಳಲ್ಲಿ 'ಅಕೆಡೆಮಿಕ್' ಅಂಶಗಳೂ ಇವೆ. ಅತೀತವಾದ ಅಂಶಗಳೂ ಇವೆ; ಎರಡನೆಯವೇ ಹೆಚ್ಚು ಎನ್ನುವುದು ಮುಖ್ಯ. ಉಪಮೆ, ರೂಪಕ, ಶ್ಲೇಷೆ, ಪ್ರಾಸಾನುಪ್ರಾಸ ಕವಿಸಮಯಾದಿಗಳ ಪ್ರಾಚೀನ ದೃಷ್ಟಿಕೋನ, ವೈಚಾರಿಕತೆ ಪ್ರತಿಮೆ ಭಾಷೆಯಲ್ಲಿ ಭಾವಾಭಿನಯ ಆಡುಮಾತಿನ ಲಯ ಇತ್ಯಾದಿಗಳ ಆಧುನಿಕ ದೃಷ್ಟಿಕೋನ–ಯಾವುದರಿಂದ ಬೇಕಾದರೂ ಬಸವಣ್ಣನವರ ವಚನಗಳನ್ನು ಪರಿಶೀಲಿಸಬಹುದು.

---

1. ಜಿ. ಎಸ್. ಶಿವರುದ್ರಪ್ಪ, 'ಅನುರಣನ' ಪು. ೨೬

ಯಾವುದೇ ನಿಜವಾದ, ಶ್ರೇಯಸ್ಕರವಾದ ಕ್ರಾಂತಿ ಒಂದು ಸಮನ್ವಯವಾಗಿರುತ್ತದೆ. ಬಸವಣ್ಣನವರು ಪ್ರಜ್ಞಾಪೂರ್ವಕವಾಗಿ ಮತ್ತು ಪ್ರತಿಜ್ಞಾಪೂರ್ವಕವಾಗಿ ಸಾಧಿಸಿದ ಸಾಮಾಜಿಕ, ಧಾರ್ಮಿಕ ಕ್ರಾಂತಿಯೆಂತೊ ಅಂತೆ, ಬಹುಮಟ್ಟಿಗೆ ಅಪ್ರಜ್ಞಾಪೂರ್ವಕವಾಗಿ ಸಾಧಿಸಿದ ಸಾಹಿತ್ಯಕ ಕ್ರಾಂತಿಯೂ ಒಂದು ಸಮನ್ವಯದ ಫಲವೇ ಆಗಿದೆ.

"ಬಸವಣ್ಣನವರ ವಚನಗಳಿಗೆ ಶಾಸ್ತ್ರಪುರಾಣ–ಆಗಮ ಪರಂಪರೆಯ ಹಿನ್ನೆಲೆಯಿದ್ದರೂ, ಅವರು ತಮಗಿಂತ ಹಿಂದೆ ಹರಹಿರುವ ಕನ್ನಡ ಕಾವ್ಯ ಪರಂಪರೆಯ ಅರಿವೇ ಇಲ್ಲವೆಂಬಂತೆ ವರ್ತಿಸಿರುವುದು ಆಶ್ಚರ್ಯದ ವಿಷಯವಾಗಿದೆ"[1] ಎಂಬುದೊಂದು ವಿಮರ್ಶೋಕ್ತಿ. ಅದು ಅಷ್ಟೇನೂ ಆಶ್ಚರ್ಯವನ್ನುಂಟುಮಾಡಬೇಕಾಗಿಲ್ಲ. ಬಸವಣ್ಣನವರ ಅಭಿವ್ಯಕ್ತಿ ಮಾಧ್ಯಮದಲ್ಲಿ – ಭಾವಗೀತೆಯಲ್ಲಿ – ಪ್ರೌಢಕಾವ್ಯಗಳ ಸಾಂಪ್ರದಾಯಿಕ ಲಕ್ಷಣಗಳಿಗೆ ಅವಕಾಶವೇ ಇಲ್ಲವೆಂಬುದನ್ನು ಲಕ್ಷಿಸಬೇಕು. "ಬಸವಣ್ಣನವರು ಭಕ್ತರಾಗಿದ್ದೂ ಅದೇಕೋ ಪ್ರಕೃತಿಯ ಚೆಲುವಿನ ಕಡೆ ಗಮನ ಕೊಡಲಾರದೇ ಹೋದರು"[2] ಎಂಬುದೂ ಸರಿಯಲ್ಲ. ಬಾಹ್ಯ ಪ್ರಕೃತಿ, ಪ್ರಾಣಿಪ್ರಕೃತಿ ಎಲ್ಲವನ್ನೂ ಅವರು ಅಂತರಂಗ ಪ್ರಕೃತಿಯ ಪ್ರಕಾಶನಕ್ಕೆ ಬಳಸಿಕೊಂಡಿದ್ದಾರೆ.

ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರನೆರೆದರೆ
ಮೇಲೆ ಪಲ್ಲವಿಸಿತ್ತು ನೋಡಾ !

ಎಂಬಲ್ಲಿ ಎಂಥ ವಿಸ್ಮಯದ ಅಭಿನಯವಿದೆ ! ಆದರೆ ಇದು ಸ್ವಯಂಪೂರ್ಣವಾಗಿ ನಿಲ್ಲದೆ ಲಿಂಗ–ಜಂಗಮ ಸಂಬಂಧಕ್ಕೆ ದ್ಯೋತಕವಾಗುತ್ತದೆ. ಹಾಗೆ ನೋಡಿದರೆ, ಪ್ರಕೃತಿಯ ನಿಲುವು ಬೇರೆ ವಚನಕಾರರಲ್ಲೂ ಇಲ್ಲ.

ಮೂಲಭೂತ ವಿಷಯವೇನೆಂದರೆ, ಕಾವ್ಯಕ್ಕಾಗಿ ಕಾವ್ಯ ಎಂಬ ಧೋರಣೆ ಬಸವಣ್ಣನವರದಲ್ಲ. ಅವರ ರಚನೆ ಅಪರಿಮಿತ ಸಂತೋಷ ಕೊಡುತ್ತದೆ. ಇಲ್ಲದಿದ್ದರೆ ಅದು ಕಾವ್ಯವೆ ಆಗುತ್ತಿರಲಿಲ್ಲ. ಆದರೆ ಕೇವಲ ಸಂತೋಷ ಅದರ ಗಮ್ಯವಲ್ಲ. ಅದು ಬರಿಯ 'ಚಾರುಕವಿತೆ' ಯಲ್ಲ, ಹಿಡಿತಕ್ಕೇ ಸಿಕ್ಕದ ನವ್ಯಕಾವ್ಯದಂಥ ಚಾರುಕವಿತೆಯೂ ಅಲ್ಲ; ಸರಳವಾಗಿ ಹೇಳುವುದಾದರೆ ಅದು ಅಪ್ಪಟ ಕವಿತೆ. ಅದಕ್ಕೆ ಅನ್ವಯಿಸುತ್ತದೆ ಅರ್ನೆಸ್ಟ್ ರೇಮಂಡ್‌ನ ಈ ಮಾತು : "(ಸಾಹಿತ್ಯ) ಸಿಡಿಮದ್ದಾಗುವ, ಹಳೆಯ ನಂಬಿಕೆ, ಜಡತ್ವಗಳಿಗೆ ದ್ರಾವಕವಾಗುವ, ವಿನಾಶಕ ಶಕ್ತಿಯಾಗುವ ಕಾಲಗಳಿರುತ್ತವೆ.

---

1. ಅಲ್ಲೇ 2- ಅದೇ ಪುಟ ೨೩

ಇರಬೇಕಾದ್ದೇ. ಆದ್ದರಿಂದ ನಿರೀಕ್ಷಿಸುವ ಮೊದಲನೆಯ ಸಂಗತಿ ಮನೋರಂಜನೆಯಲ್ಲ; ಅಂತೆಯೇ ಸಾಂತ್ವನ ಸಮಾಧಾನಗಳಿಲ್ಲ."[1]

ಸಾಹಿತ್ಯರೂಪದ ದೃಷ್ಟಿಯಿಂದ ಬಸವಣ್ಣನವರ ವಚನಗಳು ಭಾವಗೀತೆಯ ಪ್ರಕಾರಕ್ಕೆ ಸೇರುತ್ತವೆ. ಆದರೆ ಅಂಥ ಗಟ್ಟಿಯಾದ ಭಾವಗೀತೆಗಳನ್ನು ಅವರಿಗಿಂತ ಹಿಂದೆ ಕನ್ನಡದಲ್ಲಾಗಲಿ ಸಂಸ್ಕೃತದಲ್ಲಾಗಲಿ ಯಾರೂ ರಚಿಸಿರಲಿಲ್ಲ. ಅವು ಬರಿಯ ಭಾವಗೀತೆಗಳೂ ಅಲ್ಲ ಅಥವಾ ಕೇವಲ ಬುದ್ಧಿ ಗೀತೆಗಳೂ ಅಲ್ಲ; 'ಬುದ್ಧಿ ಭಾವಗಳ ವಿದ್ಯುದಾಲಿಂಗನ' ವನ್ನು ಅವು ವರಿಷ್ಠ ಪ್ರಮಾಣದಲ್ಲಿ ತೋರಿಕೊಡುತ್ತವೆ. ಹೀಗೆ ಹೇಳುವಾಗ, ವಿಚಾರಗಳು ಸ್ವಸ್ವರೂಪದಲ್ಲಿ ಕಾವ್ಯವಾಗಿ ಬಿಡುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು. "ದಯವೇ ಧರ್ಮದ ಮೂಲವಯ್ಯ", "ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ" ಮುಂತಾದ ಹೇಳಿಕೆಗಳು, ಎಷ್ಟೇ ಸೂತ್ರಪ್ರಾಯವಾಗಿದ್ದರೂ, ಅಕಾವ್ಯವಾಗಿಯೇ ನಿಲ್ಲುತ್ತವೆ; ಇಂಥವನ್ನು ಬಿಡಬಹುದು. ಇನ್ನು, ಎಷ್ಟೋ ವಚನಗಳು ಕಾಂತಾಸಂಮಿತಕ್ಕೆ ನಿದರ್ಶನವಾಗುತ್ತವೆ. ಇವುಗಳಿಗಿಂತಲೂ ಉತ್ಕೃಷ್ಟವಾದ ವಚನಗಳೆಂದರೆ, ವಿಚಾರಗಳನ್ನು ಕರಗಿಸಿ, ಅರಗಿಸಿ, ರಕ್ತವಾಗಿಸಿಕೊಂಡು, ಒಡಲಿನಲ್ಲಿ ಒಳಗೊಂಡಿರುವಂಥವು.

ಮೇಲುನೋಟಕ್ಕೆ ಸರಳ ಗೇಯ ಭಾವಾಲಾಪ ಎನಿಸುವ ಈ ವಚನವನ್ನೆ ತೆಗೆದುಕೊಳ್ಳೋಣ:

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ,
ಸುತ್ತಿ ಸುಳಿದು ನೋಡದಂತೆ ಅಂಧಕನ ಮಾಡಯ್ಯ ತಂದೆ,
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ—
ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ
ಇರಿಸು ಕೂಡಲಸಂಗಮದೇವ.

ಇದರಲ್ಲೊಂದು ಸೂಕ್ಷ್ಮ ತಾರ್ಕಿಕ ಕ್ರಮವನ್ನು ಗುರುತಿಸಬಹುದು. ವಿಷಯ ಪ್ರಲೋಭನದಲ್ಲಿ ಕಿವಿಯ ಪಾತ್ರ ಕಡೆಯದು; ಅದಕ್ಕಿಂತ ಮುಖ್ಯವಾದುದು ಕಣ್ಣಿನ ಪಾತ್ರ; ಕಿವಿ, ಕಣ್ಣುಗಳನ್ನೊಯ್ದು ವೈವಿಧ್ಯವನ್ನು ಪೂರೈಸತಕ್ಕ ಕಾಲುಗಳ ಪಾತ್ರ ಎಲ್ಲಕ್ಕಿಂತ ಹಿರಿದು. ಆದ್ದರಿಂದಲೇ ಬಸವಣ್ಣನವರು 'ಹೆಳವನ ಮಾಡಯ್ಯಾ ತಂದೆ' ಎಂದು ಮೊದಲಿಗೆ ಮೊರೆಯಿಟ್ಟಿರುವುದು. "(ಬಸವಣ್ಣನ) ವಚನಗಳಿಗೆ ಕಾವ್ಯತ್ವ

---

1. Through Literature to Life, p. 23. "Art is not a pleasure, a solace, or an amusement, Art is a great matter." ಎಂಬ ಟಾಲ್‌ಸ್ಟಾಯ್ ಅವರ ಮಾತನ್ನೂ ನೆನೆಯಬಹುದು.

ಪ್ರಾಪ್ತವಾಗುವುದು ಇದರಿಂದಲೇ, ಈ ಭಾವುಕತನದಿಂದಲೇ"[1] ಎಂಬ ವಿಮರ್ಶಕರೊಬ್ಬರ ನುಡಿ ಪೂರ್ಣ ಸತ್ಯವಲ್ಲ. ಅದನ್ನು 'ಭಾವುಕತೆ' ಎನ್ನುವುದಕ್ಕಿಂತ ಭಾವ ತೀವ್ರತೆ ಎನ್ನುವುದು ಯುಕ್ತ; ಮಹತ್ವದ ಸಂಗತಿಯೆಂದರೆ ಬಸವಣ್ಣನವರು ಭಾವ ಮಗ್ನರಾದಾಗಲೂ ಬೌದ್ಧಿಕ ಎಚ್ಚರವನ್ನು ಕಳೆದುಕೊಳ್ಳುವುದಿಲ್ಲ ಎಂಬುದು.

ಬಸವ ವಚನಗಳಲ್ಲಿ ವ್ಯಕ್ತಿನಿಷ್ಠತೆಯಷ್ಟೇ ಇದ್ದಿದ್ದರೆ ಅವು ಇಷ್ಟು ಗಣ್ಯವಾಗುತ್ತಿರಲಿಲ್ಲ. ಅವುಗಳಲ್ಲಿ ವಸ್ತುನಿಷ್ಠೆಯೂ ಸಮಪ್ರಮಾಣವಲ್ಲಿದೆ. ದಟ್ಟವಾದ ಸಾಮಾಜಿಕ ಪ್ರಜ್ಞೆ, ಸಮಕಾಲೀನ ಪ್ರಜ್ಞೆ ಮತ್ತು ಪರಿಸರ ಪ್ರಜ್ಞೆ, ಅವರ ವಚನಗಳನ್ನು ಇತರರ ಕಾವ್ಯಗಳಿಂದ ಬೇರ್ಪಡಿಸುತ್ತವೆ. ಅವುಗಳಲ್ಲಿ ಅನುಸ್ಯೂತವಾದ ಒಂದು ದರ್ಶನವಿದೆ, ತಾತ್ತ್ವಿಕ ನಿಲುವಿದೆ, ಯುಗಧರ್ಮದ ಆವಿಷ್ಕಾರವಿದೆ; ಅವರ ಬಹುಮುಖ ವ್ಯಕ್ತಿತ್ವದಿಂದುಂಟಾದ, ಭಾವಗೀತೆಗಳಲ್ಲಿ ಸುಲಭಸಾಧ್ಯವಲ್ಲದ ಸಂಕೀರ್ಣತೆಯಿದೆ. ಈ ಎಲ್ಲ ಅಂಶಗಳು ಅವರ ವಚನ ಸಮೂಹವನ್ನು ಭಾವಗೀತ ಪರಿಧಿಯಿಂದ ಪಾರು ಮಾಡಿ ಮಹಾಕಾವ್ಯದ ಹತ್ತಿರಕ್ಕೊಯ್ಯಲು ಹವಣಿಸುತ್ತವೆ. ಆದ್ದರಿಂದ, ಬಸವಣ್ಣನವರದೂ ಭಾವಗೀತೆ, ದಾಸರದೂ ಭಾವಗೀತೆ, ಸರ್ವಜ್ಞನದೂ ಭಾವಗೀತೆ ಎಂದು ಎಲ್ಲರಿಗೂ ಒಂದೇ ಮಣೆ ಹಾಕುವುದರಲ್ಲಿ ಅರ್ಥವಿಲ್ಲವೆನಿಸುತ್ತದೆ. ಬಸವಣ್ಣನವರ ವಚನಗಳು ಭಾವಗೀತವಾಗಿಯೂ, 'ಮಹಾ' ಎಂಬ ವಿಶೇಷಣಕ್ಕೆ ಯೋಗ್ಯವಾಗುತ್ತವೆ.

ಧರ್ಮ, ಕಾವ್ಯಧರ್ಮಗಳ ಸಮನ್ವಯದ ಆದರ್ಶವನ್ನು ಮೊದಲು ಪ್ರತಿಪಾದಿಸಿದವನು ಪಂಪ. ಅದರಲ್ಲಿ ಅವನು ಸಂಪೂರ್ಣ ಯಶಸ್ವಿಯಾಗಿದ್ದಾನೆಂದು ಹೇಳುವಂತಿಲ್ಲ. ಪಂಪಾದಿ ಕವಿಗಳಲ್ಲಿ ಧರ್ಮ, ಕಾವ್ಯಧರ್ಮಗಳಿಗಿಂತ ವಿದ್ವತ್ತೆ ಎದ್ದು ಕಾಣುತ್ತದೆ. ನಿಜವಾಗಿ ಎರಡನ್ನೂ ಒಂದು ಮಾಡಿದವರು ಬಸವಣ್ಣನವರು. ಅವರ ವಚನಗಳಲ್ಲಿ "religious essence" ಇದೆ; ಅದಕ್ಕೆ ಅಭಿನ್ನವಾಗಿ 'Poetic essence" ಇದೆ.[2]

ಈ ವಚನಗಳಲ್ಲಿ ಆತ್ಮ ಪರೀಕ್ಷೆ. ಧರ್ಮಪರೀಕ್ಷೆ. ಸಮಾಜ ಪರೀಕ್ಷೆಗಳ ಮುಕ್ಕಣ್ಣ ನೋಟವಿದೆ. ವಾಸ್ತವವಾಗಿ, ಇವು ಪರಸ್ಪರ ಪೂರಕ. ಇವುಗಳಲ್ಲಿ, ಆತ್ಮಪರೀಕ್ಷೆ ನಿರೀಕ್ಷೆಗಳಿಗೆ ಸಂಬಂಧಿಸಿದ ವಚನಗಳೇ ಸಾಹಿತ್ಯಕವಾಗಿ ಅತ್ಯುನ್ನತ ಸ್ತರದವು. ಆದರೆ ಇಲ್ಲಿಯೂ ಬಸವಣ್ಣನವರ ದೃಷ್ಟಿ ಸಮಾಜ ಸಂಮುಖವಾಗಿಯೇ ಇದೆಯೆಂಬುದನ್ನು ಮರೆಯಬಾರದು. ಅವರ ಮಾತು ತೀರ ವೈಯಕ್ತಿಕವಾಗಿ ಕಾಣುವಾಗಲೂ ವ್ಯಕ್ತಿ

---

1. ಎಂ. ಚಿದಾನಂದ ಮೂರ್ತಿ 'ವಚನ ಸಾಹಿತ್ಯ' ಪುಟ ೬೮
2. ಮೊದಲನೆಯ ಮಾತು ಟಾಲ್‌ಸ್ಟಾಯ್ ಅವರದು, ಎರಡನೆಯದು ಸಿ. ಡೇ. ಲೂಯಿಯದು

ಯಾಚೆಗೆ ಚಾಚಿರುತ್ತದೆ. ಸಮಾಜವನ್ನು ಸುಧಾರಿಸುವುದಕ್ಕೆ ಮುನ್ನ ತಮ್ಮನ್ನು ತಾವು ಸುಧಾರಿಸಿಕೊಳ್ಳಬೇಕು ಎಂಬುದು ಬಸವಣ್ಣನವರ ಉದ್ದೇಶವಾಗಿತ್ತು. ಆ ಆತ್ಮ ಸುಧಾರಣೆಯ ಹಾದಿಯಲ್ಲಿ ಅವರು ಅನುಭವಿಸಿದ ಕಷ್ಟನಷ್ಟ ಪಾಡು ಪರಿತಾಪಗಳನ್ನು ಅವರ ವಚನಗಳು ಅಸಾಧಾರಣ ರೀತಿಯಲ್ಲಿ ಹಿಡಿದಿಟ್ಟಿವೆ.

ಅಮೂರ್ತವಾದುದನ್ನು ಮೂರ್ತವಾಗಿಸುವುದರಲ್ಲಿ ಬಸವಣ್ಣನವರ ಕಲೆಗೆ ತುಂಬ ಆಸಕ್ತಿ; ಅದೇ ಅವರ ಅಗ್ಗಳಿಕೆ. ಏನನ್ನೇ ಆಗಲಿ ಅದು ಒಂದು ಘನವಾದ ಅನುಭೂತಿಯನ್ನಾಗಿ ಮಾಡಿಕೊಡಬಲ್ಲುದು. ಸಂಸಾರದ ಭಯಂಕರತೆಯನ್ನು "ಕಪ್ಪೆ ಸರ್ಪನ ನೆಳಲಲ್ಲಿ ಇಪ್ಪಂತೆ ಎನಗಾಯಿತ್ತಯ್ಯಾ" ಎಂಬುದಕ್ಕಿಂತ ಪರಿಣಾಮಕಾರಿಯಾಗಿ ಮೂರ್ತೀಕರಿಸಿ ಹೇಳುವುದು ಹೇಗೆ ಸಾಧ್ಯ? ಇಂಥ ಕಡೆ ಬಸವಣ್ಣನವರು ಕವಿ, ಚಿತ್ರಕಾರ ಇಬ್ಬರೂ ಆಗಿ ಕಾಣುತ್ತಾರೆ. ಸಾಹಿತ್ಯ ಇತರ ಕಲೆಗಳ ಗುಣಗಳನ್ನು ಮೈಗೂಡಿಸಿಕೊಂಡಷ್ಟೂ ದೊಡ್ಡದಾಗುತ್ತದೆ.

ಪ್ರಾಚೀನ ಕಾವ್ಯ ಪದ್ಧತಿಗೆ ಅಪರಿಚಿತವಾದ ಪ್ರಜ್ಞಾಪೂರ್ವಕ ಪ್ರತಿಮಾ ನಿರ್ಮಾಣ ಬಸವಣ್ಣನವರ ವೈಶಿಷ್ಟ್ಯಗಳಲ್ಲೊಂದು. ಪಂಪನ ವೈಶಂಪಾಯನ ಸರೋವರ ವರ್ಣನೆಯಲ್ಲಿ ಪ್ರತಿಮೆಯನ್ನು ನೋಡುತ್ತೇವೆ; ಆದರೆ ಅದು ಕವಿಯ ಅರಿವಿಲ್ಲದೆಯೆ ಉದ್ಭವಿಸಿದ್ದು; ಧ್ವನಿಯನ್ನು ಗಮನಿಸದಿದ್ದರೂ ವಾಚ್ಯಾರ್ಥ ಸ್ತರದಲ್ಲೆ ಸಂಗತವಾಗತಕ್ಕದ್ದು. ಆದರೆ ಬಸವಣ್ಣನವರ ಈ ಪ್ರತಿಮೆ ಹಾಗಲ್ಲ:

ಮನೆಯೊಳಗೆ ಮನೆಯೊಡೆಯನಿದ್ದಾನೊ ಇಲ್ಲವೊ—
ಹೊಸ್ತಿಲೊಳಗೆ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ!
ತನುವಿನಲಿ ಹುಸಿತುಂಬಿ, ಮನದಲ್ಲಿ ವಿಷಯ ತುಂಬಿ,
ಮನೆಯೊಳಗೆ ಮನೆಯೊಡೆಯನಿಲ್ಲ!

ಇದನ್ನು ವಾಚ್ಯಾರ್ಥದಲ್ಲಿ ತೆಗೆದುಕೊಂಡರೆ, ಗ್ರಾಹ್ಯವಾಗುವುದೆ ಇಲ್ಲ. ಏಕೆಂದರೆ, ಮನೆಯ ವರ್ಣನೆಗೆ ಇಲ್ಲೇನೂ ಕೆಲಸವಿಲ್ಲ. ಬಸವಣ್ಣನವರು ಉದ್ದೇಶಪೂರ್ವಕವಾಗಿಯೆ ಯೋಜಿಸಿದ ಪ್ರತಿಮೆ ಇದೆಂಬುದು ಸ್ಪಷ್ಟ.

ಇದರಲ್ಲಿ ಬಂದಿರುವ "ತನುವಿನೊಳಗೆ ಹುಸಿ ತುಂಬಿ, ಮನದಲ್ಲಿ ವಿಷಯ ತುಂಬಿ" ಎಂಬುದು ಪ್ರತಿಮೆಯ ಧ್ವನಿಯನ್ನು ವಾಚ್ಯಗೊಳಿಸಿದಂತೆ ತೋರುತ್ತದೆ. ಆದರೆ ಇಂಥ ವಾಚ್ಯತೆ ದೋಷವೇನೂ ಆಗಲಾರದು. ಏಕೆಂದರೆ ಕವಿ ಇಂತಹ ಕೀಲಿಕೈಗಳನ್ನು ಕೊಡದಿದ್ದರೆ ಅವನ ವಿವಕ್ಷೆ ಏನೆಂಬುದೇ ಅರ್ಥವಾಗದಿರಬಹುದು. ಬಸವಣ್ಣನವರು ಎಷ್ಟೋ ಕಡೆ ಹೀಗೆ ಮಾಡುತ್ತಾರೆ. ಅವರು ಮೂಲತಃ ಕವಿಯಲ್ಲ, ಸಾಮಾನ್ಯರನ್ನು ಅವರು ಉದ್ದೇಶಿಸಿದ್ದಾರೆ ಮುಂತಾದ ವಿವರಣೆಗಳು ಅನಗತ್ಯ ಎನಿಸುತ್ತದೆ. ಕಾವ್ಯದಲ್ಲಿ ವಾಚ್ಯತೆ ಬೇಡವೇ ಬೇಡ ಎಂದು ನಿಯಮ ಮಾಡುವಂತಿಲ್ಲ. ಕೆಲವು ಸಂದರ್ಭಗಳಲ್ಲಿ ಅದು ಬೇಕು; ಎಷ್ಟರಮಟ್ಟಿಗೆ ಎಂಬುದು ಔಚಿತ್ಯಕ್ಕೆ ಬಿಟ್ಟದ್ದು.

ಬಸವಣ್ಣನವರು ವೇದೋಪನಿಷತ್ತುಗಳಿಂದ ಕೆಲವೊಂದು ಅಭಿಪ್ರಾಯವನ್ನು ಸ್ವೀಕರಿಸಿರುವುದುಂಟು. ಆದರೆ ಅದನ್ನು ಅವರು ಹೇಗೆ ಸ್ವೋಪಜ್ಞತೆಯುಳ್ಳ ಕಾವ್ಯ ಮಾಡುತ್ತಾರೆ ಎಂಬುದಕ್ಕೆ ಈ ವಚನ ಭಾಗವೊಂದು ಉದಾಹರಣೆ:

ಎನ್ನ ಕಾಲೇ ಕಂಬ, ದೇಹವೇ ದೇಗುಲ,
ಶಿರವೇ ಹೊನ್ನ ಕಳಸವಯ್ಯ!

"ದೇಹೋ ದೇವಾಲಯ ಪ್ರೋಕ್ತಃ" ಎಂಬ ಭಾವ ಉಪನಿಷತ್ತಿನದು, ದಿಟ. ಆದರೆ ಅದರ ಭಂಗಿ ಬಸವಣ್ಣನವರದು. ಮಣಿಯುವ ತಲೆ, ದಣಿಯುದ ಕಾಲು, ಸೆಟೆದ ಎದೆಗಳ ಒಬ್ಬ ವ್ಯಕ್ತಿಯ ಧೀರೋನ್ನತ ಚಿತ್ರ ಇಲ್ಲಿ ಮೂಡಿ ನಿಂತಿದೆ. ಮುದುಡಿ ಬಿದ್ದುಕೊಂಡವನೂ 'ನನ್ನ ದೇಹವೆ ದೇವಾಲಯ' ಎನ್ನಬಹುದು; ಆದರೆ 'ಕಾಲೇ ಕಂಬ ಶಿರವೇ ಹೊನ್ನ ಕಳಸ' ಎನ್ನಲಾರ.

ಯಾವುದೇ ಕಾವ್ಯ ನಮ್ಮ ಮನಸ್ಸುಗಳಲ್ಲಿ ಎಷ್ಟರಮಟ್ಟಿಗೆ ಕೆಲವು ಹಳಿಗಳನ್ನು ನಿರ್ಮಿಸುತ್ತದೆ, ನಾಲೆಗಳನ್ನು ತೋಡುತ್ತದೆ ಎಂಬುದರ ಮೇಲೆ ಅದರ ಯಶಸ್ಸು ನಿಂತಿರುತ್ತದೆ. ಗಾದೆಗಳು ಈ ಕೆಲಸವನ್ನು ಚೆನ್ನಾಗಿ ಮಾಡುವುದರಿಂದಲೇ ಅವು ಅಷ್ಟೊಂದು ಜನಪ್ರಿಯವಾಗಿರತಕ್ಕದ್ದು. ಬಸವ, ಕುಮಾರವ್ಯಾಸರಂಥವರ ಉಕ್ತಿಗಳಿಗೂ ಈ ಶಕ್ತಿಯುಂಟು. ಅವು ಅವರ ಭಾವಾಲೋಚನೆಗಳ ಫಲವಾಗಿ ಹೊಮ್ಮಿ, ನಮ್ಮ ಭಾವಾಲೋಚನೆಗಳಿಗೆ ಸಿದ್ಧ ಪ್ರಣಾಳಿಕೆಗಳಾಗಿಬಿಡುತ್ತವೆ. ನಮ್ಮ ಅನಿಸಿಕೆಗಳನ್ನು, ಲೋಕದ ಬಗೆಗಿನ ನಮ್ಮ ಪ್ರತಿಕ್ರಿಯೆಗಳನ್ನು ಅವರ ಮಾತುಗಳಲ್ಲಿಯೆ ನಾವು ಅಭಿವ್ಯಕ್ತಿಸುತ್ತೇವೆ. ಈ ಮಾನದಂಡವನ್ನು ಅನ್ವಯಿಸಿ ನೋಡಿದರೂ ಬಸವಣ್ಣನವರ ವಚನಗಳ ಕಸುವು ವೇದ್ಯವಾಗುತ್ತದೆ. ಅವರ ಸೂಳ್ನುಡಿಗಳು ನಮ್ಮ ಬದುಕಿನ ಒಂದು ಭಾಗವೆ ಆಗಿಹೋಗಿವೆ.

"ಮರಕ್ಕೆ ಎಲೆ ಮೂಡುವಷ್ಟೆ ಸಹಜವಾಗಿ ಮೂಡಬೇಕು ಕವಿತೆ" ಎಂಬುದು ಕೀಟ್ಸ್ ಕವಿಯ ನುಡಿ. ಬಸವಣ್ಣನವರ ಬದುಕು ಒಂದು ಕಲ್ಪ ವೃಕ್ಷ; ಅದರ ಎಲೆಗಳು ಅವರ ವಚನಗಳು. ಇಡಿ ವಚನ ವಾಙ್ಮಯ ಒಂದು evergreen forest.

ಬಸವಣ್ಣನವರು ಸ್ವಪ್ನಲೋಲರಲ್ಲ; ಅವರದು ಸ್ವ-ರತಿಯಲ್ಲ. ಈ ನೆಲದ ಮೇಲೆಯೆ ಒಂದು ಸ್ವರ್ಗವನ್ನು ಕಟ್ಟುವುದಕ್ಕಾಗಿ ಅವರು ಹೋರಾಡಿದರು ಆ ಹೋರಾಟದ ವ್ಯಥೆ, ಕಥೆಗಳವೆ ಅವರ ವಚನಗಳಲ್ಲಿ. "The work of art is an act as well." ಎಂಬ ಸಾರ್ತ್ರೆಯ ಉಕ್ತಿ ಅವುಗಳಿಗೆ ಒಪ್ಪುತ್ತದೆ. ಬಸವೇಶ್ವರರ ಮಾತು ಬೇರೆಯಲ್ಲ, ಕೃತಿ ಬೇರೆಯಲ್ಲ.

"ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ" ಎಂದರು ಬಸವಣ್ಣ. ಸ್ಥಾವರಗಳೆಷ್ಟೋ ಅಳಿದು ಹೋಗಿವೆ, ಅಳಿಯುತ್ತಿವೆ; ಆದರೆ ಲಿಂಗ-ಜಂಗಮಗಳ ತೇಜವನ್ನು ತಾಳಿಕೊಂಡಿರುವ ಬಸವಣ್ಣನವರ ವಾಣಿಗೆ ಅಳಿವಿಲ್ಲ. ಅವರು ನಿರ್ಜೀವ ಸಂಗೀತವನ್ನು ಹಾಡಬಯಸಲಿಲ್ಲ; "ಎನ್ನ ಕಾಯವ ದಂಡಿಗೆಯ ಮಾಡಯ್ಯ" ಇತ್ಯಾದಿಯಾಗಿ ಬೇಡಿಕೊಂಡು, ತಾವೇ ಜೀವ ಸಂಗೀತವಾಗಬಯಸಿದರು. ಪರಿಣಾಮವಾಗಿ ಕನ್ನಡಕ್ಕೆ ಲಭಿಸಿದ್ದು ದೇವ ಸಂಗೀತ.

ಇಂಥ ದಲಿತ ಚಳುವಳಿಯೊಂದು ನಾಡಿನಾದ್ಯಂತ ವ್ಯಾಪಿಸಿದೆ; ಸಾಹಿತ್ಯ ರಂಗದಲ್ಲೂ ಪ್ರತಿಫಲಿಸಿದೆ. ಈ ತಿರುವಿನಲ್ಲಿ ಬಸವ ವಚನಗಳನ್ನು ಮೆಚ್ಚಿಕೊಂಡರೆ ಸಾಲದು; ಅವುಗಳಿಂದ ಕಲಿಯಬೇಕಾದ್ದೂ ಬಹಳಷ್ಟಿದೆ. ★

ಸ್ಫುರಣ - ಕಿರಣ

೧. ಸ್ವಾತ್ಮಾಕಾಂಕ್ಷೆ

ಇದು ಬೇಸಿಗೆ. ಸಹಿಸಲು ಕಷ್ಟಕರ ಸೆಖೆ ಬೇಸಿಗೆಯ ವೈಶಿಷ್ಟ್ಯವಾದರೂ ಅತ್ಯಂತ ಸುಮಧುರ ವಾಸನೆಯುಳ್ಳ ಗುಂಡುಮಲ್ಲಿಗೆಗಳು ಅರಳುವುದು ಈಗಲೇ. ಬಸವ ಮಂಟಪದಲ್ಲಿ ಹಾಕಿದ್ದ ಮಲ್ಲಿಗೆ ಗಿಡಗಳು ಮುಗುಳ್ನಗುತ್ತ ಮುಗುಳನ್ನು ಬಿರಿಸುತ್ತಿವೆ. ಸಂಜೆಯ ಮುಂಜಾನೆಯ ಪೂಜೆಗೆ ಘಮಘಮಿಸುವ ಹೂಗಳು ದೊರೆಯುತ್ತವೆ. ಅಂದು ಸಂಜೆಯ ಪೂಜೆಗೆ ಒಂದೂ ಮಲ್ಲಿಗೆ ಹೂವಿರಲಿಲ್ಲ. ಬೇರೆ ವಾಸನೆರಹಿತ ಪುಷ್ಪಗಳನ್ನು ಪೂಜೆಯ ಬುಟ್ಟಿಯಲ್ಲಿ ಸೇವಕರು ಇರಿಸಿದ್ದರು. 'ಇದೇಕೆ ಗುಂಡುಮಲ್ಲಿಗೆ ಒಂದೂ ಇಲ್ಲ? ಏನಾದವು'? ಎಂದೆ 'ಎಲ್ಲವನ್ನು ಪೋಣಿಸಿ ಮುಡಿಗೆ ಕಟ್ಟಲು ಇಟ್ಟಿದ್ದೇವೆ' ಎಂದರು. ಕಟ್ಟಿದ್ದ ಮಾಲೆ ತುಂಬಾ ಚೆನ್ನಾಗಿತ್ತು. ಅದನ್ನು ತಂದು ಪೂಜೆಗೆ ಬಳಸಿದೆ. ಆಗ ಒಂದು ವಿಚಾರ ಸ್ಫುರಿಸಿತು.

"ಇಷ್ಟೊಂದು ಹೂವುಗಳಿದ್ದವು. ಪೂಜೆಗಿಲ್ಲದ್ದು ಬಳಕೆಗೇಕೆ? ಪೂಜೆಗೆ ಇಡುವುದು ಮಹತ್ವದ್ದು. ಇನ್ನೂ ಒಂದು ಕೆಲಸ ಮಾಡಬಹುದಿತ್ತು. ಪೂಜೆಗಷ್ಟು ಇಟ್ಟು ಬಳಕೆಗಷ್ಟು ಇಡಬಹುದಿತ್ತು. ಪೂಜೆಗೆ ಏನೇನೂ ಇಡದೆ ಕೇವಲ ಬಳಕೆಗೆ ಮಾತ್ರ ಇಡುವುದು ಸ್ವಾರ್ಥವಲ್ಲವೆ? ಅದೇ ರೀತಿ ಕೆಲವು ಜನರು ತಮ್ಮ ಸುಖಭೋಗಗಳನ್ನು ಕಡೆಗಣಿಸಿ ಸಂಪೂರ್ಣವಾಗಿ ತಮ್ಮ ಬಾಳಿನ ಸುಮವನ್ನು ದೇವರು, ರಾಷ್ಟ್ರ, ಧರ್ಮ, ಮಾನವೀಯತೆ, ಸೇವೆಗಳಿಗೆ ಮುಡಿಪಿಡುವರು. ಇನ್ನು ಕೆಲವರು ಅದಕ್ಕಷ್ಟು-ಇದಕ್ಕಷ್ಟು ಬಳಸುವರು. ತಮ್ಮ ವೈಯಕ್ತಿಕ ಜೀವನದ ಸುಖಭೋಗಗಳನ್ನೂ ತ್ಯಜಿಸಿ ದೇವರು, ರಾಷ್ಟ್ರ, ಧರ್ಮ, ಸಮಾಜಗಳ ಸೇವೆ ಮಾಡುವರು. ಇನ್ನು ಕೆಲವರು ಕೇವಲ ತಮಗಾಗಿ ಎಲ್ಲ ಸುಖಗಳಿರಲಿ ಎಂದು ಉದಾತ್ತ ಗುರಿಗಾಗಿ ಬಾಳದೆ, ತಮಗಾಗಿ ಬಾಳುವರು. ಇವರು ಸಂಪೂರ್ಣ self centred ಅಥವಾ ಸ್ವಾತ್ಮಾಕಾಂಕ್ಷಿಗಳು.

೨. ದೈವಾನುಗ್ರಹ-ಪ್ರಯತ್ನ

ತುಂಬಾ ದೂರ ದೂರ ನಡೆಯುವ ಪ್ರಸಂಗಗಳಲ್ಲಿ ವಿಮಾನ ನಿಲ್ದಾಣಗಳಲ್ಲಿ ರಬ್ಬರ್ ಹಾಸುಳ್ಳ, ಚಲಿಸುವ ಸಮತಟ್ಟಾದ ಯಂತ್ರಗಳಿರುತ್ತವೆ. ಅವು ನಿಧಾನಕ್ಕೆ ತಾವಾಗಿಯೇ ಚಲಿಸುತ್ತವೆ. ಚಲಿಸುವ ಪಟ್ಟಿಯ ಹಿಡಿಯನ್ನು ಹಿಡಿದು ನಿಂತ ತಾಯಿತು, ಅದು ಚಲಿಸುತ್ತ ದೂರವನ್ನು ಕ್ರಮಿಸಿ ಗುರಿಯನ್ನು ಮುಟ್ಟಿಸುವುದು. ಕೆಲವರು ಈ ಪಟ್ಟಿಯ ನಿಧಾನ ಚಲನೆಯಿಂದ ತೃಪ್ತರಾಗದೆ ತಾವೂ ಅದರ ಮೇಲೆ ನಡೆಯುವರು. ಇಂಥವರು ಅದರ ಚಲನೆ, ತಮ್ಮ ನಡಿಗೆ-ಎರಡರ ಪ್ರತಿಫಲವಾಗಿ ಬೇಗನೆ ಮುಂದೆ ಹೋಗಿಬಿಡುವರು.

ಇದನ್ನು ನೋಡಿದಾಗ ನನಗೊಂದು ವಿಚಾರ ಸ್ಫುರಿಸಿತು. ದೈವೀಕರುಣೆ ಮತ್ತು ಪುರುಷಪ್ರಯತ್ನ, ಅದೃಷ್ಟ ಮತ್ತು ಪ್ರಯತ್ನ-ಈ ತ್ರತ್ವಕ್ಕೆ ಇಲ್ಲಿ ಹೋಲಿಸ ಬಹುದು. Fate is nothing but the collective force of ones own actions done in his past lives. ಹಿಂದಿನ ಜನ್ಮಗಳ ಕರ್ಮಗಳ ಮೊತ್ತದ ಒತ್ತಡವೇ ಅದೃಷ್ಟವಾದರೆ, ಅದರ ಜೊತೆಗೆ ದೈವಾನುಗ್ರಹದಿಂದ ಹೊಡಾಡಿ ಮುನ್ನಡೆ ಯುವುದೇ ಪ್ರಯತ್ನ. ದೈವಾನುಗ್ರಹ ತನ್ನದೇ ಆದ ಗತಿಯಲ್ಲಿ ಕರೆದೊಯ್ಯುತ್ತದೆ. ಆದರೆ ನಿಷ್ಠೆಯ ಪ್ರಯತ್ನವು ಸಾಧನೆಯನ್ನು ತೀವ್ರಗೊಳಿಸುತ್ತದೆ. ಪ್ರಯತ್ನವು ತೀವ್ರವೂ ಉತ್ಕಟವೂ ಆದರೆ ಅದೃಷ್ಟದ ಬೆಂಬಲವಿದ್ದವನು ಇನ್ನೂ ಬೇಗ ಮುಂದೆ ಸಾಗಬಲ್ಲನು.

೩. ಸಾಮ್ಯವಾದ-ಸಮತಾವಾದ

ಬಸವ ಮಂಟಪದ ಹಿಂದೆ ಎರಡು ನಲ್ಲಿಗಳಿವೆ. ಒಂದು ಮೇಲಿನ ಟ್ಯಾಂಕಿನಲ್ಲಿ ಸಂಗ್ರಹವಾದ ನೀರನ್ನು ಕೆಳಗೆ ಸುರಿಸುವುದು ; ಮತ್ತೊಂದು ಹೊಸ ನೀರನ್ನು ಹೊತ್ತು ತರುವುದು. ಈ ನಲ್ಲಿಯನ್ನು ನಿಲ್ಲಿಸಿದ್ದರೆ ಮಾತ್ರ ನೀರು ಶಕ್ತಿಯುತವಾಗಿ ಮೇಲೇರಿ ಟ್ಯಾಂಕಿನೊಳಗೆ ಪ್ರವೇಶಿಸಿ ಸಂಗ್ರಹಗೊಳ್ಳುವುದು. ಆದರಿಂದ ದಿನವಿಡೀ ಉಪಯೋಗಿಸಿಕೊಳ್ಳಲು ಸಾಧ್ಯವಾಗುವುದು. ನೀರು ಚೆನ್ನಾಗಿ ಬರುವ ಕಾಲದಲ್ಲಿ ಯಾವಾಗಲೋ ಅದು ಟ್ಯಾಂಕಿನಲ್ಲಿ ಸಂಗ್ರಹವಾಗುತ್ತಿತ್ತು ; ಯಾವ ಕಷ್ಟವೂ ತಿಳಿಯುತ್ತಿರಲಿಲ್ಲ. ಈ ವರ್ಷ ನೀರಿನ ತೀವ್ರ ಅಭಾವ. ಹಿಂದಿನ ವರ್ಷ ಮಳೆಯೂ ಕಡಿಮೆ. ಬೆಂಗಳೂರು ನಗರ ಕಬಂಧ ಬಾಹುಗಳನ್ನು ವಿಸ್ತರಿಸಿಕೊಂಡು ಬೆಳೆಯು ತ್ತಿದೆ. ನಗರವಾಸಿಗಳನ್ನು ತಣಿಸಲಿಕ್ಕೆ ಸಾಧ್ಯವಾಗುತ್ತಿಲ್ಲ. ಜಲಮಂಡಳಿ ರಾತ್ರಿಯ ವೇಳೆ ನೀರು ಬಿಡುತ್ತಿರುವಾಗ ಟ್ಯಾಂಕ್ ತುಂಬಿಕೊಂಡಿರುತ್ತಿತ್ತು ! ಇತ್ತೀಚೆಗೆ ಬೆಳಗಿನ

ಜಾವ ನೀರುಬಿಡಲಾರಂಭಿಸುತ್ತಿದ್ದಂತೆಯೇ, ಆ ವೇಳೆಗೆ ಆಶ್ರಮವಾಸಿಗಳೂ ಎದ್ದು ಸ್ನಾನ ಪೂಜಾದಿಗಳಲ್ಲಿ ತೊಡಗುತ್ತಿದ್ದರಾದ ಕಾರಣ ಟ್ಯಾಂಕಿನಲ್ಲಿ ನೀರು ಸಂಗ್ರಹ ವಾಗದೆ ಇಡೀ ದಿನ ಕಷ್ಟಪಡುವಂತಾಗ ತೊಡಗಿತು.

ಒಂದು ದಿನ ಹೇಳಿದೆ: 'ಹೊಸದಾಗಿ ಬರುವ ನೀರಿನ ನಲ್ಲಿ ತಿರುವಬೇಡಿ. ಟ್ಯಾಂಕಿಗೆ ನೀರೇರದು. ಇನ್ನೊಂದನ್ನು ಬಿಟ್ಟುಕೊಳ್ಳಿ. ನೀರು ಸರಿಯಾಗಿ ಸಂಗ್ರಹ ವಾದರೆ ಇಡೀ ದಿನ ತೊಂದರೆಯಾಗದು'. ಎಷ್ಟು ಹೇಳಿದರೂ ತಿಳಿದೋ ತಿಳಿಯದೆಯೋ ಅದೇ ನಲ್ಲಿಯನ್ನೇ ತಿರುವುತ್ತಿದ್ದರು. ಒಂದು ದಿನ ನಲ್ಲಿಯನ್ನು ಕಾಯಬೇಕಾಯಿತು. ಆಗ ಒಂದು ಉಪಾಯ ಹೊಳೆದು ಆ ನಲ್ಲಿಯನ್ನೇ ತೆಗೆಸಿ ಅಲ್ಲಿಗೊಂದು ನಟ್ ಹಾಕಿ ಸಂಪೂರ್ಣ ನಿಲ್ಲಿಸಲಾಯಿತು. ಬಿಡಲಿಕ್ಕೆ ಬರದಂತಾದಾಗ ಪಕ್ಕದ ನಲ್ಲಿಯನ್ನು ಉಪಯೋಗಿಸತೊಡಗಿದರು ; ಟ್ಯಾಂಕಿಗೂ ನೀರು ಏರ ತೊಡಗಿತು. ಇದನ್ನು ಕಂಡು ಒಂದು ವಿಚಾರ ಸ್ಫುರಿಸಿತು. ಸಮತಾವಾದ ಸಾಮ್ಯವಾದಕ್ಕೂ ಇಷ್ಟೇ ವ್ಯತ್ಯಾಸ. ಸಮಾಜ ಹಿತಮಿತವಾಗಿ ಬಳಸಿಕೊಂಡು ಉಂಡರೆ ಎಲ್ಲರಿಗೂ ಎಲ್ಲವೂ ಲಭ್ಯವಾಗು ತ್ತದೆ. ಕೆಲವೇ ಕೆಲವು ನಲ್ಲಿಗಳಲ್ಲಿ ನೀರು ಸುರಿಯತೊಡಗಿದರೆ ಟ್ಯಾಂಕಿಗೆ ನೀರೇರ ದಂತೆ, ಕೆಲವರೇ ಸ್ವಾರ್ಥಿಗಳಿಂದಾಗಿ ಸಮಾಜ-ಸರ್ಕಾರ ಬರಿದಾಗುತ್ತವೆ. ಆಗ ನಾವು ಎಷ್ಟೇ ನೀತಿಬೋಧನೆ, ಧರ್ಮಪ್ರಚಾರಗಳ ಮುಖಾಂತರ ಸರಳತೆ, ಆದರ್ಶ ಗಳನ್ನು, ಹಂಚಿಕೊಂಡುಣ್ಣುವ ಮನೋಭಾವವನ್ನು ಒತ್ತಿ ಹೇಳಿದರೂ ಜನರು ತಿಳಿದೋ ತಿಳಿಯದೆಯೋ ವೈಭೋಗ, ಆಡಂಬರಗಳಿಗೇ ಬಲಿಬೀಳುವರು. ಸಾಮ್ಯ ವಾದೀ ರಾಷ್ಟ್ರಗಳಾದ ರಷ್ಯ-ಚೈನಾಗಳಲ್ಲಿ ಬೋಧೆ ಮಾಡ ಹೋಗದೆ ಅವಕಾಶಗಳನ್ನೇ ತಪ್ಪಿಸಿ ಬಿಡುವರು. ನೀರು ಬಿಡಲಿಕ್ಕೆ ಬರದಂತೆ ನಟ್ ಹಾಕಿಬಿಡುವಂತೆ ಆಡಂಬರ, ಸ್ವಾರ್ಥ, ಶೋಷಣೆಗಿರುವ ಅವಕಾಶವನ್ನೇ ತಪ್ಪಿಸಿಬಿಟ್ಟರೆ ಜನರು ತಮ್ಮಿಂದ ತಾವೇ ಸುಧಾರಿಸುವರು. ಶ್ರೀಮಂತ ಉಡುಪುಗಳಿಗೆ ವ್ಯಯಿಸಬೇಡಿ ಎಂದರೆ ದುರ್ಬಲ ಮನಸ್ಸಿನ ಮಾನವ ಕೇಳಿಯಾನೆ ? ಅದಕ್ಕೆ ಅಂತಹ ಉಡುಪುಗಳ ಉತ್ಪಾದನೆಯನ್ನೇ ಆ ದೇಶ ಮಾಡಹೋಗದು. ಹೀಗೆ ಬಲವಂತದಿಂದ ಮನುಷ್ಯರನ್ನು ನೀತಿವಂತರ ನ್ನಾಗಿ ಮಾಡುವುದೇ ಸಾಮ್ಯವಾದ.

೪. ಎರಡು ಬಳ್ಳಿಗಳು

ಬಸವ ಗಂಗಾವಾಹಿನಿಯ ದಂಡೆಯ ಮೇಲೆ ಒಂದು ತಂಪಾದ ನೆರಳನ್ನು ಕೊಡುವ ವೃಕ್ಷವಿತ್ತು. ಆದರ ಸನಿಹದಲ್ಲಿ ಕಟ್ಟೆಯೊಂದನ್ನು ಬಂದ ಸಂದರ್ಶಕರು ಕೂಡಲಿಕ್ಕೆ ವ್ಯವಸ್ಥೆ ಮಾಡಿದ್ದಾರೆ. ಇದನ್ನು ತೋರಿಸಲೋಸುಗ ನನ್ನನ್ನು ಕರೆದೊಯ್ದರು. ನರಸಿಂಹೇಗೌಡರು ತಮ್ಮ ನೇತೃತ್ವದಲ್ಲಿ ಸಾಗಿದ್ದ ಈ ಕೆಲಸವನ್ನು

ಅಭಿಮಾನದಿಂದ ತೋರಿಸಿದರು. ಹತ್ತಿರದಲ್ಲೇ ಒಂದು ಹೊಂಗೆಯ ಮರವಿತ್ತು. ಅದರ ಆಶ್ರಯದಲ್ಲಿ ಎರಡು ಬಳ್ಳಿಗಳು ಬೆಳೆದಿದ್ದವು. ಒಂದು ಬಳ್ಳಿ ಹಗುರವಾಗಿ ಅದನ್ನು ಆಶ್ರಯಿಸಿ ಬೆಳೆದು, ಉತ್ತಮವಾದ ಹೂವುಗಳನ್ನರಳಿಸಿತ್ತು. ಅದರಿಂದ ಮರದ ಶೋಭೆ ಹೆಚ್ಚಿತ್ತು. ಇನ್ನೊಂದು ತಾನು ಆಶ್ರಯಿಸಿದ ಮರವನ್ನು ಹಗ್ಗದಂತೆ ಸುತ್ತಿ ಕೊರೆಯತೊಡಗಿತ್ತು. ಆ ಕೊರೆತ ಗಿಡವನ್ನು ವಿಪರೀತವಾಗಿ ಕೊರೆದಿತ್ತು. ಆಗ ನಾನು ಹೇಳಿದೆ, 'ಬಲವಾಗಿ ಬಿಗಿದು, ಆಶ್ರಯಿಸಿದ ಮರದ ಹಿತಕ್ಕೆ ಧಕ್ಕೆ ಯುಂಟು ಮಾಡುವ ಇಂಥ ಪರೋಪಜೀವಿ ಬಳ್ಳಿಗಳನ್ನು ಬುಡ ಸಹಿತ ಕತ್ತರಿಸಿರಿ, ಇಲ್ಲವಾದರೆ ಮಾತೃವೃಕ್ಷಕ್ಕೆ ಧಕ್ಕೆ ಬರುತ್ತದೆ. ಆದರೆ ಮರದ ಅಂದವನ್ನು ಹೆಚ್ಚಿಸುವ ಆ ಬಳ್ಳಿ ಚೆನ್ನಾಗಿರುವಂತೆ ನೋಡಿಕೊಳ್ಳಿರಿ' ಇದನ್ನು ಹೇಳಿದ ನಂತರ ನನಗೇ ಒಂದು ವಿಚಾರ ಸ್ಫುರಿಸಿತು. ನಮ್ಮೊಡನೆ ಗಂಗೋತ್ರಿ ನೋಡಲಿಕ್ಕೆ ಓರ್ವರು ವಕೀಲರು ಬಂದಿದ್ದರು. ಅವರಿಗೆ ಹೇಳಿದೆ, 'ಹೀಗೆಯೇ ವಕೀಲರೇ, ಸಂಸ್ಥೆಯ ಆಶ್ರಯದಲ್ಲಿ ಅನೇಕರು ಬೆಳೆಯತೊಡಗುತ್ತಾರೆ. ಮಾತೆ ಗಂಗಾದೇವಿಯಂತವರು ಅದರ ಆಶ್ರಯ ದಲ್ಲಿ ಸುಳಿದೆಗೆದು ಬೆಳೆದು, ತಮ್ಮ ಸಾಧನೆಯ ಹೂವುಗಳನ್ನೂ ಅರಳಿಸಿ, ಸಂಸ್ಥೆಗೂ ಕೀರ್ತಿ ತಂದು ತಾವೂ ಕೀರ್ತಿಶಾಲಿಗಳಾಗುತ್ತಾರೆ. ಅಂಥ ದೈವೀ ಚೇತನಗಳನ್ನು ನಾವೂ ಅತ್ಯಂತ ವಾತ್ಸಲ್ಯದಿಂದ ಪೋಷಿಸಬೇಕಾಗುತ್ತದೆ. ಇನ್ನು ಕೆಲವರು ಮಾತೃ ಸಂಸ್ಥೆಗೇ ಮೋಸ ಮಾಡುವ ಕುತಂತ್ರಿಗಳಾಗುತ್ತಾರೆ, ಸ್ವಾರ್ಥಿಗಳಾಗುತ್ತಾರೆ. ಆಗ ನಾವು, ನಿರ್ದಾಕ್ಷಿಣ್ಯವಾಗಿ ಸಂಸ್ಥೆಯಿಂದ ಅವರನ್ನು ಹೊರಹಾಕಬೇಕಾಗುತ್ತದೆ.

೫. ಒಂದೇ ಬಳ್ಳಿಯ ವಿವಿಧ ಫಲಗಳು

ಬೇಸಿಗೆಯ ಕಾಲವಾದರೂ ಭಾವಿ ನೀರಿನ ಆಶ್ರಯದಲ್ಲಿ ಹೀರೇಕಾಯಿ, ಸೌತೆ ಕಾಯಿ ಬಳ್ಳಿಗಳನ್ನು ಆಶ್ರಮದ ತೋಟಗಾರರು ಬೆಳೆದಿದ್ದರು. ಸೌತೇಕಾಯಿ-ಹೆಸರು ಬೇಳೆ ಕೋಸುಂಬರಿಯನ್ನು ಮಾಡಿ, ನೀಡಿದ್ದರು. ಆ ಕೋಸುಂಬರಿಯಲ್ಲಿ ಒಂದು ಕಹಿ ಸೌತೇಕಾಯಿ ಸೇರಿ ಎಲ್ಲವೂ ತಿನ್ನಲಿಕ್ಕೆ ಬರದಂತಾಗಿತ್ತು ಆಗ ನನ್ನ ತಲೆ ಯಲ್ಲಿ ಒಂದು ವಿಚಾರ ಸ್ಫುರಿಸಿತು. ಭೂಮಿ ಒಂದೇ, ಬಳ್ಳಿ ಒಂದೇ! ಏಕೆ ಒಂದು ಸೌತೆಕಾಯಿ ಕಹಿ, ಇನ್ನೊಂದು ಸಿಹಿ? ಗಿಡದ ದೋಷವಿದ್ದರೆ ಎಲ್ಲ ಕಾಯಿಗಳೂ ಕಹಿ ಇರಬೇಕಾಗಿತ್ತು. ಇದು ಆ ಕಹಿ ಕಾಯಿಯ ದೋಷವೇ ವಿನಾ ಗಿಡದ್ದಲ್ಲ. ಹಾಗೆಯೇ ಒಂದೇ ಗುರುವಿನ ಜ್ಞಾನ-ಅನುಗ್ರಹ ಪಡೆದು ಅನೇಕ ಶಿಷ್ಯರು ಹೊರಡುತ್ತಾರೆ. ಕೆಲವರು ಸಿಹಿ ಸೌತೆಯಾದರೆ, ಕೆಲವರು ಕಹಿ ಸೌತೆಯಾಗುತ್ತಾರೆ. ಇದು ಅವರವರ ಕರ್ಮಫಲವಲ್ಲದೆ ಬೇರಲ್ಲ.

★★

ಲೇಖಕಿ : ಮಾತಾಜಿ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ವಿಶ್ವಸ್ಥ ಸಂಸ್ಥೆಯಾದ ವಿಶ್ವಕಲ್ಯಾಣ ಮಿರ್ಷ ಆಶ್ರಯದಲ್ಲಿ, ಇಲ್ಲಿಂದಲೇ ಪಡೆದು ಹೋದ ಲೌಡ್ ಸ್ಪೀಕರ್ ಸೆಟ್, ಪುಸ್ತಕಗಳು, ವಿದ್ಯುತ್ ದೀಪ ಗಳು ಇತರ ಪ್ರಚಾರ ಸಾಧನ ಸಲಕರಣೆಗಳನ್ನು ಉಪಯೋಗಿಸಿ ಹಾವೇರಿ, ಬ್ಯಾಡಗಿ, ರಾಣೆಬೆನ್ನೂರುಗಳಲ್ಲಿ ನವಂಬರ್ 1980 ರಿಂದ ಪ್ರವಚನ ಮಾಡುತ್ತಿದ್ದ ವಾಗ್ದೇವಿ (ಅಲಿಯಾಸ್ ಭಾನುಮತಿ D/o ಬಿ. ಕೆ. ವಿಶ್ವನಾಥರಾವ್)ಯು ಅನೇಕ ದೃಷ್ಟಿ ಯಿಂದ ಮಾತೃ ಸಂಸ್ಥೆಗೆ ಮೋಸ ಮಾಡಿದ ಕಾರಣ ಸಂಸ್ಥೆಯಿಂದ ಆಕೆಯನ್ನು ಹೊರ ಹಾಕಲಾಗಿದೆ. ರಾಣೇಬೆನ್ನೂರು ಪ್ರವಚನ ವಾಸ್ತವ್ಯದಲ್ಲಿ ಸಂಗ್ರಹಿಸಿದ ಕಾಣಿಕೆ ಯನ್ನೂ, ಸುಮಾರು 20,000/ಇಪ್ಪತ್ತು ಸಹಸ್ರ ರೂಪಾಯಿಗಳಷ್ಟು ಮೌಲ್ಯದ ಪುಸ್ತಕ ಮಾರಾಟದ ಹಣವನ್ನು, ಕಲ್ಯಾಣ ಕಿರಣದ ಮಾಸಪತ್ರಿಕೆಗೆ ಸಂಗ್ರಹಿಸಿದ ವಾರ್ಷಿಕ ಚಂದಾ, ಮತ್ತು ಆಜೀವ ಸದಸ್ಯತ್ವದ ಹಣವನ್ನು ಮಾತೃಸಂಸ್ಥೆಗೆ ಕೊಡದ ಕಾರಣ ವಾಗ್ದೇವಿಯೊಡನೆ ಸಂಸ್ಥೆಯ ಸಂಬಂಧ ಕಡಿದು ಹಾಕಲಾಗಿದೆ.

ಸಂಸ್ಥೆಗೆ ಸಂಬಂಧಿಸಿದ ಸಾಮಾನುಗಳನ್ನು ಮತ್ತು ಕಾರು MYC 2922 ಅನ್ನು ಕೊಡಲು ನಿರಾಕರಿಸಿದ ಕಾರಣ, ಕಾಯಿದೆಯ ಮುಖಾಂತರ ವಶಪಡಿಸಿಕೊಳ್ಳ ಲಾಯಿತು ಎಂದು ದುಃಖದಿಂದ ತಿಳಿಸಬೇಕಾಗಿದೆ. ಈ ಸಂದರ್ಭದಲ್ಲಿ ವಾಗ್ದೇವಿಗೆ ನೆರವಾದ ಕಾರು ಚಾಲಕ ಸದಾನಂದ ಲಕ್ಷ್ಮಣ ವಾಗಲೆಯನ್ನೂ ಈ ಸಂಸ್ಥೆಯಿಂದ ತೆಗೆದುಹಾಕಲಾಗಿದೆ. ಧಾರವಾಡ ಆಶ್ರಮಕ್ಕೆ 19-4-1981 ರಂದು ಹೋಗಿ ಧಾಳಿ ಮಾಡಿ, ತೊಂದರೆ ನೀಡಿದ ಕಾರಣ, ಪೋಲಿಸ್ ಕೇಸ್ ಸಹ ಅವನ ವಿರುದ್ಧ ದಾಖಲೆಯಾಗಿದೆ.

ಆದ್ದರಿಂದ ಇನ್ನು ಮುಂದೆ ವಿಶ್ವಕಲ್ಯಾಣ ಮಿರ್ಷಗೆ ನೆರವು ನೀಡುವವರಾಗಲೀ, ಕಲ್ಯಾಣ ಕಿರಣಕ್ಕೆ ಚಂದಾ ಕೊಡುವವರಾಗಲಿ ವಾಗ್ದೇವಿಯೊಡನೆ ವ್ಯವಹಾರ ಮಾಡಿ ದರೆ ಆಗುವ ನಷ್ಟಕ್ಕೆ ಸಂಸ್ಥೆ ಜವಾಬ್ದಾರಿ ಹೊರದು ಎಂದು ಸ್ಪಷ್ಟೀಕರಿಸುತ್ತೇವೆ.

ಕಲ್ಯಾಣ ಕಿರಣ ಪತ್ರಿಕೆಗಾಗಿ ರಸೀತಿ ಪಡೆದು ವಾಗ್ದೇವಿಗೆ ಹಣ ಕೊಟ್ಟವರ ವಿಳಾಸವಾಗಲೀ ಹಣವಾಗಲೀ ಮೂಲಸಂಸ್ಥೆಗೆ ಜಮಾ ಆಗದ ಕಾರಣ ಆ ಚಂದಾದಾ ರರು(ಆಜೀವ ಸದಸ್ಯರು)ಗಳಿಗೆ ಪತ್ರಿಕೆ ಕಳಿಸಲು ಸಾಧ್ಯವಾಗುತ್ತಿಲ್ಲವೆಂದು ಹೇಳಲು ವಿಷಾದಿಸುತ್ತೇವೆ. ಬಹುಶಃ ರಾಣೇಬೆನ್ನೂರು ಪ್ರವಚನದಿಂದ ಅವರ ಚಲನವಲನೆ ಗಳಲ್ಲಿ ಬದಲಾವಣೆ ತೋರಿದ್ದರಿಂದ, ಮೋಸವನ್ನು ನಾವು ಊಹಿಸಲು ಸಾಧ್ಯ ವಾಯಿತು. ಅಲ್ಲಿಂದ ಮುಂದೆ ಆದ ಚಂದಾ, ಕಾಣಿಕೆ ವಸೂಲಿ ನಮಗೆ ಮುಟ್ಟಿರಲಿಕ್ಕಿಲ್ಲ

ಎಂದು ಭಾವಿಸುತ್ತೇವೆ. ಒಂದು ವೇಳೆ ಬ್ಯಾಡಗಿಯ ಪ್ರವಚನ ಕಾಲದಲ್ಲಿ ಆದ ಚಂದಾ ದಾರರಿಗೂ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಅವರು ಪತ್ರ ಮುಖೇನ ತಿಳಿಸ ಬೇಕು.

ಪತ್ರ ಬರೆಯುವಾಗ ರಸೀತಿಯ ಸಂಖ್ಯೆ, ಚಂದಾ ನೀಡಿದ ದಿನಾಂಕ ತಿಳಿಸಿರಿ. ಸಾಧ್ಯವಾದರೆ ರಸೀತಿಯ ಜೀರಾಕ್ಸ್ ಪ್ರತಿ (ಅಥವಾ ಮೂಲಪ್ರತಿ)ಯನ್ನು ಕಳಿಸಿರಿ. ಕಾಣಿಕೆಗಳನ್ನು ಸಲ್ಲಿಸಿದವರೂ ತಮ್ಮ ರಸೀತಿ ಸಂಖ್ಯೆ, ಸಲ್ಲಿಸಿದ ಮೊತ್ತದ ವಿವರಗಳನ್ನು ಉದಾಸೀನವಮಾಡದೆ ತಿಳಿಸಬೇಕಾಗಿ ಕೋರುತ್ತೇವೆ.

ವಿಶ್ವಕಲ್ಯಾಣ ಮಿಷನ್ ವಿಶ್ವಸ್ಥ ಮಂಡಳಿ
ಬಸವ ಮಂಟಪ, 24, ಎರಡನೆ ಬ್ಲಾಕು
ಕಾರ್ಡ್‌ರಸ್ತೆ, ರಾಜಾಜಿನಗರ, ಬೆಂಗಳೂರು–560010

ಕಂಪ್ಲಿ ಗ್ರಾಮದಲ್ಲಿ ವಿಶ್ವಧರ್ಮ ಪ್ರವಚನ

ವರದಿ : **ಸೋದರಿ ಮಲ್ಲಮ್ಮ**

ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ
ಜ್ಯೋತಿಯ ಬಲದಿಂದ ತಮಂಧದ ಕೇಡು ನೋಡಯ್ಯ

ತಮವಿಪ್ಪಲ್ಲಿ ಬೆಳಕನ್ನು; ಅಜ್ಞಾನವಿದ್ದಲ್ಲಿ ಜ್ಞಾನವನ್ನು ಒಯ್ಯುವುದು ಬದುಕಿನ ಗುರಿ. ಆದುವೇ ವಿಶ್ವಕಲ್ಯಾಣ ಮಿಷನ್‌ನ ಧ್ಯೇಯವೂ ಸಹ ಮಾತೃಸಂಸ್ಥೆಯ ಸಂಕಲ್ಪದಂತೆ ಜ್ಞಾನದಾಸೋಹ ಕಾರ್ಯವನ್ನಾರಂಭಿಸಿದರು ಪೂಜ್ಯ ಶ್ರೀ ಸದ್ಗುರು ಮಾತೆ ಗಂಗಾದೇವಿಯವರು, ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲ್ಲೋಕಿನ ಕಂಪಲಿ ಗ್ರಾಮದಲ್ಲಿ ದಿ. 12-3-1981 ರಿಂದ 20-4-81ರವರೆಗೆ ಅವ್ಯಾಹತವಾಗಿ ನಡೆದ ಈ ಪ್ರವಚನ ಕಾರ್ಯಕ್ರಮದಲ್ಲಿ ಆಬಾಲವೃದ್ಧರಾದಿಯಾಗಿ ಎಲ್ಲರೂ ಸಮಾವೇಶಗೊಂಡು ಪೂಜ್ಯ ಮಾತೆ ಗಂಗಾದೇವಿಯವರ ಪ್ರವಚನಾಮೃತವನ್ನಾಲಿಸಿ ಪುನೀತರಾದರು.

ವಯಸ್ಸು ಕಿರಿದಾಗಿದ್ದರೂ ಆತ್ಮ ಬಲ ಅಪೂರ್ವವಾಗಿರುವ, ಮಾತು ಮಾಣಿಕ್ಯವಾಗಿರುವ, ಮಾತೃಸಂಸ್ಥೆಯ ಮಹೋನ್ನತ ಗುರಿ ಸಾಧನೆಯಲ್ಲಿ ನಿಷ್ಠೆಯಿಂದ ದುಡಿಯುತ್ತಿರುವ ಪೂಜ್ಯ ಮಾತೆ ಗಂಗಾದೇವಿ ಎಲ್ಲರ ಗೌರವ-ಭಕ್ತಿಗಳಿಗೆ ಪಾತ್ರರಾಗಿರುವ ದಿವ್ಯ ಚೇತನ. ಅವರ ವಾಣಿಯನ್ನಾಲಿಸಲು ಕಾತುರರಾಗಿರುವ ಜನತೆ, ಕಿಕ್ಕಿರಿದು ನೆರೆದು ಕಂಪ್ಲಿಯ ಇತಿಹಾಸದಲ್ಲೇ ಅಭೂತ ಪೂರ್ವ ಎಂಬ ಸಭೆಯನ್ನು ನಿರ್ಮಿಸುತ್ತಿದ್ದರು ಈ 39 ದಿವಸಗಳ ಕಾಲ.

ಪ್ರವಚನದ ಮುಕ್ತಾಯ ಸಮಾರಂಭ 20-4-81ರಂದು ಜರುಗಿತು. ಅಂದಿನ ಸಭಾಧ್ಯಕ್ಷತೆಯನ್ನು ಪುರಸಭಾಧ್ಯಕ್ಷ ಶ್ರೀ ಎಂ. ಪಂಪಣ್ಣನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಸ್. ಅಬ್ದುಲ್ ರಹಮಾನ್ ಸಾಹೇಬರು, ಪ್ರಾಚಾರ್ಯರು, ಸರ್ಕಾರಿ ಪ್ರೌಢಶಾಲೆ, ಹಗರಿ ಬೊಮ್ಮನಹಳ್ಳಿ ಅವರು ಆಗಮಿಸಿದ್ದರು. ಮುಖ್ಯ ಭಾಷಣಕಾರರಾಗಿ ಎಸ್. ಎಂ. ರುದ್ರಯ್ಯ ಸ್ವಾಮಿಯವರು, ಅಧ್ಯಕ್ಷರು, ನಟರಾಜ ಕಲಾ ವಿಜಯ ಸಂಘ ಅವರು ಆಗಮಿಸಿದ್ದರು. ಶ್ರೀ ಎಸ್. ಎಂ. ಶರಣಯ್ಯ ಸ್ವಾಮಿಯವರಿಂದ ಸ್ವಾಗತವಾಯಿತು. ಶ್ರೀ ಕೆ. ಶ್ರೀನಿವಾಸಪ್ಪನವರು ಕಂಪ್ಲಿಯ ಪ್ರಮುಖ ವ್ಯಾಪಾರಿಗಳು, ಹೊಸಪೇಟೆ ತಾಲ್ಲೋಕು ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಡೈರೆಕ್ಟರ್ ಪೂಜ್ಯ ಮಾತಾಜಿಯವರಿಗೆ ಸನ್ಮಾನ ಪತ್ರವನ್ನು ಸಮರ್ಪಿಸಿದರು.

ಮುಕ್ತಾಯ ಸಮಾರಂಭದಂದು ಪೂಜ್ಯ ಗಂಗಾದೇವಿಯವರು ಮಾಡಿದ "ಕಲ್ಯಾಣ ಕ್ರಾಂತಿ" ಪ್ರವಚನ ಅತ್ಯಂತ ಬೋಧಕವೂ, ಹೃದಯ ಸ್ಪರ್ಶಿಯೂ ಆಗಿತ್ತು. ಮಾತೆಯವರು ವಿಶ್ವಕಲ್ಯಾಣ ಮಿಷನ್ ಕೈಗೊಂಡ ಬೃಹತ್ ಯೋಜನೆಗೆ ಶಕ್ತ್ಯಾನುಸಾರ ಧನ ಸಹಾಯ ಸಲ್ಲಿಸಿದ ಎಲ್ಲ ದಾನಿಗಳಿಗೂ, ಕಾರ್ಯಕರ್ತರಿಗೂ, ಕಂಪ್ಲಿಯ ಸದ್ಭಕ್ತ ವೃಂದಕ್ಕೂ ಕೃತಜ್ಞತೆ ಸಲ್ಲಿಸಿದರು.

39 ದಿವಸಗಳು ಅವ್ಯಾಹತವಾಗಿ ನೆತ್ತಿಯ ಪಾತ್ರೆಗೆ ಜ್ಞಾನದೂಟವನ್ನು ಎಡೆ ಮಾಡಿದ ಮಾತೆಯವರನ್ನು ಬೀಳ್ಕೊಡಲೆಂದು ನೆರೆದ ಕಂಪ್ಲಿಯ ಸದ್ಭಕ್ತರು ಅವರಿಗೆ ಸನ್ಮಾನ ಪತ್ರವೊಂದನ್ನು ಸಮರ್ಪಿಸಿದರು. ★

ॐ

ಶ್ರೀ ಗುರು ಬಸವಲಿಂಗಾಯನಮಃ

ಕಂಪ್ಲಿ ಗ್ರಾಮದ ಸಮಸ್ತ ಸದ್ಭಕ್ತ ಮಂಡಳಿಯವರು

ಪೂಜ್ಯ ಶ್ರೀ ಯೋಗಿಣಿ ಮಾತೆ ಗಂಗಾದೇವಿ

(ವಿಶ್ವಕಲ್ಯಾಣ ಮಿಷನ್ ಬೆಂಗಳೂರು)

ಇವರ ಬೀಳ್ಕೊಡುಗೆ ಸಮಾರಂಭದಲ್ಲಿ ಅರ್ಪಿಸಿದ

ಸನ್ಮಾನ ಪತ್ರ

ಪೂಜ್ಯ ಮಾತಾಜಿಯವರೇ,

ಕರ್ನಾಟಕದ ಕೀರ್ತಿ ಧ್ವಜವನ್ನು ದಿಗಂತಕ್ಕೆ ಹಾರಿಸಿ ವಿಜಯನಗರವೆಂದು ಖ್ಯಾತಿಗಳಿಸಿ, ನ್ಯಾಯ, ನೀತಿ, ಧರ್ಮದಿಂದ ರಾಜ್ಯವಾಳಿದ, ಮತ್ತು ಸಾಧು,

ಸಂತರ, ಶರಣರ, ಯೋಗಿಗಳ, ಮಹಾಮಹಿಮರ, ಹಾಗೂ ಮಹಾ ತಪಸ್ವಿಗಳ ಪುಣ್ಯದ ನೆಲೆಬೀಡಾದ, ಹಂಪೆಯ ನಾಡಿನ ನಮ್ಮ ಕಂಪಲಿಗೆ ತಮ್ಮನ್ನು ಬರಮಾಡಿಕೊಂಡು ತಮ್ಮಿಂದ ಇದುವರೆವಿಗೂ ಸತತವಾಗಿ 39 ದಿನಗಳ ಕಾಲ ವಿಶ್ವಮಾನ್ಯ ಶ್ರೀ ಜಗಜ್ಯೋತಿ ಬಸವಣ್ಣನವರ ವಚನಾಮೃತದ ದಿವ್ಯ ಸಂದೇಶವನ್ನು ತಮ್ಮ ಅಮೃತವಾಣಿಯಿಂದ ಸವಿದು ನಾವೆಲ್ಲರೂ ಪುನೀತರಾಗಿದ್ದೇವೆ.

ಮಾನ್ಯ ಮಾತಾಜಿಯವರೇ,

ನಮ್ಮ ನಾಡಿನ ಬೀದರ್ ಜಿಲ್ಲೆಯ ಚಟ್ನಳ್ಳಿಯಲ್ಲಿ ಸದ್‌ಗೃಹಸ್ತ ಮನೆತನದಲ್ಲಿ ಜನಿಸಿ, ಪ್ರಾಪಂಚಿಕ ಇಂಗಿತವನ್ನು ತ್ಯಜಿಸಿ ಪಾರಮಾರ್ಥ ಪಥದಲ್ಲಿ ಮುನ್ನಡೆದು, ದೀಕ್ಷಾಬದ್ಧರಾಗಿ, ಗುರುಸಾಕ್ಷಾತ್ಕಾರ ಪಡೆದು, ಬಂಗಾರವು ವಜ್ರವನ್ನಾಶ್ರಯಿಸುವಂತೆ, ಪ್ರಥಮ ಮಹಿಳಾ ಜಗದ್ಗುರು. ವಿಶ್ವಕಲ್ಯಾಣ ಮಿಷನ್ ಸಂಸ್ಥಾಪಕರೂ, ಹಾಗೂ ಬಸವ ಗಂಗೋತ್ರಿಯ ಚಿತ್ಕಳೆಯಾಗಿ ರಾರಾಜಿಸುವ ಪರಮ ವೈರಾಗ್ಯನಿಧಿ, ಪೂಜ್ಯ ಜಗದ್ಗುರು ಮಾತೆ ಮಹಾದೇವಿಯವರ ಕರಕಮಲ ಸಂಜಾತರಾಗಿ ಚಿಕ್ಕ ವಯಸ್ಸಿನಲ್ಲೇ ಅಧ್ಯಾತ್ಮದ ಆಳವಾದ ಜ್ಞಾನ ಪಡೆದು, ಯೋಗಿಣಿ ಎನಿಸಿ ಪ್ರವಚನ ಕಾಯಕ ಕೈಗೊಂಡು ಅಜ್ಞಾನ, ಅಂಧಶ್ರದ್ಧೆ, ಕಂದಾಚಾರ, ಮೂಢನಂಬಿಕೆಯಿಂದ ತೊಳಲಾಡುವ ಪ್ರಾಪಂಚಿಕ ಜನಸ್ತೋಮಕ್ಕೆ ಪಾರಮಾರ್ಥವೆಂಬ ಬೆಳಕನ್ನು ಬೀರಿ ಸಕಲರೂ ದೈವತ್ವದ ಪಥದಲ್ಲಿ ಸಾಗಲು ಅನುವು ಮಾಡಿಕೊಟ್ಟಿದ್ದೀರಿ. ಶ್ರೀ ಬಸವಣ್ಣನವರ ದಿವ್ಯ ಸಂದೇಶದ ಆಧ್ಯಾತ್ಮ ಜ್ಞಾನವನ್ನು ಸುಲಭವಾಗಿ ಸರಳ ಶೈಲಿಯಲ್ಲಿ, ಆಬಾಲ ವೃದ್ಧರಿಗೂ ಮನಮುಟ್ಟುವಂತೆ ಬೋಧಿಸಿದ್ದೀರಿ. ತಮ್ಮ ವಾಕ್‌ಸ್ಫೂರ್ತಿ, ವಿಷಯ ನಿರೂಪಣೆ, ಜ್ಞಾನಬೋಧೆ ಪ್ರತಿಯೊಬ್ಬರ ಮನಸ್ಸನ್ನು ಆಕರ್ಷಿಸಿ, ಚೇತನಗೊಳಿಸಿದೆ. ವಿಶ್ವಮಾನ್ಯ ಶ್ರೀ ಬಸವಣ್ಣನವರ ದಿವ್ಯ ಸಂದೇಶವನ್ನು ದೇಶ ವಿದೇಶಗಳಲ್ಲಿ ಪ್ರಚಾರ ಮಾಡಲು ಕೈಗೊಂಡ ತಮ್ಮ ವಿಶ್ವಕಲ್ಯಾಣ ಸಂಸ್ಥೆಯ ಕಾರ್ಯ ಗುರುತರವಾದುದು.

ಯೋಗಿಣಿ ಮಾತಾಜಿಯವರೇ,

ತಮ್ಮ ಸಂಸ್ಥೆಯ ಕಾರ್ಯಕ್ರಮದಂತೆ, ತಾವು ಗ್ರಾಮ ಪಟ್ಟಣಗಳಲ್ಲಿ ಸಂಚರಿಸುತ್ತಾ, ಎಷ್ಟೇ ಎಡರು ತೊಡರುಗಳು ಬಂದರೂ ಲೆಕ್ಕಿಸದೆ ದಿಟ್ಟತನದಿಂದ ಧರ್ಮ ಸಂದೇಶವನ್ನು ಮನೆ, ಮನೆಗೆ ಮುಟ್ಟಿಸುವ ಮಹಾತ್ಕಾರ್ಯವನ್ನು ವಹಿಸಿಕೊಂಡು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿರುವ ತಮಗೆ ನಾವೆಲ್ಲರೂ ಚಿರಋಣಿಗಳು.

ಇದುವರೆವಿಗೂ ಧರ್ಮ ಸಂದೇಶದ ಜ್ಞಾನಾಮೃತವನ್ನುಣಿಸಿದ ತಮ್ಮ ಅಗಲುವಿಕೆಯಿಂದ ತಾಯಿ ಕಳೆದುಕೊಂಡ ಕರುವಿನ ಸನ್ನಿವೇಶ ಉಂಟಾಗಿದೆ. ಆದರೆ ನೀವು ಯಾರ ಸೊತ್ತಲ್ಲ. ಪರಮಾತ್ಮನು ದಾರಿ ತೋರಿಸಿದಂತೆ ಸಾಗುವ ನಿಮ್ಮನ್ನು ನಾವೆಲ್ಲರೂ ಹೃತ್ಪೂರ್ವಕವಾಗಿ ಅಭಿನಂದಿಸಿ ಈ ಸನ್ಮಾನ ಪತ್ರವನ್ನು ತಮ್ಮ ಕರಕಮಲಗಳಲ್ಲಿ ಅರ್ಪಿಸುತ್ತೇವೆ ತಮ್ಮ ಈ ಸತ್ಕಾರ್ಯದಿಂದ ವಿಶ್ವಭ್ರಾತೃತ್ವ ಬೆಳೆದು ವಿಶ್ವಕ್ಕೆ ಕಲ್ಯಾಣವಾಗಲಿ-ದಯಾಮಯನಾದ ಪರಮಾತ್ಮನು ಜ್ಞಾನಜ್ಯೋತಿಯನ್ನು ದೇದೀಪ್ಯಮಾನವಾಗಿ ಬೆಳಗಿಸಲು ತಮಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಹಾರೈಸುತ್ತೇವೆ.

ಕಂಪ್ಲಿ
20-4-81

ಸಮಸ್ತ ಸದ್ಭಕ್ತ ಮಂಡಳಿ
ಕಂಪ್ಲಿ (ಬಳ್ಳಾರಿ ಜಿ.)

ವಿಶ್ವಧರ್ಮ ಪ್ರವಚನ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಿಂದ

ವರದಿ : ಶ್ರೀ ದಯಾನಂದ ಸ್ವಾಮಿಗಳು

ಕರ್ನಾಟಕದ ರಾಜಧಾನಿ ಕಲ್ಯಾಣ ನಗರಿ ಎಂದು ಕೀರ್ತಿ ಪಡೆದಿರುವ ಬೆಂಗಳೂರಿನಲ್ಲಿ ದಿ. 13-4-1981 ಸೋಮವಾರದಿಂದ ವಿಶ್ವಧರ್ಮ ಪ್ರವಚನ ಕಾರ್ಯಕ್ರಮ ಆರಂಭವಾಯಿತು. ಮಲ್ಲೇಶ್ವರಮ್ ಬಡಾವಣೆಯ ಸರ್ಕಾರಿ ಕನ್ನಡ ಬಾಲಕರ ಮಾಧ್ಯಮಿಕ ಶಾಲೆಯ ಆಟದ ಮೈದಾನದಲ್ಲಿ ದಿನಾಲೂ ಸಂಜೆ 6-30 ರಿಂದ 8-30ರ ವರೆಗೆ ನಡೆಯಲಿರುವ ವಿಶ್ವಧರ್ಮ ಪ್ರವಚನ ಕಾರ್ಯಕ್ರಮವು ಆರು ವಾರಗಳ ವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಅಂಬೇಡ್ಕರ್, ಮಹಾವೀರ, ಅಕ್ಕಮಹಾದೇವಿ, ಶಿವಾಜಿ, ಬಸವೇಶ್ವರ, ಶಂಕರ, ರಾಮಾನುಜ, ಬುದ್ಧ, ರಾಣಾಪ್ರತಾಪರ ಜಯಂತಿಗಳನ್ನು ಆಚರಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಪ್ರವಚನ ಕಾರ್ಯಕ್ರಮದ ಪ್ರಾರಂಭೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಬೆಂಗಳೂರು ಉತ್ತರ ತಾಲ್ಲೋಕಿನ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶ್ರೀ ಎ. ರಾಮಕೃಷ್ಣರಾವ್‌ರವರು ಆಗಮಿಸಿದ್ದರು. ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳವರ ದಿವ್ಯ ಸನ್ನಿಧಿಯಲ್ಲಿ ನಡೆದ ಪ್ರವಚನದ ಆ ಸಭಾಧ್ಯಕ್ಷತೆಯನ್ನು ಶ್ರೀ ಮ.ನಿ.ಪ್ರ. ಶಿವರುದ್ರಸ್ವಾಮಿ

ಗಳು ಬೇಲಿಮಠ, ಬೆಂಗಳೂರು ಅವರು ವಹಿಸಿದ್ದರು. ಪ್ರಾಸ್ತಾವಿಕ ಭಾಷಣವನ್ನು ಮಾಜಿ ಉಪಶಿಕ್ಷಣ ಸಚಿವರಾದ ಎನ್. ಎಂ. ಕೊಟ್ರಬಸಯ್ಯ ಸೋಗಿಯವರು ಮಾಡಿ ಪ್ರವಚನದ ಉದ್ದೇಶ, ಪರಿಣಾಮಗಳನ್ನು ವಿವರಿಸಿದರು.

ಹದಿನಾಲ್ಕನೆಯ ತಾರೀಖು ಆಚರಿಸಲ್ಪಟ್ಟ ಶ್ರೀ ಅಂಬೇಡ್ಕರ್ ಜಯಂತಿಯ ಕಾರ್ಯಕ್ರಮಕ್ಕೆ ಶಾಸಕ ಸಿದ್ಧಾರ್ಥ ಅರಕೇರಿಯವರು ಆಗಮಿಸಿದ್ದು ಅಂಬೇಡ್ಕರರ ಬಗ್ಗೆ ವಿಶೇಷ ಪರಿಚಯ ಮಾಡಿಕೊಟ್ಟರು. ಹದಿನಾರನೆಯ ತಾರೀಖು ಆಚರಿಸಲ್ಪಟ್ಟ ಮಹಾವೀರ ಜಯಂತಿಗೆ ಮುಖ್ಯ ಭಾಷಣಕಾರರಾಗಿ ಶ್ರೀಮತಿ ಕಮಲಾ ಹಂಪನಾರವರು ಆಗಮಿಸಿದ್ದು ಮಹಾವೀರರ ಜೀವನ ಸಾಧನೆ, ಸಂದೇಶಗಳ ಕುರಿತು ಪರಿಣಾಮಕಾರಿ ಭಾಷಣ ಮಾಡಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕಾಂಗ್ರೆಸ್ ಐ ಅಧ್ಯಕ್ಷರಾದ ಕೆ.ಟಿ. ರಾಠೋಡರು ಬಸವಣ್ಣನವರ ತತ್ತ್ವಗಳ ವಿಶೇಷತೆ ಮತ್ತು ಅವಶ್ಯಕತೆ ಕುರಿತು ಮಾತನಾಡಿದರು.

ದಿ.17-4-1981 ರಂದು ವಿಶೇಷ ಅತಿಥಿಗಳಾಗಿ ಶಿಕ್ಷಣ ಸಚಿವರಾದ ಜಿ.ಬಿ. ಶಂಕರರಾಯರು ಆಗಮಿಸಿದ್ದು, ಪೂಜ್ಯ ಮಾತಾಜಿಯವರ ಪ್ರವಚನ ಎಂಥ ಉತ್ತಮ ಸಾರ್ವಜನಿಕ ಶಿಕ್ಷಣವನ್ನು ನೀಡುತ್ತದೆ ಎಂಬುದನ್ನು ಮನಗಾಣಿಸಿ, ಶಾಲೆ ಕಾಲೇಜುಗಳಲ್ಲಿ ಇಂದು ಕೊಡುವ ಶುಷ್ಕ ಶಿಕ್ಷಣದ ಕೊರತೆಯನ್ನು ಭರತಿ ಮಾಡಲು ಇಂಥ ಪ್ರವಚನಗಳಿಂದ ಸಾಧ್ಯ ಎಂದು ನುಡಿದರು. 19-4-1981 ರಂದು ಜಗನ್ಮಾತಾ ಅಕ್ಕಮಹಾದೇವಿಯ ಜಯಂತಿಯ ಅಂಗವಾಗಿ ಅಕ್ಕಮಹಾದೇವಿಯ ಜೀವನ ಸಾಧನೆ. ಸಂದೇಶ ಕುರಿತು ಪೂಜ್ಯ ಮಾತಾಜಿ ವಿಶೇಷ ಪ್ರವಚನವನ್ನು ಮಾಡಿದರು.

ದಿನ ದಿನಕ್ಕೆ ಅಧಿಕ ಸಂಖ್ಯೆಯಲ್ಲಿ ಜನರನ್ನು ಆಕರ್ಷಿಸುತ್ತಿರುವ ಪ್ರವಚನ ಕಾರ್ಯಕ್ರಮವು ಜ್ಞಾನದ ರಸದೌತಣವಾಗಿದೆ. ★

ಬೇಕಾಗಿದ್ದಾರೆ

ಬಸವ ಭಾರತಿ ವಿದ್ಯಾಲಯದ ವಿದ್ಯಾರ್ಥಿಗಳ ಬಟ್ಟೆಗಳನ್ನು ತೊಳೆದು, ಇಸ್ತ್ರಿ ಮಾಡಿಕೊಡಲು ಮಡಿವಾಳರು ಬೇಕಾಗಿದ್ದಾರೆ. ಗೃಹಸ್ಥರಿಗೆ ಆದ್ಯತೆ, ಶಾಲೆಯ ಸನಿಹದಲ್ಲಿರುವ ಕುಂಬಳಗೋಡು ಗ್ರಾಮದಲ್ಲಿ ಮನೆ ಮಾಡಿಕೊಂಡಿದ್ದು, ತಮ್ಮ ಕಾಯಕ ಮುಂದುವರಿಸಬೇಕು. ಪ್ರಾಮಾಣಿಕತೆ, ದಕ್ಷತೆ ಅವಶ್ಯಕವಿದೆ. ಇಷ್ಟವಿದ್ದವರು ಬರೆದುಕೊಳ್ಳಿ.



ವಿಶ್ವಧರ್ಮ ಪ್ರವಚನ ಪ್ರಾರಂಭೋತ್ಸವ ಕಾರ್ಯಕ್ರಮ
ಎಡದಿಂದ ಬಲಕ್ಕೆ : ಶ್ರೀ ಮ. ನಿ. ಪ್ರ. ಶಿವರುದ್ರ ಸ್ವಾಮಿಗಳು, ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು, ಪೂಜ್ಯ ಶ್ರೀ ದಯಾನಂದ ಸ್ವಾಮಿಗಳು

Regd. No KRNB 312
Licenced to post without pre-payment No. WPP-25



ಬಸವ ಗಂಗೋತ್ರಿ ಮಹಾದ್ವಾರ